ತಾಲ್ಲೂಕು ಪಂಚಾಯಿತಿ ಮತ್ತು ಅದರ ಅಧಿಕಾರಿಗಳ ಮೇಲೆ, ಅಧಿಕಾರಿ ಮತ್ತು ನೌಕರರ ಮೇಲೆ ಮೇಲ್ವಿಚಾರಣೆಯನ್ನು ನಡೆಸತಕ್ಕಂಥ ಕಲಂನ್ನು 152 ಮತ್ತು 193 ರಲ್ಲಿ ತರುವುದಾದರೆ ಅದು ಸರಿಯಾಗುವುದಿಲ್ಲ.

ಶ್ರೀ ಎಂ. ವೈ. ಘೋರ್ಪಡೆ : ಕಾನೂನು ಬಲ್ಲವರು ತಾವು; ಹಾಗೂ ಹಿರಿಯ ಸದಸ್ಯರು, ಈಗ ಪಂಚಾಯಿತಿಗೆ ಸಂಬಂಧಪಟ್ಟಂತೆ 62 ನೇ ಕ್ಲಾಸ್ ಏನು ಇದೆ, ತಾಲ್ಲೂಕು ಮಟ್ಟಕ್ಕೆ ಸಂಬಂಧಪಟ್ಟ 152ರ ಕ್ಲಾಸ್ ಮತ್ತು ಜಿಲ್ಲಾಮಟ್ಟಕ್ಕೆ ಸಂಬಂಧಪಟ್ಟ 193 ಕ್ಲಾಸ್, ಈ ಮೂರು ಕ್ಲಾಸ್‌ನಲ್ಲಿ "ಸೂಪರ್‌ವಿಷನ್ ಅಂಡ್ ಕಂಟ್ರೋಲ್", ಎನ್ನತಕ್ಕ ಪದಗಳನ್ನು ಸ್ಪಷ್ಟವಾಗಿ ನಾವು ಉಪಯೋಗಿಸಿದ್ದೇವೆ. ಅದರಲ್ಲಿ ವ್ಯತ್ಯಾಸ ಮಾಡತಕ್ಕ ಉದ್ದೇಶವಿಲ್ಲ. ರೀತಿಯಾದ ವ್ಯತ್ಯಾಸವನ್ನು ಹುಡುಕತಕ್ಕ ಪ್ರಯತ್ನವನ್ನು ದಯಮಾಡಿ ಮಾಡಬೇಡಿ, ನಿಮಗೆ ಬೇರೆ ಎಷ್ಟೋ ವಿಷಯಗಳು ಹೇಳಲು ಸಾಧ್ಯವಿದೆ, ಅದನ್ನು ಹೇಳಿ ಇಲ್ಲಿ. ಎಲ್ಲಿ ಸಮಸ್ಯೆ ಇಲ್ಲವೋ ಅಲ್ಲಿ ಸಮಸ್ಯೆಯನ್ನು ಹುಟ್ಟಿಸತಕ್ಕ ಪ್ರಯತ್ನವನ್ನು ತಾವು ಮಾಡಬೇಕಾಗಿಲ್ಲ.

ಶ್ರೀ ವೈ. ಕೆ. ರಾಮಯ್ಯ : ಇಲ್ಲದ ಸಮಸ್ಯೆಯನ್ನು ಸೃಷ್ಟಿಮಾಡಿ ವಿವಾದದ ಗೊಂದಲದಲ್ಲಿ ಬದುಕುವ ಪ್ರವೃತ್ತಿ ನನ್ನದಲ್ಲ. ಆದರೆ ವಾಸ್ತವಿಕತೆಯ ಜೊತೆಯಲ್ಲಿ ರಾಜಿಯನ್ನು ಮಾಡಿಕೊಳ್ಳುವಷ್ಟು ಅಶಕ್ತನೂ ಅಲ್ಲ. ನಾನು ಪುನಃ ಹೇಳುತ್ತಿದ್ದೇನೆ, ರಾಜ್ಯದಲ್ಲಿ ಶೇಕಡ 50 ಪರ್ಸೆಂಟ್ ಜನರಿಗೆ ಓದುವುದಕ್ಕೆ ಬರುತ್ತದೆ. ಸೆಕ್ಷನ್ 62(ಸಿ)ನಲ್ಲಿ ಗ್ರಾಮಪಂಚಾಯತಿ ಚುನಾಯಿತ ಅಧಿಕಾರಿಗಳಿಗೆ ಕೊಟ್ಟಿರುವಷ್ಟು ಅಧಿಕಾರವನ್ನು ಜಿಲ್ಲಾ ಪರಿಷತ್ತಿನ ಮತ್ತು ತಾಲೂಕುಮಟ್ಟದ ಚುನಾಯತಿ ಪ್ರತಿನಿಧಿಗಳಿಗೆ ಕೊಟ್ಟಿಲ್ಲ. ಎರಡನೇಯದಾಗಿ ಹಿಂದೆ ಜನತಾಪಕ್ಷ ತಂದಿದ್ದಂಥ ವ್ಯವಸ್ಥೆಯಲ್ಲಿ ಚುನಾಯತಿ ಪ್ರತಿನಿಧಿಗಳಿಗೆ ಇದ್ದಂಥ ನಿರ್ವಾಹಕ ಜವಾಬ್ದಾರಿಯನ್ನು ಕಿತ್ತುಹಾಕಿದ್ದಾರೆ. ಈ ನನ್ನ ವಾದ ಸರಿಯೋ, ಅಥವಾ ಸರಿಯಿಲ್ಲವೋ ಎಂಬುದನ್ನು ಕೇವಲ ಇಲ್ಲಿ 225 ಜನ ಕೂತು ಕೇಳುವುದಲ್ಲ, ನಾಳೆ ನನ್ನ ಸ್ನೇಹಿತರು ಪತ್ರಿಕೆಗಳಲ್ಲಿ ಹೊರಗಡೆ ಓದಿ ರಾಮಯ್ಯ ಹೇಳಿರತಕ್ಕದ್ದು ಸರಿಯೇ, ಅಥವಾ ಇಲ್ಲವೇ ಎಂಬುದನ್ನು ನೋಡುತ್ತಾರೆ. ಅದ್ದರಿಂದ ನಾನು ಪುನಃ ಹೇಳುತ್ತೇನೆ, ಮಂಡಲ್ ಪಂಚಾಯತಿ ಅಧ್ಯಕ್ಷರಿಗೆ, ಚುನಾಯಿತ ಪ್ರತಿನಿಧಿಗಳಿಗೆ ಕೊಟ್ಟಿರುವಷ್ಟು ಅಧಿಕಾರವನ್ನು ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿನ ಚುನಾಯತಿ ಪ್ರತಿನಿಧಿಗಳಿಗೆ ಕೊಟ್ಟಿಲ್ಲ ಎನ್ನತಕ್ಕದ್ದು ನನ್ನ ವಾದ. ಆ ಅಧಿಕಾರವನ್ನು ತಾವು ಮೊಟಕು ಮಾಡಿದ್ದೀರಿ. ನಿನ್ನೆ ಮಾನ್ಯ ಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ. ಅದರಲ್ಲಿ ನನಗೆ ಸ್ವಲ್ಪಮಟ್ಟಿಗೆ ನೋವಾಗುವಂಥ ಸಂಗತಿ ಎಂದರೆ, ಹಿಂದೆ ಈ ವ್ಯವಸ್ಥೆಯ ಕೆಳಗೆ ಚುನಾವಣೆಗಳ ನ್ನುನಡೆಸಿ ಜನತೆಯ ಕೈಗೆ ಅಧಿಕಾರವನ್ನು ಕೊಟ್ಟು ಪಡೆದ ಅನುಭವದ ಆಧಾರದಮೇಲೆ ಕೆಲವು ಬದಲಾವಣೆಗಳನ್ನು ತರಬೇಕಾಯಿತೆಂದು ತಾವು ಹೇಳುತ್ತಿದ್ದೀರಿ. ಅಂದರೆ ಜನಪ್ರತಿನಿಧಿಗಳಿಗೆ ಅಧಿಕಾರವನ್ನು ಕೊಟ್ಟರೆ ಅದನ್ನು ಚಲಾಯಿಸುವಂಥೆ ಅಧಿಕಾರ ಇಲ್ಲ, ಬುದ್ಧಿ ಇಲ್ಲ, ಎಲ್ಲಕ್ಕಿಂತ ಹೆಚ್ಚಾಗಿ ಅವರಿಗೆ ನೈತಿಕ ಬಲ ಇಲ್ಲ ಎನ್ನತಕ್ಕ ವಾದವನ್ನು 1985 ರಲ್ಲಿ ಇದೇ ಸದನದಲ್ಲಿ ಒಬ್ಬಮಾನ್ಯ ಸದಸ್ಯರು ಹೇಳಿದಂಥ ವಾದ ಇದೆ. ನನ್ನಲ್ಲಿ ಇದರ ಬಗ್ಗೆ ರಿಕಾರ್ಡ್ ಇದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ಕೊಡುವ ಸಂದರ್ಭದಲ್ಲೂ ಕೂಡ ಬ್ರಿಟೀಷರು ಹೇಳಿದ್ದರು. ಆದರೆ ಒಂದು ಮಾತನ್ನು ತಮ್ಮಲ್ಲಿ ಕೇಳಬಯಸುತ್ತೇನೆ. ಈ ರಾಜ್ಯದ ಯಾವುದೇ ಒಂದು ಜಿಲ್ಲಾ ಪರಿಷತ್ತಿನ ಅಧ್ಯಕ್ಷನಮೇಲೆ ಅದು ಹಾಸನದ ಶಿವರಾಮು ಇರಬಹುದು, ಅಥವಾ ಚಿತ್ರದುರ್ಗದ ಬಕ್ಕೇಶ್ ಇರಬಹುದು, ಬೇರೆ ಯಾರೇ ಆಗಲಿ

ಅಧ್ಯಕ್ಷನಮೇಲೆ ಒಂದೇ ಒಂದು ಅಧಿಕಾರದ ದುರುಪಯೋಗದ ಆಪಾದನೆ ಇದೆಯೆ? ಭ್ರಷ್ಟಾಚಾರದ ಆಪಾದನೆ ಇದೆಯೆ ? ತಾವೇ ಹೇಳಿದ ಈ ವ್ಯವಸ್ಥೆಯ ವಿಫಲತೆಯಿಂದ ತಾವು ಯಾವ ಬುದ್ಧಿಯನ್ನು ಕಲಿತುಕೊಂಡಿರಿ? ಜನಪ್ರತಿನಿಧಿಗಳಿಗೆ ಅಧಿಕಾರವನ್ನು ಕೊಡುವುದರಿಂದ, ಅವರಿಗೆ ಅಧಿಕಾರವನ್ನು ಉಪಯೋಗಿಸುವುದಕ್ಕೆ ಬರುವುದಿಲ್ಲ. ಅವರಿಗೆ ಬುದ್ಧಿ ಇಲ್ಲ, ಅವರಿಗೆ ನೈತಿಕ ಶಕ್ತಿ ಇಲ್ಲವೆಂದು ಹೇಳುವಂಥೆ ವಾದ ಏನಿದೆ, ಗ್ರಾಮೀಣ ಬದುಕಿನಿಂದ ಬಂದಿರುವ ನಮಗೆ ನಮ್ಮ ಜನರ ಬಗ್ಗೆ ಆಡುವಂಥ ಮಾತುಗಳು ನಮಗೆ ನೋವನ್ನು ತರುತ್ತದೆ. ಈ ವ್ಯವಸ್ಥೆಯಲ್ಲಿ ಕಳೆದ ಚುನಾವಣೆಯನ್ನು ನಡೆಸಿ We gave an absolute power to the chairman, the court has upheld that.The court upheald that the Zilla Parishat President is the executive Head of the Zilla Parishat. ಅಂತ ಬಹುಶ : ಮುಂದೆ ನಿಮ್ಮ ಪಕ್ಷದವರೇ ಗೆದ್ದು ಬಂದಾಗ ಅವರೇ ಹೇಳುತ್ತಾರೆ, ಜನರಿಗೆ ಅಧಿಕಾರವನ್ನು ಕೊಡದಿದ್ದರೆ ನಿಮ್ಮ ಪಕ್ಷವೇ ಗೆದ್ದು ಬರುತ್ತದೋ, ನಮ್ಮ ಪಕ್ಷವೇ ಗೆದ್ದು ಬರುತ್ತದೋ ಗೊತ್ತಿಲ್ಲ. ಹೈ-ಕೋರ್ಟಿಗೆ ಹೋಗಿ absolute power ನ್ನು ಅವರ ಕೈಗೆ ಕೊಟ್ಟಾಗಲೂ ಕೂಡ, ಈ ರಾಜ್ಯದ ಆಡಳಿತ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತರುವಾಗ ಅಧಿಕಾರ ದುರುಪಯೋಗ ಆದ ಒಂದೇ ಒಂದು ನಿದರ್ಶನ ಇಲ್ಲ. ಒಂದೇ ಒಂದು ಭ್ರಷ್ಟಾಚಾರದ ನಿದರ್ಶನವಿಲ್ಲ. ಲಂಚಗುಳಿತನದ ನಿದರ್ಶನವಿಲ್ಲ. ಅಂದಮೇಲೆ ನೀವು ಯಾವ ಪಾಠವನ್ನು ಕಲಿತಿರಿ? ಗುಲ್ಬರ್ಗಾದಲ್ಲಿ ಎಲ್ಲೋ ಒಂದು ಕಡೆ ಆಯಿತೆಂದು ಮಾನ್ಯ ಸದಸ್ಯರು ನಿನ್ನೆ ಹೇಳುತ್ತಿದ್ದರು.

ಡಾ : ಎಸ್.ಬಿ.ನಂಜಪ್ಪ : ಮಾನ್ಯ ಅಧ್ಯಕ್ಷರೇ, ಈಗ ಪಂಚಾಯಿತ್ ಮತ್ತು ಜಿಲ್ಲಾ ಪರಿಷತ್ತುಗಳು ಯಾವರೀತಿ ಕಾರ್ಯನಿರ್ವಹಣೆ ಮಾಡುತ್ತಿವೆ ಎಂಬುದು ಕರ್ನಾಟಕ ರಾಜ್ಯದ ಪ್ರತಿಯೊಬ್ಬ ನಾಗರೀಕನಿಗೂ ಗೊತ್ತಾಗಿದೆ. ಅದರಮೇಲೆ ಮತ್ತೆ ತಾವು ವಿಶ್ಲೇಷಣೆ ಮಾಡುವುದಾಗಲೀ ಸಮರ್ಥನೆ ಮಾಡಿ ಕೊಳ್ಳುವುದಾಗಲೀ ಪ್ರಯೋಜನವಾಗುವುದಿಲ್ಲ. ಇದರಿಂದಾಗಿ ಹಳ್ಳಿಗಳ ಗತಿ ಏನಾಗಿದೆ, ಯಾವ ಯಾವ ಮಟ್ಟದಲ್ಲಿ ಏನೇನಾಗಿದೆ ಎಂಬುದು ನಮಗೆ, ನಿಮಗೆ,ಪ್ರತಿಯೊಬ್ಬರಿಗೂ ಗೊತ್ತದೆ. ಆದರ ಬಗ್ಗೆ ನಾವು ಇಲ್ಲಿ ಯೋಚನೆ ಮಾಡಬೇಕಾಗಿಲ್ಲ. ಜನರಿಗೆ ಏನಾದರೂ ಒಳ್ಳೆಯದನ್ನು ಮಾಡಬೇಕಾದರೆ ಅದರ ಬಗ್ಗೆ ಯೇಚನೆ ಮಾಡಿ ಒಳ್ಳೆಯ ಸಲಹೆಗಳನ್ನು ಕೊಡಿ. ಕಳೆದ 5 ವರ್ಷಗಳಲ್ಲಿ ಆಗಬಾರದ್ದೆಲ್ಲಾ ಆಗಿ ಹೋಗಿದೆ. ಅದರ ಬಗ್ಗೆ ಮತ್ತೆ ಇಲ್ಲಿ ಸಮರ್ಥನೆ ಮಾಡಿಕೊಳ್ಳುವುದು ಬೇಡ.

ಶ್ರೀ ಎಂ.ವಿ.ವೆಂಕಟಪ್ಪ : ನಮ್ಮ ಮಂಡಲ್‌ದಲ್ಲಿ ನಮ್ಮ ಪ್ರಧಾನರು ಮೂರುವರೆ ಲಕ್ಷ ರೂಪಾಯಿಗಳನ್ನು ತಿಂದು ರಾಜೀನಾಮೆಯನ್ನು ಕೊಟ್ಟುಬಿಟ್ಟರು, ಅದಕ್ಕೆ ಏನು ಮಾಡುತ್ತೀರಿ?

ಶ್ರೀ. ಹೆಚ್.ಏಕಾಂತಯ್ಯ : ಈಗಿನ ಮಂತ್ರಿ ಮಂಡಲದ ಸರಸ್ಯರುಗಳ ಮೇಲೆ, ಈಹಿಂದೆ ಮಂತ್ರಿಗಳಾಗಿದ್ದವರಮೇಲೆ, ಶಾಸಕರಮೇಲೆ ಭ್ರಷ್ಟಾಚಾರದ ಆರೋಪಗಳಿಲ್ಲವೇ? ಅವರನ್ಯಾಕೆ ....

(ಗೊಂದಲ)

ಡಾ.ಎಸ್.ಬಿ.ನಂಜಪ್ಪ : ಏಕಾಂತಯ್ಯನವರೆ, ಮಾನ್ಯ ರಾಮಯ್ಯನವರು ಯಾವುದೂ ಇಲ್ಲವೆಂದು, ಹೇಳಿದರು ಆದರೆ ನಾವು ಕೌಂಟ್‌ಲೆಸ್ ಇದ್ದಾವೆ ಎಂದು ಹೇಳುತ್ತಿದ್ದೇವೆ.

ಶ್ರೀ ಎಂ.ವೈ.ಘೋರ್ಪಡೆ : ಸಾಕಷ್ಟು ಅಕ್ರಮಗಳನ್ನು ಮಾಡಿರುವುದನ್ನು ನಾನು ಪಟ್ಟಿಮಾಡಿ ಇಟ್ಟಿದ್ದೇನೆ. ಅದನ್ನು ಬಿಡಿಸಿ ಬಿಡಿಸಿ ಹೇಳಿದರೆ ಸ್ವಲ್ಪ ತಮಗೆ ಸಿಟ್ಟುಬರಬಹುದೆಂದು ಆ ಮಾತನ್ನು ಹೇಳುತ್ತಿಲ್ಲ. ಅಕ್ರಮ ಸಾಕಷ್ಟು ನಡೆದಿದೆ ಅಕ್ರಮ ಮಾಡಲಿಕ್ಕೆ ಬಿಟ್ಟರೆ ಪಂಚಾಯತ್ ರಾಜ್‌ಗೆ ಕೊಡಲಿ ಪೆಟ್ಟುಬಿದ್ದಂತಾಗುತ್ತದೆ, ಆ ರೀತಿ ಮಾಡಲಿಕ್ಕೆ ನಾವು ಹೋಗಬಾರದು..

ಶ್ರೀ ವೈ.ಕೆ.ರಾಮಯ್ಯ : ಸನ್ಮಾನ್ಯ ಅಧ್ಯಕ್ಷರೇ, ಅವರೇ ಅಪ್ಪಣೆ ಕೊಡಿಸಿದ್ದಾರೆ, ಚರ್ಚೆಯಾಗಲಿ ಎಂದು ಅದಕ್ಕಾಗಿ ಯಾವುದೇ ಒಂದು ವ್ಯವಸ್ಥೆಯಲ್ಲಿ ನಾನು ನನ್ನ ಜಿಲ್ಲಾಪರಿಷತ್ತಿನ ಅಧ್ಯಕ್ಷರ ಬಗ್ಗೆಯಾಗಲಿ ಅಥವಾ ಯಾರಬಗ್ಗೆ ಆಗಲೀ ಇಲ್ಲ ಎಂದು ಹೇಳಿದ್ದೇನೆ. ಮಂಡಲ್‌ಪಂಚಾಯತ್ ಅಧ್ಯಕ್ಷರ ಬಗ್ಗೆ ಅಲ್ಲಿನ ಸದಸ್ಯರಬಗ್ಗೆ ಇರಬಹುದು, ನಾನು ಇಲ್ಲವೆಂದು ಹೇಳುವುದಿಲ್ಲ. ಯಾವುದೇ ಒಂದು ವ್ಯವಸ್ಥೆಯೂ ಪರಿಪೂರ್ಣವಿಲ್ಲ. ಆದರೆ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತರುವಾಗ ಅನುಷ್ಠಾನಕ್ಕೆ ತರುವಾಗ ನಾವು ಸೋಲುತ್ತೇವೆ. ನಾನು ಅದಕ್ಕೇ ಹೇಳಿದ್ದು, ಈಗ ತಂದಿರುವ ವಿಧೇಯಕವನ್ನು ಸ್ವಾಗತ ಮಾಡುತ್ತೇನೆಂದು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕು. ಆದರ ಈ ಒಂದು ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತರುವಾಗ, ಅನುಷ್ಠಾನಕ್ಕೆ ತರುವಾಗ ನಾವು ವಿಫಲರಾಗುತ್ತೇವೆ. ಸನ್ಮಾನ್ಯ ಅಧ್ಯಕ್ಷರೆ, ಜನತಾ ಪ್ರತಿನಿಧಿಗಳಷ್ಟೆ ಭ್ರಷ್ಟತನಮಾಡಿದ್ದಾರೆ, ಮಂಡಲ್‌ಪಂಚಾಯತ್‌ನ ಸದಸ್ಯರೊಬ್ಬರು ಮೂರುವರೆ ಲಕ್ಷ ರೂಪಾಯಿಗಳನ್ನು ತಿಂದಿದ್ದಾನೆಂದು ನಮ್ಮಸ್ನೇಹಿತರು ಹೇಳಿದರು. ಸ್ವಾಮಿ, ಆಡಳಿತದ ಅತಿ ಎತ್ತರದಲ್ಲಿ ಕುಳಿತಿರುವವರು ಮೇಲೆ ಕುಳಿತಿರುವವರು ಎಷ್ಟು ಸಾವಿರ ಕೋಟಿ ಭ್ರಷ್ಟತನ ಮಾಡಿದ್ದಾರೆ ಸ್ವಾಮಿ? ಸನ್ಮಾನ್ಯ ಏಕಾಂತಯ್ಯನವರೇ, ಎಷ್ಟು ಸಾವಿರ ಅದು ಎಂದು ದಯವಿಟ್ಟು ಹೇಳುತ್ತೀರಾ? 45 ಸಾವಿರ ಕೋಟಿನಾ ? ಇಲ್ಲ, 6 ಸಾವಿರ ಕೋಟಿನಾ ? ಮಂಡಲಪಂಚಾಯತ್ ಅಧ್ಯಕ್ಷ ಮೂರು ಲಕ್ಷ ಮಾಡಿಬಿಟ್ಟ. ಅವರು ಹಳ್ಳಿಯವರು, ಪಾಪ ಅವರಿಗೆ ಅಷ್ಟೇ ಸಿಕ್ಕುವುದು, ಅಲ್ಲಿ ಮೇಲ್ಗಡೆ 6 ಸಾವಿರ ಕೋಟಿ ಅವ್ಯವಹಾರವಾಗಿದೆ, ಅಂದರೆ ಆ ವ್ಯವಸ್ಥೆಯನ್ನು ಕಿತ್ತುಹಾಕುತ್ತೀರಾ ? ಸ್ವಾಮಿ, ರಾಜ್ಯಮಟ್ಟದಲ್ಲಿ ಇವತ್ತು ಸುಮಾರು 30 ಜನ ನಿಮ್ಮ ಹಿರಿಯ ಅಧಿಕಾರಿಗಳ ಮೇಲೆ ಭ್ರಷ್ಟಾಚಾರದ ಆರೋಪದ ಕೇಸ್‌ಗಳು ಇದ್ದಾವೆ. ಅಂದರೆ ಅವರುಗಳನ್ನು ಕಿತ್ತುಹಾಕುತ್ತೀರಾ ಸ್ವಾಮಿ, ಹೇಳಿ ನನ್ನ ಹಳ್ಳಿಯವನು ಒಬ್ಬ ಮೂರು ಲಕ್ಷ ದುಡ್ಡು ತಿಂದುಹಾಕಿಬಿಟ್ಟಿದ್ದಾನೆ ಎನ್ನುವುದು ನಮ್ಮ ವೆಂಕಟಪ್ಪನವರ ಕಣ್ಣಿಗೆ ಬೀಳುವುದಾದರೆ ಈ ರಾಷ್ಟ್ರದ ವ್ಯವಸ್ಥೆಯಲ್ಲಿ ಮೇಲ್ಗಡೆ ಕುಳಿತಿರುವವರು ಸಾವಿರಾರು ಕೋಟಿ ರೂಪಾಯಿಗಳನ್ನು ನುಂಗಿ ನೀರು ಕುಡಿಯುತ್ತಿದ್ದರಲ್ಲಾ, ಅವರಿಂದಾಗಿ ಈ ವ್ಯವಸ್ಥೆಯನ್ನೇ ಕಿತ್ತುಹಾಕುತ್ತೀರಾ ?

ಶ್ರೀ ಕೆ. ಎಸ್.ಕಾಳಮರಿಗೌಡ : ಅಂದರೆ ಅವರೂ ತಿನ್ನಬಹುದು, ಇವರೂ ತಿನ್ನಬಹುದು ಅಂತಾನಾ ? ಮಾನ್ಯ ವೈ.ಕೆ.ರಾಮಯ್ಯನವರೇ, ನಿಮ್ಮ ವಾದ ಅವರೂ

ಸಹ ತಿಂದರೆ ಪರವಾಗಿಲ್ಲವೆಂದು ಹೇಳುತ್ತೀರಾ ? ಎಲ್ಲರಿಗೂ ಲೈಸನ್ಸ್ ಕೊಟ್ಟುಬಿಡೋಣ, ಯಾರು ಎಷ್ಟು ಬೇಕಾದರೂ ದೋಚಿಕೊಳ್ಳಬಹುದುದೆಂದು ಹೇಳುತ್ತೀರಾ ?

ಶ್ರೀ ವೈ.ಕೆ.ರಾಮಯ್ಯ : ನಾನು ಅದಕ್ಕೇ ಹೇಳುತ್ತಿರುವುದು. ಯಾವುದೇ ಒಂದು ವ್ಯವಸ್ಥೆಯಲ್ಲಿ ....

Sri. M.Y Ghorpade : I want to make it very clear on behalf of the Government that we cannot decentralise corruption merely because there is corruption at other levels. There should not be corruption at any level. Corruption at one level cannot justify the corruption at lower level. Corruption at lower level will kill Panchayat Raj system. Therefore, we should make every effort to see that corruption is checked at the gross- root level. I want to say this - That I can preside as a Minister over decentralisation of powers, not on disintegration of administration, or decentralisation of corruption, I won't do it....

ಶ್ರೀ ವೈ.ಕೆ.ರಾಮಯ್ಯ : ಮಾನ್ಯ ಅಧ್ಯಕ್ಷರೇ, ನಾನು ಕರಪ್ಷನನ್ನು ಲೀಗಲೈಸ್ ಮಾಡಬೇಕೆಂದಾಗಲೇ ಅಥವಾ ಕರಪ್ಷನನ್ನು ಇರಬೇಕೆಂದು ಪ್ರತಿಪಾದನೆ ಮಾಡುವುದಾಗಲೀ ಮಾಡುತ್ತಿಲ್ಲ. ಯಾವುದೇ ಒಂದು ವ್ಯವಸ್ಥೆಯಲ್ಲಿ ಎಲ್ಲವೂ ಪರಿಪೂರ್ಣವಾಗಿಲ್ಲ. ಎಲ್ಲ ವ್ಯವಸ್ಥೆಯಲ್ಲೂ ಇಂಥ ನ್ಯೂನತೆಗಳಿದ್ದಾವೆ. ಆ ನ್ಯೂನತೆಗಳನ್ನೇ ಆಧಾರವಾಗಿಟ್ಟುಕೊಂಡು ಈ ವ್ಯವಸ್ಥೆಯನ್ನೇ ಕೊಲ್ಲುವಂಥ ಪ್ರಯತ್ನ ಮಾಡಬೇಡಿ. ಜನಪ್ರತಿನಿಧಿಗಳಿಗೆ ಹೆಚ್ಚು ಅಧಿಕಾರವನ್ನು ಕೊಡುವುದರಿಂದ ಭ್ರಷ್ಟತನ ಆಗುತ್ತದೆ ಎನ್ನುವುದು ನಿಮ್ಮ ವಾದ ಆದರೆ ನನ್ನದು ಅಭ್ಯಂತರವಿಲ್ಲ. ಆದರೆ ನನ್ನ ವಾದ ಇಷ್ಟೇನೆ, ಇವತ್ತು ಮೇಲ್ಗಡೆ ದೊಡ್ಡದಾಗಿ ಹೇಗೆ ಭ್ರಷ್ಟಾಚಾರ ಇದೆಯೋ, ಅದೇ ರೀತಿ ಜನಪ್ರತಿನಿಧಿಗಳಲ್ಲೂ ಸ್ವಲ್ಪ ಭ್ರಷ್ಟಾಚಾರವಿರಬಹುದು. ಆದರೆ ಅದೇ ಒಂದು ವಾದವನ್ನು ಮುಂದಿಟ್ಟುಕೊಂಡು ದಯಮಾಡಿ ಅವರ ಅಧಿಕಾರವನ್ನು ಕಿತ್ತುಹಾಕಬೇಡಿ ಎನ್ನುವುದೇ ನನ್ನ ವಾದ. ಇಷ್ಟು ಹೇಳಿ ಮತ್ತೊಂದು ಸಾರಿ ಹೇಳುತ್ತೇನೆ - ಹಿಂದೆ ಈ ವ್ಯವಸ್ಥೆಯಲ್ಲಿ ಜನ ಪ್ರತಿನಿಧಿಗಳಿಗೆ ಇದ್ದಂಥ ಅಧಿಕಾರವನ್ನು ಮೊಟಕು ಮಾಡಿದ್ದಾರೆ. ಮುಂತೆ ಸಂವಿಧಾನ ತಿದ್ದುಪಡಿಯಲ್ಲಿ ಹಿಂದೆ ಇದ್ದ ವ್ಯವಸ್ಥೆಯ ವಿಫಲತೆ ಮತ್ತೊಂದು ಕಾರಣವನ್ನು ಗುರುತಿಸಿದ್ದಾರೆ. ಆ ಕಾರಣವೇನೆಂದರೆ, ವಂಚಿತ ವರ್ಗದವರಿಗೆ ಪರಿಶಿಷ್ಟ ಜಾತಿ ಮತ್ತು ಪರಿಷ್ಟ ವರ್ಗದವರಿಗೆ ಹಿಂದುಳಿತ ವರ್ಗದವರಿಗೆ ಸಾಕಷ್ಟು ಪ್ರಾತಿನಿಧ್ಯ ಈ ಆಡಳಿತ ವ್ಯವಸ್ಥೆಯಲ್ಲಿ ಸಿಗುತ್ತಿರಲಿಲ್ಲ. ಆ ದೃಷ್ಟಿಯಿಂದ ಈ ವ್ಯವಸ್ಥೆ ಎಷ್ಟು ಕಾರ್ಯರೂಪಕ್ಕೆ ಬರಬೇಕಾಗಿತ್ತೋ ಅಷ್ಟು ಕಾರ್ಯರೂಪಕ್ಕೆ ಬರಲಿಲ್ಲವೆಂಬ ಈ ವಾದವನ್ನು ಒಪ್ಪಿಕೊಂಡರೆ ಈ ಮೀಸಲಾತಿ ಪದ್ಧತಿಗೆ ಯಾರು ಶಕ್ತರಲ್ಲಮೋ, ಯಾರು ತುಳಿತಕ್ಕೆ ಒಳಗಾಗಿರುತ್ತಾರೋ ಅಂಥವರನ್ನು ಮುಖ್ಯ ವಾಹಿನಿಯಲ್ಲಿ ಕರೆದುಕೊಂಡು ಹೋಗಬೇಕೆಂಬುದ್ದೇಶದಿಂದ ಈ ಮೀಸಲಾತಿಯನ್ನು ಜಾರಿಗೆ ತಂದಿದ್ದೇವೆ. ಈಗಾಗಲೇ ಈ ವಿಷಯದಲ್ಲಿ ಸಾಕಷ್ಟು ಚರ್ಚೆ ಯಾಗಿದೆ. ನನ್ನ ಅಭಿಪ್ರಾಯವನ್ನು ಮಂತ್ರಿಗಳ

ಗಮನಕ್ಕೆ ತರುವುದು ಇಷ್ಟೆ, ನಿಮ್ಮ ಸಂವಿಧಾನ ತಿದ್ದುಪಡಿಯಲ್ಲಿ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಆದನ್ನು ಅನುಸರಿಸಿ ಆ ಒಂದು ಮಂಡಲ್ ಪಂಚಾಯಿತಿ ಅಥವಾ ಜಿಲ್ಲಾ ಪರಿಷತ್ತು ವ್ಯಾಪ್ತಿಯಲ್ಲಿ ಪರಿಶಿಷ್ಟ ವರ್ಗಕ್ಕೆ ಮತ್ತು ಪರಿಶಿಷ್ಟ ಜಾತಿಯವರಿಗೆ ಮೀಸಲಾತಿ ಇಡಬೇಕೆಂಬ ನಿರ್ದೇಶನ ಕೊಟ್ಟಿದೆ. ಅದರ ಜೊತೆಗೆ ಈ ಸಂವಿಧಾನದಲ್ಲಿ ಕೊನೇಪಕ್ಷ 18 ಭಾಗವನ್ನು ಕಾಯ್ದಿರಿಸಬೇಕೆಂಬ ಒಂದು ಪ್ರಸ್ತಾಪ ಮಾಡಿದ್ದಾರೆ. ತಮ್ಮಲ್ಲಿ ಇಷ್ಟೇ ಪ್ರಾರ್ಥನೆ. ನೀವು ಇದರಲ್ಲಿ ಯಾವುದಕ್ಕಾದರೂ ಅಂಟಿಕೊಳ್ಳಬೇಕಾಗುತ್ತದೆ. ಒಂದು ಕಡೆ 5 ಪರ್ಸೆಂಟ್ ಇರುವ ಕಡೆ 18 ಪರ್ಸೆಂಟ್ ರಿಸರ್ವ್ ಮಾಡುತ್ತಿದ್ದೀರಿ. ಅದೇ ಜನಸಂಖ್ಯ ಆಧಾರದ ಮೇಲೆ ಮಾಡುವಾಗ 38 ಪರ್ಸೆಟ್ ಬರುತ್ತದೆ. 28 ಪರ್ಸೆಂಟ್ ಏನು ಪರಿಶಿಷ್ಟರ ಜನಸಂಖ್ಯ ಇದೆ ಅದಕ್ಕಂತ ಜಾಸ್ತಿಯಾಗುತ್ತದೆ. ಅಂಥ ಸಂದರ್ಭ ಬಂದಾಗ ಕಾನೂನು ತೊಡಕಿನಿಂದ ತೊದರೆಯಾಗಬಹುದು. ದಯವಿಟ್ಟು ಇದನ್ನು ಎಕ್ಸಾಮಿನ್ ಮಾಡಿ. ಅಧಿಕಾರವನ್ನು ಹಂಚಿಕೊಳ್ಳುವಾಗ ಕಾನೂನಿಗಿಂತ ಇಚ್ಛಾಶಕ್ತಿ ಬೇಕಾಗುತ್ತದೆ. ನನ್ನ ಕ್ಷೇತ್ರದಲ್ಲಿ 21 ಜನರಲ್ಲಿ 19 ಜನ ಒಕ್ಕಲಿಗರು ಗೆದ್ದಿದ್ದರು, ಒಬ್ಬನೇ ಮುಸ್ಲಿಂ ಗೆದ್ದಿದ್ದ. ಆತನನ್ನೇ ನಾವು ಪ್ರಧಾನ ಎಂದು ಮಾಡಿದೆವು. ಇನ್ನೊಂದು ಕಡೆ 18 ಜನ ಒಕ್ಕಲಿಗರು, ಒಬ್ಬ ಕುರುಬಗೆದ್ದಿದ್ದ. ಅಲ್ಲಿ ಅವನನ್ನೇ ಪ್ರಧಾನ ಎಂದು ಮಾಡಿದೆವು. ಆದುದರಿಂದ ಮುಂದಾಳತ್ವ ವಹಿಸಿಕೊಳ್ಳುವ ನಮಗೆ ಅಧಿಕಾರ ಹಂಚಿಕೊಳ್ಳುವ ಇಚ್ಛಾಶಕ್ತಿ ಬೇಕು. ಇದು ಪತ್ರಿಕೆಯಲ್ಲೂ ಬಂದಿದೆ. ಗ್ರಾಮ ಪಂಚಾಯಿತಿಗಳಿಗೆ, ಜಿಲ್ಲಾ ಪರಿಷತ್ತುಗಳಿಗೆ ಅಧಿಕಾರ ಕೊಡುವ ಸಂದರ್ಭದಲ್ಲಿ ಹೇಗಿರಬೇಕೆಂಬ ಬಗ್ಗೆ ನಿಮ್ಮ ಸಂವಿಧಾನ ತಿದ್ದುಪಡಿಯಲ್ಲಿ ಪ್ರಮುಖವಾದ ಒಂದು ವಾಕ್ಯ ಇದೆ. Devolution by the State Legislatures powers and responsibilities.

Devolution by the State Legislatures powers and responsibilities upon the Panchayats.

ಬಹುಶ : ನನ್ನನ್ನು ಸೇರಿಸಿದ ಹಾಗೆ, ಶಾಸಕರು, ಮಂತ್ರಿಗಳು ಈ ವಿಷಯದಲ್ಲಿ ತೆರದ ಮನಸ್ಸಿನಿಂದ ಇರಬೇಕಾಗುತ್ತದೆ. We are Legislators. I forced to read the definition of the Legislature, in the strict sense, the Legislature should confine for making laws. That is the definition . ನಾವು ಏನು ಪರಿಪಾಲನೆ ಮಾಡುತ್ತಿದ್ದೇವೆ, ಏನು ಪರಿಸ್ಥಿತಿ ಇದೆ ಅದು ಬೇರೆ ವಿಚಾರ. ಅಂಥ ಒಂದು ಹಿನ್ನೆಲೆಯಲ್ಲಿ devolution of the power of the Legislatures. ಅಂದಾಗ ನಾವು ತೆರದ ಮನಸ್ಸಿನಿಂದ ರಾಜಕೀಯ ಔದಾರ್ಯವನ್ನು ತಾಳಬೇಕಾಗುತ್ತದೆ. ಏಕೆಂದರೆ ಆಗಲೇ ಹೇಳಿದ್ದೇನೆ, ಯಾರಿಂದ ನಾವು ಅಧಿಕಾರ ಪಡೆದುಕೊಂಡಿದ್ದೇವೆ, ಅವರಿಗೆ ಅಧಿಕಾರವನ್ನು ಕೊಡುವುದರಲ್ಲಿ ನೋವು ಬೇಡ, ರಿಸರ್ವೆಷನ್ ಬೇಡ, ಚೌಕಾಸಿ ಬೇಡ. It is stated in your note to your amendment devolution of the power for Mandal Panchayats and Zilla Parishads. ಆ ಒಂದು ಹಿನ್ನೆಲೆಯಲ್ಲಾದರೂ ದಯವಿಟ್ಟು ಅವರಿಗೆ ಅಧಿಕಾರ ಕೊಡಲಿಕ್ಕೆ ಹೆಚ್ಚಿನ ಔದಾರ್ಯವನ್ನು ತೊರಬೇಕು ಎಂದು ಪ್ರಾರ್ಥಿಸುತ್ತೇನೆ. ಮೀಸಲಾತಿ ಬಗ್ಗೆ ಸಂವಿಧಾನದ ತಿದ್ದುಪಡಿಯಲ್ಲಿರುವ ಜನಸಂಖ್ಯೆಯ ಆಧಾರಕ್ಕಾದರೂ ಸೀಮಿತಗೊಳಿಸಿ ಮಿನಿಮಂ 18 ಪರ್ಸೆಂಟ್ ಎಂದು ಅಳವಡಿಸಿ. ಯಾವುದಾದರೂ ಒಂದಕ್ಕೆ ಅಳವಡಿಸಿಕೊಳ್ಳದಿದ್ದರೆ ಕಾನೂನು ತೊಡಕು ಬರಬಹುದೆಂದು ನಾನು ತಮ್ಮಲ್ಲಿ ಪ್ರಾರ್ಥಿಸುತ್ತೇನೆ.

11.50ಎ.ಎಂ

ಶ್ರೀ ಎಂ.ವೈ ಘೋರ್ಪಡೆ : ಈಗಿರತಕ್ಕ ಕಾನೂನಿನಲ್ಲಿ ಅದೇ ರೀತಿ ಇದೆ. ಎಸ್‌ಸಿಎಸ್‌ಟಿ ಪ್ರಮೋಷನ್‌ನೇಟ್ ಆಗಿ ರಿಸರ್ವ್ ಮಾಡಬೇಕೆಂದು ಇದೆ. ಅದರ ಜೊತೆ 18 ಪರ್ಸೆಂಟ್ ಮಿನಿಮಮ್ ಇರಬೇಕೆಂದು ಇದೆ. ಆ ಕಾನೂನನ್ನು ಇಷ್ಟು ವರ್ಷ ನಡೆಸಿಕೊಂಡು ಬಂದಿದ್ದೇವೆ. ಯಾವ ತೊಂದರೆಯೂ ಉಂಟಾಗಿಲ್ಲ. ಈಗ ನಾವು ಹೊಸ ಕಾನೂನು ಮಾಡುವಾಗ ಬದಲಾಯಿಸಿದರೆ ಸ್ವಲ್ಪ ತಪ್ಪು ಆದೀತು. ಇವತ್ತು ಯಾವ ಕಾನೂನು ಇದೆ, ಅದರಿಂದ ಯಾವುದೇ ತೊಂದರೆ ಆಗಿಲ್ಲ, ಅದನ್ನು ಏಕೆಬದಲಾವಣೆ ಮಾಡಬೇಕು? ಇದಕ್ಕೆ ಉತ್ತರ ಹೇಳಬೇಕು.

ಶ್ರೀ ವೈ.ಕೆ ರಾಮಯ್ಯ : ಸನ್ಮಾನ್ಯ ಅಧ್ಯಕ್ಷರೇ, ಅದಕ್ಕೆ ಕಾನೂನು ತೊಡಕು ಇಲ್ಲದೇ ಇದ್ದರೆ ಅಧಿಕಾರ ಹಂಚಿಕೊಳ್ಳುವುದರಲ್ಲಿ ನಾನು ಮೊದಲಿಗ. ಕಾನೂನು ತೊಡಕು ಇಲ್ಲದೇ ಇದ್ದರೆ ವಂಚಿತರಿಗೆ ಹೆಚ್ಚಿನ ಅಧಿಕಾರ ಕೊಡುವ ಯಾವುದೇ ಒಂದು ವ್ಯವಸ್ಥೆ ಕಾರ್ಯರೂಪಕ್ಕೆ ತರುವುದಾದರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಎರಡನೆಯದಾಗಿ ಇಲ್ಲಿ ಹಿಂದುಳಿದವರಿಗೆ ಮೀಸಲಾತಿ ತಂದಿದ್ದೀರಿ. ಅದನ್ನು ನಾನು ಅಭಿನಂದಿಸುತ್ತೇನೆ. ಹಿಂದೆ ಇದ್ದ ವ್ಯವಸ್ಥೆಯಲ್ಲಿ ಹಿದುಳಿದವರಿಗೆ ರಿಸರ್ವೇಷನ್ ಇರಲಿಲ್ಲ. ಅದಕ್ಕಾಗಿ I congratulate you. ಆದರೆ ಒಂದು ಸಮಸ್ಯೆ ಇದೆ. ಹಿಂದುಳಿದವರು ಯಾರು ಎನ್ನುವುದನ್ನು ಗುರ್ತು ಮಾಡುವುದರಲ್ಲಿ ಗೊಂದಲ ಇದೆ. ಮಂಡಲ್ ವರಡಿ ಆಧಾರದ ಮೇಲೆ ಗುರ್ತಿಸುತ್ತೀರಾ? ಅಥವಾ ಚಿನ್ನಪ್ಪರೆಡ್ಡಿ ಆಯೋಗದ ವರದಿ ಆಧಾರದ ಮೇಲೆ 38 ಪರ್ಸೆಂಟ್ ಎಂದು ಗುರ್ತಿಸುತ್ತೀರಾ ? ಮಂಡಲ್ ವರದಿಯಂತೆ 28 ಪರ್ಸೆಂಟ್ ತೆಗೆದುಕೊಳ್ಳುತ್ತೀರಾ ? ಅಥವಾ ಈಗ ಜಾರಿಯಲ್ಲಿರುವ 68 ಪರ್ಸೆಂಟ್ ತೆಗೆದುಕೊಳ್ಳುತ್ತೀರಾ ? ಇದರ ಬಗ್ಗೆ ನಿರ್ದಿಷ್ಟ ನಿಲುವು ತಮ್ಮಿಂಥ ಬರಬೇಕು. ಅಂಕಿಅಂಶ ಈಗ ನಮ್ಮ ಮುಂದೆ ಇದೆ. ಇದನ್ನು ನೀವು ತೀರ್ಮಾನ ಮಾಡಿದರೆ ಆಗ ನಮಗೆ ಗೊತ್ತಾಗುತ್ತದೆ, ರಿಸರ್ವೇಷನ್ ಎಷ್ಟು ಪರ್ಸೆಂಟ್‌ಗೆ ಬರುತ್ತದೆ ಎಂದು. ಮಂಡಲ್ ವರದಿ ಒಂದು ಹೇಳುತ್ತದೆ, ಚಿನ್ನಪ್ಪರೆಡ್ಡಿ ವರದಿ ಮತ್ತೊಂದು ಹೇಳುತ್ತದೆ. ಮತ್ತೆ ಈಗಿರತಕ್ಕ ಪ್ರೆಸೆಂಟ್ ಸಿಸ್ಟಮ್ ಏನು ಇದೆ ಅದು ಒಂದು ಹೇಳುತ್ತದೆ. ಈ ಮೂರರಲ್ಲಿ ಯಾವುದನ್ನು ಆಧಾರ ಇಟ್ಟುಕೊಂಡು ನೀವು ಮೀಸಲಾತಿ ಜಾರಿ ಮಾಡುತ್ತೀರೆನ್ನುವುದನ್ನು ತಮ್ಮ ಉತ್ತರದಲ್ಲಿ ನಿರ್ದಿಷ್ಟವಾಗಿ ತಿಳಿಸಿದರೆ ಮೀಸಲಾತಿ ಎಷ್ಟು ಬರುತ್ತದೆಂಬ ಅರಿವು ಮಾಡಿಕೊಳ್ಳುವುದಕ್ಕೆ ಅನುವು ಆಗುತ್ತದೆ. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ ಮಾನ್ಯಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು. ಏನೆಂದರೆ, ಯಾವುದೇ ಒಬ್ಬ ವ್ಯಕ್ತಿಗೆ ತಾನು ಹುಟ್ಟಿದ ಜಾತಿ ಶಾಪ ಆಗಬಾರದು ಎಂದು ನಾನೂ ಕೂಡಾ ಅದನ್ನು ಒಪ್ಪಿ ಒಂದು ಮಾತನ್ನು ಹೇಳುತ್ತೇನೆ. ಅದು ಬಂದವಾಳವೂ ಕೂಡಾ ಆಗಬಾರದು. It should not be a Privilege. ಹೇಗೆ ಒಬ್ಬ ವ್ಯಕ್ತಿಗೆ ಶಾಪ ಆಗಬಾರದೋ ಅದು ಆ ವ್ಯಕ್ತಿಗೆ ಬಂಡವಾಳವೂ ಆಗಬಾರದು. ಅದುದರಿಂದ ಮೀಸಲಾತಿ ಮಾಡುವಾಗ ಅದನ್ನು ಗಮನಿಸಬೇಕೆಂದು ತಮ್ಮಲ್ಲಿ ಪ್ರಾಥನೆ ಮಾಡಿಕೊಳ್ಳುತ್ತೇನೆ. ಅಧ್ಯಕ್ಷರೇ, ಮತ್ತೊಂದು ವಿಷಯವನ್ನು ಪ್ರಸ್ತಾಪ ಮಾಡಬೇಕಾಗಿದೆ. ಈ ಒಂದು ವಿಧೇಯಕ ಹೊಸದೇನೂ ಅಲ್ಲ. ಇದು ಒಂದು ವ್ಯರ್ಥ ಸಾಧನೆ ಹಾಗೂ ಕಸರತ್ತು ಎಂದು ಹೇಳಿದ್ದೇನೆ. ಇದರಲ್ಲಿ

ಜಿಲ್ಲಾಪರಿಷತ್ತು, ಮಂಡಲಪಂಚಾಯಿತಿ ಮತ್ತು ತಾಲ್ಲೂಕು ಸಮಿತಿಗಳಿಗೆ ಯಾರುಯಾರು ಏನೇನು ಮಾಡಬೇಕು ಎನ್ನುವ ಬಗ್ಗೆ ಸಂವಿಧಾನದ ತಿದ್ದುಪಡಿ ಮಾಡಿ ಅದಕ್ಕೆ ಒಂದು ಕಲಮ್‌ನ್ನೇ 11 ನೇ ಶೆಡ್ಯೂಲ್ ಎಂದು ಹೇಳಿ ಸೇರಿಸಿದ್ದೇವೆ. After the Tenth Schedule to the constitution, the following Schedule shall be added. The word used is 'Shall'. ಎಂದರೆ ಏನು 29 ಬಾಬುಗಳನ್ನು ಈ ವ್ಯವಸ್ಥೆ ಆಡಳಿತಕ್ಕೆ ನೀವು ಕೊಟ್ಟಿದ್ದೀರೋ ಇದನ್ನು ಕಿತ್ತುಹಾಕುವುದಕ್ಕೆ ನಿಮಗೆ ಅಧಿಕಾರ ಇಲ್ಲ. ಬಹುಶಃ ಇದನ್ನು ತಾವು ಒಪ್ಪಿಕೊಳ್ಳುತ್ತೀರಿ ಎಂದು ಭಾವಿಸುತ್ತೇನೆ. Inview of the word used 'Shall' even this Government do not have any power, according to me, to take away or withdraw any of these subjects from the local self-Government.

ಪ್ರೊ: ಎಂ.ಡಿ ನಂಜುಂಡಸ್ವಾಮಿ : ನಾನು ಮಾತನಾಡುವಾಗ ಇದನ್ನು ತಿಳಿಸೋಣ ಎಂದು ಇದ್ದೆ. 11ನೇ ಶೆಡ್ಯೂಲ್ ಆ್ಯಡೆ ಆಗಿದೆ. ಇಲ್ಲೇನೇ ಕುತಂತ್ರ ನಮ್ಮದು ಇರೋದು. 11ನೇ ಶಿಡ್ಯೂಲ್ ನಾವು ಸೇರಿಸಿದ್ದೇವೆ. 29 ಸಬ್ಜೆಕ್ಟ್ಸ್ ಸೇರಿಸಿದ್ದೇವೆ. ತಾವು ಸಂವಿಧಾನವನ್ನು ತೆಗೆದು ಮತ್ತೆ ನೋಡಿದರೆ 7ನೇ ಶಿಡ್ಯೂಲ್‌ನಲ್ಲಿ ಸ್ಟೇಟ್ ಲಿಸ್ಟ್‌ನ ಕೆಲವು ಸಬ್ಜೆಕ್ಟ್‌ನ್ನು ಇಲ್ಲಿ ಸೇರಿಸಿದ್ದೇವೆ. ಕನ್‌ಕರೆನ್ಸ್ ಲಿಸ್ಟ್‌ನಲ್ಲಿ ಇರುವ ಕೆಲವು ಸಬ್ಜೆಕ್ಟ್ಸ್‌ನ್ನು ಇಲ್ಲಿ ಸೇರಿಸಿದ್ದೇವೆ. Can you tell me why the Seventh Schedule is not amended ? The seventh schedule stands as it is. They are not interested in decentralisation of power. Eleventh Schedule is there. It contains subjects which are in Seventh Schedule, But the Seventh Schedule is not amended. What does it mean ? It means, that there is absolutely no devolution of powers.

SRI M.Y.GHORPADE (MINISTER FOR RURAL DEVELOPMENT AND PANCHAYAT RAJ) : The Professor has raised a very fine legal point. Let me try to answer that to the best of my knowledge. The 11th Schedule is an expression of an intention which is in nature of a guideline. The Centre, in its 73rd Constitutional Amendment has told the entire country what sort of devolution should be done at the State level. Mind you, What we are doing at the State level, is by virture of the State list. Yes, it is by virtue of State list. We are being guided by the Central legislation. But the power of what we are doing, is certainly not derived from the Center into the State List, whatever is the nature of the State list and the

concurrent list, we will have to take into account the overlaping nature of the 73rd Constitutional amendment. It is only if any State goes to a Court of law and makes that point that we do not want to obey the 11th Schedule because if infringes the 7th Schedule, then some sort of a legal verdict or an opinion wil emerge at the Supreme Court level. Now, as the Professor knows, in Constitution, even the fundamental rights and directive principles have been discussed in Courts of law and various opinions have emerged. What we are concerned here today is the 11th Schedule. What is the reaction of the State Government to the 11th Schedule ? The reaction of the Karnataka Government to the 11th Schedule is that welcome the guideline, that has been incorporated in the 11th Schedule; As he pointed out that there are 29 Heads. we have gone a step further and under the same 29 Heads, if I remember right,we have added some 3-4 more Heads which has been left out in the 11th Schedule, and under each of these Heads, we have tried to put down the functions or sociol-economic activities, programmes under the three levels, i.e. Gram level,Taluk level and the Zilla level, so that the people in Karnataka know how we have used the 11th Schedule, kept that structure and gone quite a bit further in defining all the programmes and economic activities that can be classified under the 11th Schedule and we have incorporated three Schedules in our Act. Of course,as you must have noticed, we have also retained with us the power to omit, amend and add the description under each of these Schedules. Now, this is not a new thing that I have done. The power to omit, amend and add is borrowed from the existing Act because it is reasonable for any Government to keep that power with it because it is its power that which is delegated and we cannot assume that all activities and programmes will remain the same for all times and there is every need to define and change, modify those activities from time to time and specify what is the responsibility of each of the Panchayat Raj tier regarding each economic programme

activity which we have put down under our three Schedules. I submit to you Sir, and through you, to the learned Professor, that under the circumstances, this is the maximum we could do to decentralise powers and functions consistent with the latest Constitutional amendment. Thank you.

ಪ್ರೊ ಃ ಎಂ.ಡಿ.ನಂಜುಂಡಸ್ವಾಮಿ ಃ ಸನ್ಮಾನ್ಯ ಮಂತ್ರಿಗಳು ಕೇಳಬೇಕು. ಏನೆಂದರೆ ಇದುವರೆಗೆ ನಮ್ಮ ಸಂವಿಧಾನದಲ್ಲಿ ಮೂರು ಲಿಸ್ಟ್‌ಗಳು ಇದ್ದವು. ಯೂನಿಯನ್ ಲಿಸ್ಟ್ ಸ್ಟೇಟ್ ಲಿಸ್ಟ್ ಮತ್ತೊಂದು ಕಂಕರೆನ್ಸ್ ಲಿಸ್ಟ್ ಎಂದು ಇದು ನಾಲ್ಕನೇ ಲಿಸ್ಟ್. 4ನೇ ಲಿಸ್ಟ್‌ನಲ್ಲಿ ಎರಡನೇ ಲಿಸ್ಟ್‌ನ ಕೆಲವು ಸಬ್ಜೆಕ್ಟ್ಸ್ ಇವೆ ಮೂರನೇ ಲಿಸ್ಟ್‌ನ ಕೆಲವು ಸಬ್ಜೆಕ್ಟ್ಸ್ ಇವೆ. ಆಮೇಲೆ ಏಳನೇ ಶೆಡ್ಯುಲ್ ಅಮೆಂಡ್ ಆಗಿದೆ, With the result, we will have to come to the conclusion that this is a peculiar additional concurrent list , on which the lower Units also suppose to have jurisdiction and also the Union has jurisdiction, the State Government also has jurisdiction. That's why I said, on the one hand.ಅಧಿಕಾರ ವಿಕೇಂದ್ರೀಕರಣ ಮಾಡುವುದಕ್ಕೆ ಇವರಿಗೆ ಮನಸ್ಸೇ ಇಲ್ಲ. ಇದನ್ನು ಯಾರೂ ಡ್ರಾಫ್ಟ್ ಮಾಡಿದರೋ ನನಗೆ ಗೊತ್ತಿಲ್ಲ. ಕುತಂತ್ರಿಗಳೇ ಡ್ರಾಫ್ಟ್ ಮಾಡಿರುವುದು ಅಂತ ನನ್ನ ತೀರ್ಮಾನ. ಆ ಕಾರಣ - Unless we strictly delimit the areas of legislation, the subjects of legislation clearly, we cannot say that there is decentralisation.

ಶ್ರೀ ವೈ.ಕೆ.ರಾಮಯ್ಯ ಃ ಸನ್ಮಾನ್ಯ ಅಧ್ಯಕ್ಷರೇ, ನನ್ನ ವಾದವನ್ನು ಮುಂದೆ ಏನು ಮಾಡಬಹುದು ಎಂದು ಮಂತ್ರಿಗಳು ನಿರೀಕ್ಷೆ ಮಾಡಿ ಅದಕ್ಕೆ ಉತ್ತರ ಕೊಟ್ಟುಬಿಟ್ಟಿದ್ದಾರೆ. ನಾನು ಅವರಿಗೆ ಏನುಹೇಳುತ್ತಿದ್ದೇನೆ ಎಂದರೆ 11ನೇ ಶೆಡ್ಯೂಲ್‌ನಲ್ಲಿ ಪದ ಉಪಯೋಗಿಸಿರುವುದು-'shall'.Schedule shall be added.ಅಂದರೆ ಇದರ ಪ್ರಕಾರ ಯಾವುದೇ ಒಂದು ಯೋಜನೆಯನ್ನು ಕಿತ್ತುಹಾಕುವುದಕ್ಕೆ ಸಾದ್ಯವಿಲ್ಲ. ಅಷ್ಟೇ ಅಲ್ಲ, ಅವರಿಗೆ ಒಂದು ಹೆಜ್ಜೆ ಮುಂದೆಹೋಗಿ ಹೇಳುತ್ತೇನೆ. ಸಂವಿಧಾನ ತಿದ್ದುಪಡಿಯ 213 "ಜೆ" ಕಾಲಮ್ ಅನ್ನು ಅದರ "ಬಿ" ಯನ್ನು ತಾವು ನೋಡಬೇಕು. 243 ಜೆ (ಬಿ) constitutional Amendment ನಾವು ಹೇಳುವುದನ್ನು ಹೇಳುತ್ತೇವೆ. ನಾವು ಹೇಳುವುದನ್ನೆಲ್ಲ ನೀವು ಮಾಡುತ್ತೀರಿ ಎಂದು ನಮಗೆ ಭಾವನೆ ಇಲ್ಲ. ನಮ್ಮ ಕರ್ತವ್ಯವನ್ನು ನಾವು ಮಾಡುತ್ತೇವೆ. 11th Schedule shall be added. That is one. Further 243(b) says, the impementation of schemes for the economic development, social justice, as may be entrusted by them including those in related to the matters listed in the 11th Schedule. so,you have power to add. Now you can derive your power from this provision.

ನಿಮ್ಮ ಕಾರ್ಯಕ್ರಮಗಳು ಏನಿದ್ದಾವೆ ಆ ಕಾರ್ಯಕ್ರಮಕ್ಕೆ ಬೇಕಾದರೆ -Entrust it to them, including those who have already been included in the Eleventh Schedule. so 243G(b) gives ample power to the Government to add any other subject to the scheme. ಆದರೆ ನನ್ನ ವಾದ ಇಷ್ಟೆ , ಅದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. But you have no power to delete any schemes. ಅದನ್ನು ನೀವು ಸೆಕ್ಷನ್ ಪ್ರಯತ್ನ 312ರಲ್ಲಿ ಮಾಡಿದ್ದೀರಿ. In Section 312, the Government may, by notification, in the following Gazatte, omit,amend or add any activity, programme or a scheme covered by or mentioned in the Schedule 1,2 & 3. That is the subjects of the 11th Schedule and issue such Notification, the Schedule shall be deemed to have been amended accordingly. ನಾನು ವಿನೀತವಾಗಿ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಸಂವಿಧಾನದ ತಿದ್ದುಪಡಿ 243ಜೆ (ಬಿ) ನಿಮಗೆ ಆ್ಯಡ್ ಮಾಡುವುದಕ್ಕೆ ಅಧಿಕಾರವನ್ನು ಕೊಡುತ್ತದೆ. ಆದರೆ ತೆಗೆದುಹಾಗುವುದಕ್ಕೆ ಆಧಿಕಾರವನ್ನು ಕೊಡುವುದಿಲ್ಲ. ಇದಕ್ಕೆ ಕಾರಣ ಏನಾಗಿದೆ ಎಂದರೆ ಯಾರೋ ಒಬ್ಬರು ಮಂತ್ರಿ ಬರುತ್ತಾರೆ, ಆ ಜಿಲ್ಲಾಪರಿಷತ್ತಿನ ಅಧ್ಯಕ್ಷರ ಮಾತನ್ನು ಕೇಳುವುದಿಲ್ಲ ಆಗ powers. ವಿತ್ ಡ್ರಾ ಮಾಡುವುದು. ನಾಳೆ ಇನ್ಯಾರಾದರೂ ಈ ಕಡೆಯವರು ಅಧಿಕಾರಕ್ಕೆ ಬರುತ್ತಾರೆ. ಅವರಿಗೆ ಇದರ ಬಗ್ಗೆ ಏನಾದರೂ ಪೂರ್ವಾಗ್ರಹ ಇರುತ್ತದೆ. ಇದೆಲ್ಲಾ ಹಿಂದೆ ನಡೆದಿದೆ. ನಾನು ಅದಕ್ಕಾಗಿ ಹೇಳುತ್ತಿದ್ದೇನೆ. Successive Government ಅಂತ ಇದಕ್ಕೆ ಅವಕಾಶ ಆಗದೇ ಇರಲಿ ಎಂದು ಇದನ್ನು ಮಾಡಿರುವುದು. The Schemes or the, subject cannot be withdrawn at the whims and fancies of the Government,or at the whims and fancies of the Minister.

ಅದಕ್ಕಾಗಿ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ, ಏನೆಂದರೆ 243 ಬಿ ಕೆಳಗಡೆ ನಿಮಗೆ ಮತ್ತೊಂದು ಯೋಜನೆಯನ್ನು ಸೇರಿಸುವುದಕ್ಕೆ ಅಧಿಕಾರ ಇದೆ. ಆದರೆ ಇಲ್ಲಿ ಇರುವಂಥ ಯಾವುದೇ ಒಂದು ಸ್ಕೀಮ್‌ನ್ನು ಕಿತ್ತುಹಾಕುವುದಕ್ಕೆ ಅಧಿಕಾರ ಇಲ್ಲ. ದಯಮಾಡಿ ಇದನ್ನು ಕೈಬಿಡಬೇಕೆಂದು ನನ್ನ ಪ್ರಾರ್ಥನೆ. ಆದಕ್ಕೇ ನಮ್ಮ ಪ್ರೊಫೆಸರ್ ಹೇಳಿದರು, ಇದು ಅಧಿಕಾರ ವಿಕೇಂದ್ರೀಕೃತದ ಪ್ರಾಮಾಣಿಕ ಪ್ರಯತ್ನ ಇಲ್ಲಿ ಇಲ್ಲ ಅಂತ. ನಾನು 18 ವರ್ಷ ಲಾಯರ್ ಆಗಿ ಕೆಲಸ ಮಾಡಿದ್ದೇನೆ. Then there was no Constitutional Amendment. ನಾನು ಇದೆಲ್ಲ ಓದಿಕೊಂಡು ಸಿದ್ದನಾಗಿ ಬಂದಿದ್ದೇನೆ. ನಿಮ್ಮ ಒಂದು ಕಾನೂನಿನಲ್ಲಿದೆ. ಜನರ ಹಿತಕ್ಕೆ ಅದರಲ್ಲೂ ಗ್ರಾಮಾಂತರ ಜನರ ಬದುಕಿನ ಅಭಿವೃದ್ದಿಗೆ ಅಡ್ಡಿಬರುವಂಥಾದ್ದು ಇದ್ದರೆ ತೆಗೆದುಹಾಕಿ ಸ್ವಾಮಿ, ನಾನು ಅಡ್ಡ ಬರುವುದಿಲ್ಲ. ಆದರೆ ಅಲ್ಲಿ ಇರುವುದನ್ನೇ ಕಾಪಿ ಮಾಡಬೇಕು, ಅದನ್ನು ಅಳವಡಿಸಿಕೊಳ್ಳಬೇಕು, ಅದು ಜನರ ಹಿತಕ್ಕೆ ಇದ್ದರೂ ಕೂಡ ಅದನ್ನು ಕಾರ್ಯರೂಪಕ್ಕೆ ತರಬೇಕು ಎಂಬ ವಾದ ಮಾಡುವಷ್ಟು ದಡ್ಡ ನಾನಲ್ಲ, ಅಷ್ಟು ಅವಿವೇಕಿಯೂ ಅಲ್ಲ. ಈ ಕಾನೂನನ್ನು ನಾವು ತಂದಾಗ ಸಂವಿಧಾನದ ತಿದ್ದುಪಡಿ ಆಗಿರಲಿಲ್ಲ. ಈ

ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತಂದಾಗ 11ನೇ ಶೆಡ್ಯೂಲ್ ಇರಲಿಲ್ಲ. ಈ ಕಾನೂನನ್ನು ತಂದಾಗ 243(ಜಿ)ಇರಲಿಲ್ಲ.

ಶ್ರೀ ಎಂ.ವೈ.ಘೋರ್ಪಡೆ : ಅಧ್ಯಕ್ಷರೇ, ನಾನು ಕೌನ್ಸಿಲ್‌ನಲ್ಲಿ ಮೂರು-ನಾಲ್ಕು ಪ್ರಶ್ನೆಗಳಿಗೆ ಆನ್ಸರ್ ಮಾಡಬೇಕಾಗಿದೆ. ಆದ್ದರಿಂದ ನಾನು ಅಲ್ಲಿ ಪ್ರಶ್ನೆಗಳಿಗೆ ಉತ್ತರ ನೀಡಿ ಮತ್ತೆ ವಾಪಾಸ್ಸು ಬರುತ್ತೇನೆ.

ಶ್ರೀ ವೈ.ಕೆ.ರಾಮಯ್ಯ : ನಾನು ಸಲಹೆ ಕೊಡುತ್ತಿದ್ದೇನೆ. ಏಕೆಂದರೆ ನಾಳೆ ಯಾದರೂ ಚುನಾವಣೆ ನಡದೇ ನಡೆಯುತ್ತದೆ. ನಮ್ಮ ಪಕ್ಷದವರು ಗೆದ್ದುಬರುತ್ತಾರೋ, ಅಥವಾ ನಿಮ್ಮ ಪಕ್ಷದವರು ಗೆದ್ದುಬರುತ್ತಾರೋ ಗೊತ್ತಿಲ್ಲ. ಆಮೇಲೆ ಬಂದು ತಲೆತಿನ್ನುವುದು ಯಾಕೆ ಬೇಕು ಅಂತ. ಅದಕ್ಕೆ ನನ್ನ ಪ್ರಾರ್ಥನೆ ಇಷ್ಟೆ, ನಾವು ಹೇಳಿದ್ದನ್ನು ತಾವು ಮಾಡುತ್ತೀರಿ ಎಂದು ನಾನು ಭಾವಿಸಿಕೊಳ್ಳುವುದಿಲ್ಲ. ನಾಳೆ ಗೆದ್ದುಬಂದಮೇಲೆ ಅವರೇ ಹೇಳುತ್ತಾರೆ, ಏನ್ರಿ ಆಗ ನೀವು ಕೂತಿದ್ರಿ, ಇದು ನಿಮ್ಮ ಗಮನಕ್ಕೆ ಬರಲಿಲ್ಲವೇ ಎಂದು. 11ನೇ ಶೆಡ್ಯೂಲ್ ಕೆಳಗಡೆ ಏನು ಸ್ಕೀಮ್ಸ್ ಇವೆ, ಅದಕ್ಕೆ ಎಷ್ಟು ಬೇಕಾದರೂ ಸೇರಿಸಿಕೊಂಡು ಹೋಗಬಹುದು. ಹಿಂದೆಲ್ಲ ನಾವು ಏನು ಮಾಡಿದ್ದೇವೆ ಎಂದು ಹೇಳುತ್ತೀರಿ, ಕಿತ್ತುಹಾಕಿಬಿಟ್ರೆ ಅಂತ. ಹಾಗೆ ಮಾಡುತ್ತಾರೆ ಅಂತ ಹೇಳಿ 11ನೇ ಶೆಡ್ಯೂಲ್ ತಂದಿರುವುದು. ಅದನ್ನು ತಂದುಬಿಟ್ಟು ಏನು ಮಾಡಿದ್ದಾರೆ ಎಂದರೆ ಯಾವಾಗ ಇರುವಂಥ ಸ್ಕೀಮ್ಸ್‌ನ್ನು ಕಿತ್ತುಕೊಳ್ಳುವುದಕ್ಕೆ ಸಾಧ್ಯವಿಲ್ಲ, ಆದರೂ ಕೂಡ ಸರ್ಕಾರ 312 ಸೆಕ್ಷನ್‌ನಲ್ಲಿ ಈ ಪ್ರಯತ್ನವನ್ನು ಮಾಡಿದೆ. ಕಿತ್ತು ಕೊಳ್ಳುವ ಅಧಿಕಾರವನ್ನು ಉಳಿಸಿಕೊಂಡಿದ್ದೀರಿ. ಅದಕ್ಕೇ ಪ್ರೊಫೆಸರ್ ಅವರು ಹೇಳಿದರು ವಿಕೇಂದ್ರೀಕರಣ ನ್ಯವಸ್ಥೆಯನ್ನುತರುವಂಥ ಪ್ರಯತ್ನ ಏನಿದೆ, ಇದೊಂದು futile exercise.ಅಂತ. ಮೊದಲಿನಿಂದ ಏನಿತ್ತು, ಅದನ್ನು ನೀವು ಮುಂದುವರಿಸಿಕೊಂಡು ಹೋಗುತ್ತಿದ್ದೀರಿ. ಅಥವಾ 1994-95 ನೇ ಎಲೆಕ್ಷನ್‌ನಲ್ಲಿ ನಾವು ಬಂದರೆ ನಮ್ಮಮಾತನ್ನೇ ಇಂಟ್ರೋಡ್ಯೂಸ್ ಮಾಡಿ. ಅದಕ್ಕೇ ನಾನು ಹೇಳುತ್ತಿರೋದು ಇದು, ಯಾರು ಮಾಡಿದರೂ ಕೂಡ It is a futile exercise by all the successive Governments. ಈ ಸರ್ಕಾರ, ಆ ಸರ್ಕಾರ ಅಂತ ಅಲ್ಲ.

ಶ್ರೀ ಎಂ.ವಿ.ವೆಂಕಟಪ್ಪ : 1994 ರಲ್ಲಿ ನೀವೇ ಬರುತ್ತೀರೆಂದು ಹೇಳುತ್ತಿದ್ದೀರಾ?

ಶ್ರೀ ವೈ.ಕೆ.ರಾಮ್ಯಯ : ಬಂದರೆ ಅಂತ ಹೇಳಿದೆ. ಆದ್ದರಿಂದ ನಾನು ವಿನೀತನಾಗಿ ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಸೆಕ್ಷನ್ 312 ರಲ್ಲಿ ಇರುವ ವಿಷಯಗಳು ತೆಗೆದುಹಾಕುವಂಥ ಕಾನೂನನ್ನು ಒಂದು ನೋಟಿಫಿಕೇಶನ್ ಮಾಡುವುದರಿಂದಲೇ ಸರ್ಕಾರ ಮಾಡಬಹುದು ಎಂದು ಏನು ಪ್ರಾವಿಶನ್ ಮಾಡಿದ್ದಾರೋ, ಅದು ಸಂವಿಧಾನಕ್ಕೆ ವಿರುದ್ಧವಾದದ್ದು. ಅಷ್ಟೇ ಅಲ್ಲ, ಪಿಕೇಂದ್ರೀಕರಣದ ನೆಪದಲ್ಲಿ ವಿಕೇಂದ್ರೀಕರಣ ಮಾಡುವಂಥ ಒಂದು ವಿಚಾರವನ್ನು ನಮ್ಮಮುಂದಿಟ್ಟು ಒಂದು ಕೈಯಲ್ಲಿ ಅಧಿಕಾರವನ್ನು ಅವರಿಗೆ ಕೊಟ್ಟು,ಮತ್ತೊಂದು ಕೈಯಲ್ಲಿ ಅಧಿರಾರವನ್ನು ಕಿತ್ತು ಕೊಳ್ಳುವಂಥ ಪ್ರೊವಿಜನ್ ಅನ್ನು ಇದರಲ್ಲಿ ಇಟ್ಟಿದ್ದೀರಿ. ದಯಮಾಡಿ ಅದನ್ನು ಕೈಬಿಡಿ.

ಶ್ರೀ ಕಾಗೋಡು ತಿಮ್ಮಪ್ಪ : ಅದೇ ಧೋರಣೆ ಈಗಲೂ ಇದೆ.

ಶ್ರೀ ವೈ.ಕೆ. ರಾಮಯ್ಯ : ನಾವು 1983-84ರಲ್ಲಿ ಕಾನೂನನ್ನು ತಂದಾಗ ರಾಜೀವಗಾಂಧಿಯವರ ಆಸೆಯ ಪ್ರತೀಕವಾಗಿ ಬಂದಿರುವಂಥ ಸಂವಿಧಾನದ ತಿದುದ್ಪಡಿ ಇರಲಿಲ್ಲ. ಅವತ್ತು ನಾವು ತಂದಿದ್ದು ಕಾನೂನಿನ ಸ್ವರೂಪ. ಸ್ವಲ್ಪ ದಯವಿಟ್ಟು ಕೇಳಿ.

ಶ್ರೀ ಕಾಗೋಡು ತಿಮ್ಮಪ್ಪ : ಅದೇ ಧೋರಣೆ ಈಗಲೂ ಇದೆ. ತಾತ್ವಿಕ ದೃಷ್ಟಿಕೋನ ಏನಿದೆ, ಹಿಂದಿನ ಕಾಲದಲ್ಲಿ ಏನಿತ್ತು ಅದೇ ದೃಷ್ಟಿಕೋನ ಈಗಲೂ ಇದೆ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ರಾಮಯ್ಯನವರೇ, ಅವರೇನೋ ತಾತ್ವಿಕ ದೃಷ್ಟಿ ಕೋನ ಎಂದು ಹೇಳುತ್ತಿದ್ದಾರೆ. ಹಿಂದಿನ ಮಸೂದೆಯಲ್ಲಿ ಏನಿತ್ತು , ಅದೇ ತಾತ್ವಿಕ ದೃಷ್ಟಿಕೋನ ಇವರಲ್ಲಿದೆ ಅಂತ ತಾವು ಹೇಳುತ್ತಿದ್ದೀರಿ. ನಾನು ಹೇಳುತ್ತಿರುವುದು ತಾತ್ವಿಕ ತಳಹದಿ ಇಲ್ಲದೇ ಇರುವ ದೃಷ್ಟಿಕೋನ ಹಿಂದಿನ ಮಸೂದೆಯಲ್ಲಿತ್ತು. ಅದನ್ನೇ ಮುಂದುವರೆಸಿದ್ದೀರಿ ಅಂತ ನಾನು ಹೇಳುತ್ತಿದ್ದೇನೆ.

ಶ್ರೀ ವೈ.ಕೆ.ರಾಮಯ್ಯ : ಮಾನ್ಯ ಅಧ್ಯಕ್ಷರೇ, ನಾನು ಬಹಳ ಸ್ಪಷ್ಟವಾಗಿ ಅವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. 1983 ರಲ್ಲಿ ಕಾರ್ಯರೂಪಕ್ಕೆ ತಂಧಂಥ ವ್ಯವಸ್ಥೆ ಏನಿತ್ತು, ಕಾನೂನು ಏನಿತ್ತು, ಆ ಕಾನೂನು ಸಂವಿಧಾನ ತಿದ್ದುಪಡಿ ಅಥವಾ ಸಂವಿಧಾನದ ಚೌಕಟ್ಟಿನಲ್ಲಿ ತಂದಂಥ ಕಾನೂನು ಅಲ್ಲ. ಆದರೆ, ಇವತ್ತು ತಂದಿರುವಂಥ ಕಾನೂನು ಏನಿದೆ, ಇದು ಸಂವಿಧಾನದ ತಿದ್ದುಪಡಿ, ಮತ್ತು ಅದರ ಚೌಕಟ್ಟಿನಲ್ಲಿ ತಂದಂಥ ಕಾನೂನು. ಈ ವಿಧೇಯಕದ ಯಾವುದೇ ಒಂದು ಸೆಕ್ಷನ್ ,

It should not contradict the provisions of the Amendment Act. My argument is this. Any provision that we are going to enact should not contradict the provisions of the Constitutional Amendment Act, should not be inconsistent with the provisions of the Amendment Act. The amendment Act says that it shall act on 29 subjects. I argue that this Government has no power to delete anyone of the subjects in view of the Constitutional bar, according to me.

SRI M.V.VENKATAPPA : In 11th Schedule, rural electrification including distribution of electricity is mentioned . Can we entrust this electrification including distribution of electricity to a Mandal Panchayat Committee? Production, distribution of electricity, can we entrust this to a Mandal ? please tell me ?

ಶ್ರೀ. ವೈ.ಕೆ.ರಾಮಯ್ಯ : ಸನ್ಮಾನ್ಯ ಅಧ್ಯಕ್ಷರೇ, ಆ 29 ಕಾರ್ಯಕ್ರಮಗಳಲ್ಲಿ ಯಾವುದನ್ನು ಕಾರ್ಯರೂಪಕ್ಕೆ ತರುವುದಕ್ಕಾಗುತ್ತುದೆ ಅಥವಾ ತರುವುದಕ್ಕಾಗುವುದಿಲ್ಲ ಎನ್ನುವ ಚರ್ಚೆ ಬೇರೆ. ನನ್ನ ವಾದ ಇಷ್ಟೆ. ಯಾವುದನ್ನು ಕಾರ್ಯರೂಪಕ್ಕೆ ತರಬೇಕು, ತರಬಾರದು ಎನ್ನುವುದನ್ನು ವಿವೇಚನೆ ಮಾಡಿ, 11ನೇ ಶೆಡ್ಯೂಲ್‌ಪ್ರಿಪೇರ್ ಮಾಡಿದಂಥ ಪುಣ್ಯಾತ್ಮರು ಡೆಲ್ಲಿಯಲ್ಲಿದ್ದಾರೆ. ಅದು ನನಗೆ ಗೊತ್ತಿಲ್ಲ.

ಶ್ರೀ ಎಂ.ವಿ.ವೆಂಕಟಪ್ಪ : ನೀವು ಹೇಳಿದ್ದು ಸರಿ, ಒಪ್ಪಿಕೊಳ್ಳುತ್ತೇನೆ. Can we entrust it ?

SRI Y.K. RAMAIAH : I am not the fit person to argue that. ನಾನು ಅದನ್ನು ಓದುವುದಕ್ಕೆ ಹೋಗಿಲ್ಲ, ಅದರ ಬಗ್ಗೆ ವ್ಯಾಖ್ಯಾನ ಮಾಡುತ್ತಾ ಇಲ್ಲ.

PRO. M.D. NANJUNDASWAMY: where is the need for this 11th Schedule ? ಹುಡುಗಾಟಿಕ್ಕೆ ಮಾಡುವುದಕ್ಕೆ 11ನೇ ಶೆಡ್ಯೂಲ್ ಅನ್ನು ಬರೆದಿದ್ದಾರೆಯೋ ?

SRI Y.K. RAMAIAH : In the Constitution they have given a Schedule. This Government has no right to delete anyone of the subjects, that is my argument. ಇಷ್ಟೊಂದು ಕನಿಷ್ಟವಾದ ವಿಷಯದ ಬಗ್ಗೆಯೂ ಇಷ್ಟೊಂದು ಶ್ರಮಪಡಬೇಕೆಂದು ನಾನು ಭಾವಿಸಿರಲಿಲ್ಲ. ಇದು ಕಾರ್ಯರೂಪಕ್ಕೆ ಬರುತ್ತದೆಯೋ ಇಲ್ಲಮೋ. ಹಾಗಾದರೆ,ಇದು ಕಾರ್ಯರೂಪಕ್ಕೆ ಬರದೇ ಇದ್ದರೆ, ಏಕೆ ತಂದಿರಿ ? ನಿಮ್ಮ ಪಕ್ಷದ ಸಭೆಯಲ್ಲಿ ಹೇಳಬೇಕಾಗಿತ್ತು. ಇದನ್ನು ಕಾರ್ಯರೂಪಕ್ಕೆ ತರುವುದಕ್ಕಾಗದಿದ್ದರೆ, ಏಕೆ ಸೇರಿಸಿದ್ದೀರಿ, ಇದನ್ನು ಏನು ಮಾಡಬೇಕೆಂದು ಅಲ್ಲಿ ಕೇಳುವುದನ್ನು ಬಿಟ್ಟು, ನನ್ನನ್ನು ಕೇಳಿದರೆ, ನಾನೇನು ಉತ್ತರ ಹೇಳುವುದಕ್ಕಾಗುತ್ತದೆ ? ನೀವು ಅಲ್ಲಿ ಕೇಳಬೇಕಾಗಿತ್ತು. ನಮ್ಮ ಮುಂದೆ ತಂದಿಟ್ಟು, ನಿಮ್ಮ ಮಂತ್ರಿಗಳುಹೇಳುತ್ತಾರೆ, ನೀವು ಹೇಳಿ ಎಂದು ಹೇಳುತ್ತಾರೆ. ಹಿಂದೆ ಒಂದುಸಾರಿ,ಮಾನ್ಯ ಖರ್ಗೆಯವರೂ ಹೇಳುತ್ತಿದ್ದರು. ನಾನು ಅಲ್ಲಿ ಕುಳಿತಿದ್ದಾಗ, ನಾವೇನು ಮಾಡಬೇಕೆಂದು ಹೇಳುತ್ತಿದ್ದರು. ನಿಮ್ಮ ಪಕ್ಷದ ಸಭೆಯಲ್ಲಿ ಚರ್ಚೆಯಾಗಿದೆ. ನಿಮ್ಮ ಪಕ್ಷವೇ ಇರತಕ್ಕಂಥ ಕೇಂದ್ರಸರ್ಕಾರದ ಪಾರ್ಲಿಮೆಂಟಿನಲ್ಲಿ ಚರ್ಚೆಯಾಗಿದೆ. ಇದು ಬದಲಾವಣೆ ಯಾಗಿದೆ. ಇದಾದಮೇಲೆ ಕಾರ್ಯರೂಪಕ್ಕೆ ತರುವುದಕ್ಕೆ ಸಂವಿಧಾನದ ತಿದ್ದು ಪಡಿ ಆಧಾರದ ಮೇಲೆ ವಿಧೇಯಕವನ್ನು ನಮ್ಮ ಮುಂದೆ ಇಟ್ಟಿದ್ದೀರಿ.

SRI M.V.VENKATAPPA : What is your Suggestion?

SRI Y.K.RAMAIAH : My Suggestion is, you have no right to delete anyone of those subjects.It is a constitutional bar ಒಬ್ಬ ಮಂತ್ರಿ ಬಂದಹಾಗೆ, ಒಂದೊಂದುಸಾರಿ, ಒಂದೊಂದು ಪಕ್ಷದ

ಸರ್ಕಾರ ಬಂದಾಗ ಒಂದೊಂದುಸಾರಿ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. That is why the Costitution framers have taken the caution. ಜನತಾ ಪಕ್ಷದವರು ಬಂದಾಗ ಒಂದು ಸಬ್ಜೆಕ್ಟ್ ಕಿತ್ತುಹಾಕು, ಕಾಂಗ್ರೆಸ್‌ನವರು ಬಂದಾಗ ಇನ್ನೊಂದು ಸಬ್ಜೆಕ್ಟ್ ಕಿತ್ತುಹಾಕು. ಕಮ್ಯುನಿಸ್ಟ್‌ನವರು ಬಂದಾಗ ಇನ್ನೊಂದು ಸೇರಿಸಿ ಮಾಡುವುದಕ್ಕಾಗುವುದಿಲ್ಲ. ಹುಡುಗಾಟ ಆಡುವುದಕ್ಕೆ ಆಗುವುದಿಲ್ಲ. With all seriousness, they have used the word "shall". That is why I am insisting the Government to delete that provision.

ಶ್ರೀ. ಆರ್.ಎಲ್ ಜಾಲಪ್ಪ : ಅಧ್ಯಕ್ಷರೇ. ಕಳೆದ ಎರಡುವರ್ಷದಿಂದ ಸರ್ಕಾರ ಈ ಸಂಸ್ಥೆಗಳಲ್ಲಿ ಏನು ಹಸ್ತಕ್ಷೇಪ ಮಾಡಿ ಒಂದೊಂದೇ ತೆಗೆದುಕೊಂಡಿದ್ದಾರೆ, ಅದು ಪುನಃ ರಿಪೀಟ್ ಆಗಬಾರದು ಎಂದು ಈ ಸೆಕ್ಷನ್ ತೆಗೆದುಹಾಕಿ ಎಂದು ಕೇಳುತ್ತಿರುವುದು. ತಾವು ದಯಮಾಡಿ ಅರ್ಥಮಾಡಿಕೊಳ್ಳಿ. ಸನ್ಮಾನ್ಯ ತಿಮ್ಮಪ್ಪನವರು ಹೇಳಿದರು, ಹಿಂದೆ ಇದ್ದುದನ್ನು ಈಗಲೂ ಇಟ್ಟಿದ್ದೇವೆ ಏನು ತೊಂದರೆ ಎಂದು. ಹಿಂದೆ ಇದ್ದುದು ಅನುಭವ ಇಲ್ಲದೇ, ಸಂವಿಧಾನದ ಬ್ಯಾಕಿಂಗ್ ಇಲ್ಲದೇ ಮಾಡಿದ್ದರು. ಈಗ ಸಂವಿಧಾನದ ಬ್ಯಾಕಿಂಗ್ ಇದ್ದು, ತಿದ್ದುಪಡಿ ಮಾಡ್ಡಿದ್ದಾರೆ. 1974 ರಲ್ಲಿ ತಿದ್ದುಪಡಿ ಮಾಡಿ, ಪೂರ್ಣವಾಗಿ ಜನತೆಗೆ ಅಧಿಕಾರ ಕೊಡಬೇಕೆಂದು ಮಾಡಿದರು. ಇದರಲ್ಲಿ ಕ್ಲಾಸ್ ಇಟ್ಟು ಯಾವಾಗ ಬೇಕಾದರೂ ತೆಗೆದುಕೊಳ್ಳುತ್ತೇವೆ, ಯಾವಗ ಬೇಕಾದರೂ ಬಿಟುತ್ತೇವೆ ಎಂದು ಹೇಳಿದರೆ, ಇದು ಸರಿಯಲ್ಲ. ಇಲ್ಲದೇಹೋದರೆ, ಕೊಡಲೇಬೇಡಿ.

12.20.ಎ.ಎಂ

ಶ್ರೀ ಡಿ.ಆರ್.ಪಾಟೀಲ್ : ಮಾನ್ಯ ಅಧ್ಯಕ್ಷರೇ ಹಿಂದೆ ಈ ಲಿಸ್ಟ್‌ನಲ್ಲಿ ಸೇರಿಸ ಬಹುದಾಗಿತ್ತು ಮತ್ತು ತೆಗೆಯಲೂ ಬಹುದಾಗಿತ್ತು. ಆ ಅಧಿಕಾರ ಸರಕಾರಕ್ಕೆ ಇತ್ತು, ಅದನ್ನು ನಾವು ಕೋರ್ಟ್‌ನಲ್ಲಿ ಚಲಾಯಿಸಲು ಆಗುತ್ತಿರಲಿಲ್ಲ. ಈಗ ನಮಗೇನು ಅಧಿಕಾರವನ್ನು ರಾಜ್ಯಾಂಗಬದ್ಧವಾಗಿ ಕೊಟ್ಟಿದ್ದಾರೆ, ಅದನ್ನು ರಾಜ್ಯ ಸರಕಾರದವರು ಕಿತ್ತುಕೊಂಡರೆ We can definitely approach the Court and get stay order.

ಶ್ರೀ ಆರ್.ಎಲ್.ಜಾಲಪ್ಪ : ಕೋ ರ್ಟ್‌ಗೆ ಹೋಗಿ ಅಂದರೆ ಬೇರೆ ಕೆಲಸ ಇರುವುದಿಲ್ಲವೇ?

ಶ್ರೀ ವೈ.ಕೆ.ರಾಮಯ್ಯ : ಸಂವಿಧಾನದಲ್ಲಿ ಇಷ್ಟು ದಿನಗಳ ವರೆಗೆ ಮೂರು ಶೆಡ್ಯೂಲ್‌ಗಳು ಇದ್ದವು. ಸ್ಟೇಟ್, ಸೆಂಟ್ರಲ್, ಮತ್ತು ಕನ್‌ಕರೆನ್ಸ್ ಎಂದು ಇದ್ದವು. ಈಗ ನಾಲ್ಕನೆಯದು ಆಗಿದೆ. ಈಗ ನಮ್ಮ ಕೈಯಲ್ಲಿ ಏನೂ ಇಲ್ಲವೇ ಇಲ್ಲ, ಮತ್ತೆ ಪಾರ್ಲಿಮೆಂಟ್‌ಗೆ ಹೊಗಿ ಅದು ಅಮೆಂಡ್ ಆಗಬೇಕು. ಇವರಿಗೆ ಸೇರಿಸುವುದಕ್ಕೆ ಅಧಿಕಾರ ಕೊಟ್ಟಿದ್ದಾರೆ, ಆದರೆ ಕಿತ್ತು ಹಾಕುವುದಕ್ಕೆ ಇಲ್ಲ. ಈ ವಿಧೇಯಕದಲ್ಲಿ ಹೊಸದೇನೂ ಇಲ್ಲ, ಹಳೆಯದಲ್ಲಿ ಇದ್ದಂಥ ಜನಪ್ರತಿನಿಧಿಗಳಿಗೆ ಕೊಟ್ಟಿದ್ದಂಥ ಅಧಿಕಾರಗಳನ್ನು ಮೊಟಕು ಮಾಡಿದ್ದಾರೆ. ಒಂದು ಕೈಯಲ್ಲಿ ಅಧಿಕಾರ ಕೊಡುವಂಥ ನಾಟಕವಾದಿ ಸೆಕ್ಷನ್ 312 ರ ಕೆಳಗೆ ನಿಮಗೆ ಬೇಕಾದಾಗ ಅಧಿಕಾರವನ್ನು ಕಿತ್ತುಕೊಳ್ಳುವಂಥ ಕಪಟ ನಾಟಕ ಬೇಡ. ಇನ್ನು ಸೆಕ್ಷನ್ 234ರಲ್ಲಿ ಚೀಫ್ ಎಕ್ಸಿಕ್ಯೂಟಿವ್ ಅಫೀಸರ್ ಮತ್ತು ಅವರ ಅಧಿಕಾರದ

ವಿಚಾರ. ಅಲ್ಲಿ ಕೂಡ ಜನಪ್ರತಿನಿಧಿಗಳನ್ನು ಅಧಿಕಾರಿಗಳ ಆಳನ್ನಾಗಿ ಮಾಡುವ ಪ್ರಯತ್ನ ಇದೆ. ಸೆಕ್ಷನ್ 236ರಲ್ಲಿ ಎನ್‌ಕ್ವಾಯರಿ. ಸೆಕ್ಷನ್ 237(3) ರಲ್ಲಿ ರೆಸಲೂಶನ್ಸ್ . ಸೆಕ್ಷನ್ 312ನ್ನು ನಾನು ಈಗಾಗಲೇ ಓದಿದ್ದೇನೆ. ಸೆಕ್ಷನ್ 243 ರಲ್ಲಿ ಸಂವಿಧಾನದ ತಿದ್ದುಪಡಿಗೆ ಅಪಚಾರ ಮಾಡುವಂಥ ಈ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಜನರು ಮಾತನಾಡಿ ಕೊಳ್ಳುವಂತೆ ಮಂಡಲ ಪಂಚಾಯತಿಗಳಿಗೆ ಎಲ್ಲಾ ಪವರ್‌ಗಳನ್ನು ಕೊಟ್ಟುಬಿಟ್ಟರು. ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳಿಗೆ ಯಾಕೋ ಸ್ವಲ್ಪ ಕಡಿಮೆ ಮಾಡಿದ್ದಾರೆ, ಯಾಕೆಂದರೆ ಈ ತಾಲ್ಲೂಕು ಮಂಡಳಿ ಮತ್ತು ಜಿಲ್ಲಾ ಮಂಡಳಿಗಳಲ್ಲಿರುವಂಥವರೇ ಈ ಕಾನೂನು ತಯಾರು ಮಾಡುವವರು. in drafting this bill, outside people say that there is a hand of the officers who are going to head the Zilla Parishad and taluk and mandal panchayats.

ಅವರ ಒಂದು ತಾಳಕ್ಕೆ ಮಣಿದು, ಜನತಾಪ್ರತಿನಿಧಿಗಳ ಅಧಿಕಾರವನ್ನು ಮೊಟಕು ಮಾಡುವಂಥ ಪ್ರಯತ್ನವನ್ನು ಈ ಸರಕಾರ ಮಾಡಿದೆ ಎಂದು ಜನರು ಹೊರಗಡೆ ಮಾತನಾಡುವುದನ್ನು ನಾನು ಕೂಡ ಒಪ್ಪಿಕೊಳ್ಳಬೇಕಾಗಿದೆ. ಈ ಒಂದು ವಿಧೇಯಕ ಕ್ರಾಂತಿಕಾರಕವಾದುದು, ಪ್ರಗತಿಪರವಾದುದು ಈಗಿರುವಂಥ ವ್ಯವಸ್ಥೆಯಲ್ಲಿ ಬಹಳ ಉತ್ತಮವಾದುದು, ಎನ್ನುವಂಥ ಮಾತನ್ನು ನಾನು ಒಪ್ಪಲು ಸಿದ್ಧನಿಲ್ಲ. ಏಕೆಂದರೆ ಇದರಲ್ಲಿ ಹೊಸದು ಏನೂ ಇಲ್ಲ, ಇದೊಂದು ವ್ಯರ್ಥ ಕಸರಿತ್ತು. ನಾನು ಬೆಳಿಗ್ಗೆಯಿಂದ ಯಾವ್ಯಾವ ವಿಚಾರಗಳನ್ನು ಸರಕಾರದ ಗಮನಕ್ಕೆ ತಮ್ಮ ಮೂಲಕ ತಂದಿದ್ದೇನೋ, ಅದರಲ್ಲಿ ಮೊದಲನೇಯದಾಗಿ ಹೊಸದಾಗಿ ನೀವೇನೂ ಕೊಟ್ಟಿಲ್ಲ. ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಮಾನ್ಯ ಸಚಿವರು ಮೂರು ದಿವಸಗಳಿಂದ ಹೇಳುತ್ತಾ ಇದ್ದಾರೆ. ಅದನ್ನು ಸ್ವಾಗತ ಮಾಡೋಣ. ಆದರೆ ಮಂಡಲ ಪಂಚಾಯತಿಗೆ ದುಡ್ಡು ಕೊಡುತ್ತೇವೆ ಎನ್ನುವುದಕ್ಕಾಗಿಯೇ ಬದಲಾವಣೆ ತರಬೇಕೇ ? ಒಂದು ಸರಕಾರದ ಅಜ್ಞೆಯ ಮುಖಾಂತರವೂ ಮಾಡಬಹುದಾಗಿತ್ತಲ್ಲ ? ಅವರ ಅಪ್ರೋಚ್‌ನ್ನು ನಾನು ಕೇರ್‌ಫುಲ್ ಆಗಿ ನೋಡಿದ್ದೇನೆ. ನೀವು ತಾಲ್ಲೂಕು ಸಮಿತಿಗಳಿಗೆ ಅಧಿಕಾರವನ್ನು ಕೊಟ್ಟಿರಲಿಲ್ಲ, ನಾವು ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ, ಅದನ್ನೂ ಸ್ವಾಗತಿಸೋಣ. ಈ ಲೋಪದೋಷಗಳನ್ನು ಸರಿಪಡಿಸಲು I was there any necessity to bring a new Act ? They could have very well introduced an amendment. ಒಂದು ಮಂಡಲಕ್ಕೆ ಒಂದು ಲಕ್ಷರೂಪಾಯಿಗಳನ್ನು ಕೊಡುವಂಥ ಬದಲಾವಣೆಯನ್ನು ತರಲು ಇರುವಂಥ ತಾಲ್ಲೂಕು ಸಮಿತಿಗೆ ಇನ್ನಷ್ಟು ಅಧಿಕಾರವನ್ನು ಕೊಡುವಂಥ ಬದಲಾವಣೆಯನ್ನು ತರುವುದಕ್ಕಾಗಿಯೇ ಈ ಹೊಸ ವಿದೇಯಕವನ್ನು ತರುವಂಥ ವ್ಯರ್ಥ ಕಸರತ್ತನ್ನು ಮಾಡುವಂಥ ಅವಶ್ಯಕತೆ ಇಲ್ಲ. ಈಗಿರುವಂಥ ವ್ಯವಸ್ಥೆ, ಕಾನೂನು, ಈಗಿರುವಂಥ ಸಂವಿಧಾನದ ಚೌಕಟ್ಟಿನಲ್ಲಿ ತಂದಿರುವಂಥ ವಿಧೇಯಕದಲ್ಲಿ ಏನು ತಂದಿದ್ದಾರೋ ಇವೆಲ್ಲವೂ ಮೊದಲೇ ಇತ್ತು. ಎಲ್ಲಕ್ಕಿಂತ ಹೆಚ್ಚಾಗಿ ಈಗ ಇದ್ದಂಥ ವ್ಯವಸ್ಥೆಯಾಗಲೀ, ಆ ಕಾನೂನಾಗಲೀ, ಗ್ರಾಮೀಣ ಜನರ ಬದುಕನ್ನು ಹಸನು ಮಾಡಲಿಕ್ಕೆ ಗ್ರಾಮೀಣ ಭಾರತದ ಅಭಿವೃದ್ಧಿಗೆ ಅಡ್ಡಿ ಬರುವಂಥ ಯಾವ ಕಾನೂನೂ ಇರಲ್ಲಿಲ್ಲ. ಹೊಸದಾಗಿ ಏನನ್ನೂ ಕೊಟ್ಟಿಲ್ಲ. ಜನಪ್ರತಿನಿಧಿಗಳಿಗೆ ನಾವು ಕೊಟ್ಟಿದ್ದಂಥ ಅಧಿಕಾರಗಳನ್ನು ಕಿತ್ತುಕೊಂಡಿದ್ದೀರಿ. ಹಾಗಾದರೆ ಯಾವ ದೃಷ್ಟಿಯಿಂದ ಇದು ಕ್ರಾಂತಿಕಾರಕವಾಯಿತು? ಯಾವ ದೃಷ್ಟಿಯಿಂದ ಇದು ಪ್ರಗತಿಪರವಾಯಿತು ? ಇದು ನನಗೆ ಅರ್ಥವಾಗುತ್ತಾ ಇಲ್ಲ, ದಯವಿಟ್ಟು ಇದನ್ನು

ಸಚಿವರು ತಿಳಿಸ ಬೇಕು. ಒಂದು ಲಕ್ಷ ಕೊಟ್ಟಿದ್ದೇವೆ ಎಂಬುದನ್ನು ಮೂರು ಸಾರಿ ಹೇಳಿದ್ದಾರೆ, ಅದನ್ನು ನಾವು ವೆಲ್‌ಕಮ್ ಮಾಡುತ್ತೇವೆ ಎಂದು ಮೂರು ಸಾರಿ ಹೇಳುತ್ತೇನೆ. ಇದಕ್ಕೆ ಕಾನ್ಸಿಟಿಟ್ಯೂಶನಲ್ಲೀ ಪ್ರಾವಿಶನ್ ಮಾಡಬೇಕಾಗಿತ್ತು. ಈ ಅಯವ್ಯಯದಲ್ಲಿ ಇಷ್ಟು ಹಣವನ್ನು ಖರ್ಚು ಮಾಡುತ್ತೇನೆ ಎಂಬ ಮಾತನ್ನು ಹೇಳಿ ಕನ್ನಡಿಯಲ್ಲಿ ಗಂಟನ್ನು ತೋರಿ, ಅಂಕಿಅಂಶಗಳ ಜಾಲದಲ್ಲಿ ಈ ರಾಜ್ಯದ ಜನರನ್ನು ಮಾಯಾಲೋಕಕ್ಕೆ ಕೊಂಡೊಯುತ್ತಾ ಇದ್ದೀರಿ. ಇಷ್ಟು ಕೋಟಿಗಳನ್ನು ಖರ್ಚು ಮಾಡುತ್ತೇವೆ, ಪವರ್‌ಗಾಗಿಯೇ 900 ಕೋಟಿಗಳನ್ನು ಖರ್ಚು ಮಾಡುತ್ತೇವೆ, ಅಂತ ಹೇಳುತ್ತೀರಿ ಆದರೆ ನಮ್ಮಲ್ಲಿ ಇರುವುದೇ 1225ಕೋಟಿಗಳು. ನಾನ್‌ಪ್ಲಾನ್ ಎಕ್ಸ್‌ಪೆಂಡೀಚರ್‌ನ್ನು ಡಿಡಕ್ಟ್ ಮಾಡಿದ ಮೇಲೆ, ಅಂದರೆ ಬಡ್ಡಿಕೊಡುವುದು ಇತ್ಯಾದಿಗಳನ್ನು ಕಳೆದ ಮೇಲೇ ಸುಮಾರು 1025 ಕೋಟಿಗಳನ್ನು ಮಾತ್ರ ಎಂದು ಹೇಳಬಹುದು. ಅದರಲ್ಲಿ 900 ಕೋಟಿಗಳನ್ನು ನೀರಾವರಿಗೆ ಹೇಗೆ ಕೊಡುತ್ತಾರೆ ಸ್ವಾಮಿ ? 700 ಕೋಟಿಯನ್ನು ವಿದ್ಯುಚ್ಛಕ್ತಿಗೆ ಎಲ್ಲಿಂದ ಕೊಡುತ್ತಾರೆ ? ಅದರ ಜೊತೆಗೆ ಈ ವರ್ಷವೇ ಚುನಾವಣೆ ಮಾಡುವುದಾದರೆ ದುಡ್ಡು ಕೊಡಬೇಕಾಗುತ್ತದೆ. ನಾನು ಹೇಳಿದ್ದೆಲ್ಲಾ ಸರಿ ಎಂದು ಹೇಳುವ ಹಠಮಾರಿಯೂ ನಾನಲ್ಲ. ತಪ್ಪುಗಳು ಇದ್ದರೆ ತಿದ್ದಿಕೊಳ್ಳ ಬಹುದು. ನನ್ನ ವಾದ ಏನೆಂದರೆ, ಈ ಮಂಡಳ ಪಂಚಾಯತಿ ಮತ್ತು ಜಿಲ್ಲಾ ಪರಿಷತ್ತುಗಳ ಅನುಷ್ಠಾನಕ್ಕೆ ಅನುಗುಣವಾದಂಥ ಪ್ರಾವಿಶನ್ ಮಾಡಿಲ್ಲ. ಈ ಒಂದು ಹೊಸ ಕಾನೂನಿನ ಕೆಳಗೆ ಖರ್ಚು ಬರುತ್ತದೆ ಎಂದು ಹೇಳುತ್ತಿದ್ದಾರೆ. ಮಂಡಳಿಗಳು ಜಾಸ್ತಿಯಾಗುತ್ತವೆ ಎಂದು ಹೇಳುತ್ತಿದ್ದಾರೆ. ಒಂದು ಮಂಡಳಿಗೆ ಒಂದು ಲಕ್ಷ ಕೊಡುತ್ತೇನೆ ಎಂದು ಹೇಳುತ್ತಿದ್ದಾರೆ. ಅದಕ್ಕೆ ಸರಿಯಾಗಿ ಪ್ರಾವಿಶನ್ ಅವರು ಮಾಡಿದ್ದಾರೆಯೇ? ಅದಕ್ಕಾಗಿಯೇ ನಾನು ಮತ್ತೊಮ್ಮೆ ಹೇಳಬೇಕಾಗಿದೆ, ಏನೆಂದರೆ ಕನ್ನಡಿಯೊಳಗಿನ ಗಂಟನ್ನು ತೋರಿ ಅಂಕಿಅಂಶಗಳ ಮಾಯಾಜಾಲಗಳ ಮೂಲಕ ಈ ರಾಜ್ಯದ ಜನವನ್ನು ಮತ್ತೊಂದು ಸಾರಿ ಭ್ರಮಾಲೋಕಕ್ಕೆ ಕೊಂಡೊಯ್ಯುತ್ತಿದ್ದೀರಿ. ಇಷ್ಟನ್ನು ಹೇಳಿ ಈಗಾಗಲೇ ಪ್ರಸ್ತಾವನೆ ಮಾಡಿದ ಹಾಗೆ ಈ ಸಂವಿಧಾನತಿದ್ದುಪಡಿಯನ್ನು ನಾನು ಸ್ವಾಗತಿಸುತ್ತಾ ಗ್ರಾಮೀಣ ಭಾಗದ ಪುರೋಭಿವೃದ್ಧಿಗಾಗಿ ಮಾಡುವ ಯಾವುದೇ ವ್ಯವಸ್ಥೆಗಳಲ್ಲಿ ನಾನು ಮಾಡಿರುವಂಥ ಕೊಟ್ಟಿರುವಂಥ ಯಾವುದೇ ಪ್ರಾಮಾಣಿಕ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಮಾನ್ಯ ಸಚಿವರು ವಿಕೇಂದ್ರೀಕರಣದ ಕನಸು ಏನು ಸಂಪೂರ್ಣವಾಗಿದೆ ಎಂದು ಹೇಳಿದ್ದಾರೋ, ಅದನ್ನು ಕಾರ್ಯರೂಪಕ್ಕೆ ತರಲಿ ಎಂದು ಆಶಿಸಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮ್ಮನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಡಾ : ಎನ್.ಬಿ.ನಂಜಪ್ಪ (ಶ್ರವಣ ಬೆಳಗೋಳ) : ಮಾನ್ಯ ಅಧ್ಯಕ್ಷರೆ, ಈ ದಿವಸ ಕರ್ನಾಟಕ ಪಂಚಾಯತ್ ರಾಜ್ ವಿಧೇಯಕ 1993ರ ಮೇಲೆ ಸಾಕಾದಷ್ಟು ಚರ್ಚೆಗಳು ಈಗಾಗಲೇ ನಡೆದಿದೆ. ಈಗಾಗಲೇ ನಮಗೂ ಕೂಡ ಗೊತ್ತಿರುವ ಹಾಗೆ ಪಂಚಾಯತ್ ರಾಜ್ ವ್ಯವಸ್ಥೆ ಹಿಂದೆ 5 ವರ್ಷಗಳ ಕಾಲ ನಾವೆಲ್ಲರೂ ಅದು ಯಾವ ರೀತಿ ನಡೆದಿದೆ, ಅದಕ್ಕೆ ಏನು ವಿಧಿ ವಿಧಾನಗಳು ಇತ್ತು ಎನ್ನುವುದರ ಬಗ್ಗೆ ಎಲ್ಲರಿಗೂ ಕೂಡ ಗೊತ್ತಿರತಕ್ಕಂಥ ವಿಷಯವಾಗಿದೆ. ಆದರೆ ಮೂಲಕ : ಪ್ರಪಂಚದಲ್ಲಿ ಈ ಅಲೇಮಾರಿತನ ತಪ್ಪಿ ಹಳ್ಳಿಗಳ ಗುಂಪು ಮನೆಗಳ ಅಥವಾ ಪಟ್ಟಣಗಳ ಸೃಷ್ಟಿಯಾದಮೇಲೆ ಮನುಷ್ಯ ಹೇಗೆ ಆ ಗುಂಪು, ಮನೆಗಳು ಇರತಕ್ಕಂಥ ಜಾಗದಲ್ಲಿ, ಅಥವಾ ಪಟ್ಟಣಗಳು ಇರತಕ್ಕಂಥ ಜಾಗದಲ್ಲಿ ಕೆಲವು ನಿಯಮಗಳನ್ನು ಅನುಸರಿಸಿ ಹೇಗೆ ಜೀವನವನ್ನು ಮಾಡಬೇಕೆಂದು ಹೇಳಿ ಶುರುವಾದ ಅಂದಿನಿಂದ ಈ ವ್ಯವಸ್ಥೆ ಬಂದಿದೆ ಎನ್ನುವುದನ್ನು

ನಾವೆಲ್ಲರೂ ಕೂಡ ಮೂಲತ : ತಿಳಿದುಕೊಳ್ಳಬೇಕೆನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. 14ನೇ ಶತಮಾನದ ನಂತರ ಅಥವಾ ಸಿವಿಲೈಜೇಶನ್ ಅಂತ ನಾವೇನು ಕರೆಯುತ್ತೇವೆಯೋ ಅದು ಪ್ರಾರಂಭವಾದ ಮೇಲೆ ಇದಲ್ಲವೂ ನಡೆದುಕೊಂಡೇ ಬಂದಿದೆ, ಹೇಗೆ ಮನೋಧರ್ಮಶಾಸ್ತ್ರ ಒಂದು ಕಾಲದಲ್ಲಿ ಸಮಾಜಕ್ಕೆ ಹೀಗಿರಬೇಕೆಂದು ನಿಯಮಗಳನ್ನು ಸೃಷ್ಟಿಮಾಡಿತೋ ಹಾಗೆ ಒಬ್ಬ ಮನುಷ್ಯ ಗುಂಪುಮನೆಗಳನ್ನು ಕಟ್ಟಿಕೊಂಡು ಪಟ್ಟಣವನ್ನು ಹಳ್ಳಿಗಳನ್ನಾಗಿ ಮಾಡಿಕೊಂಡ ಮೇಲೆ ಏನು ವ್ಯವಸ್ಥೆಯಿಂದ ಜೀವನವನ್ನು ನಡೆಸಬೇಕೆಂದು ಒಂದೊಂದಾಗಿ ನಡೆಸಿಕೊಂಡು ಬಂದು, ನಮಗೆ ಸ್ವಾತಂತ್ರ್ಯ ಬಂದ ನಂತರ 1947 ರಿಂದೀಚೆಗೆ ಪಂಚಾಯತಿಗಳನ್ನು ಮತ್ತು ತಾಲ್ಲೂಕ್ ಬೋರ್ಡಿನ ವ್ಯವಸ್ಥೆಯನ್ನು ಮಾಡಿಕೊಂಡು ನಾವು ಹಳ್ಳಿಗಳ ಆಗುಹೋಗುಗಳನ್ನು ನೋಡತಕ್ಕ ವ್ಯವಸ್ಥೆ ಇತ್ತು. ಅದರ ಮೇಲಿನ ಇಂಪ್ರೂಮೆಂಟ್ ಕಳೆದ ಸಲ ಅಂದರೆ 1987ರಲ್ಲಿ ಬಂದಂತಹ ಮಂಡಲ್ ಪಂಚಾಯತಿ ಮತ್ತು ಜಿಲ್ಲಾಪರಿಷತ್ತಿನ ವ್ಯವಸ್ಥೆ. ಈ ವ್ಯವಸ್ಥೆ ಬಂದಮೇಲೆ ನಾವೆಲ್ಲರೂ ಅದರಲ್ಲಿ ಪಾಲ್ಗೊಂಡಿದ್ದೇವೆ. directly or in-directly.

ನಾನು ವಿಧಾನ ಸಭಾ ಸದಸ್ಯನಾದ ಮೇಲೆ ಜಿಲ್ಲಾಪರಿಷತ್ತಿನ ಕಾರ್ಯಕ್ರಮವನ್ನು ನೋಡಿದ್ದೇನೆ, ಅದರಲ್ಲಿ ಭಾಗವಹಿಸಿದ್ದೇನೆ. ಮತ್ತು ತಾಲ್ಲೂಕ್ ಪಂಚಾಯತಿಯ ಸಮಿತಿಯ ಅಧ್ಯಕ್ಷನಾಗಿ ಅದರಲ್ಲಿ ಸಕ್ರೀಯವಾಗಿ ಬಾಗವಹಿಸಿದ್ದೇನೆ. ಈಗಲೂ ಕೂಡ ಭಾಗವಹಿಸುತ್ತಿದ್ದೇನೆ. ಇದು ಎಲ್ಲರಿಗೂ ಕೂಡ ಗೊತ್ತಿರತಕ್ಕಂಥದ್ದು. ಆದರೆ ನಮಗೆ ಮೂಲತ : ಇವತ್ತು ಸಮಗ್ರವಾಗಿ ಇಂಡಿಯಾದೇಶದಲ್ಲಿ ಒಂದು ರೀತಿಯ ಯೂನಿಫಾರಮ್ ಪಾಲಿಸಿ ಇರಬೇಕೆಂದು ದಿವಂಗತ ರಾಜೀವ್ ಗಾಂಧಿಯವರ ಆಸೆ ಇತ್ತೋ ಅದರ ಫಲವಾಗಿ 1972-73ನೇ ಸಂವಿಧಾನದ ಅಮೆಂಡ್‌ಮೆಂಟ್ ಆದಮೇಲೆ ರಾಜ್ಯಗಳಿಗೆ ಕೊಟ್ಟಂಥ ಆದೇಶದ ಮೇಲೆ ಇವತ್ತು ಈ ಬಿಲ್ ಬಂದಿದೆ. ಈ ಬಿಲ್ಲಿನ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡುವಂತಹ ಎಲ್ಲ ಹಂತದಲ್ಲಿ ಚರ್ಚೆ ಮಾಡಿ, ಇದಕ್ಕೆ ಏನನ್ನು ಮಾಡಿ ಸಮಗ್ರವಾಗಿ ಎಲ್ಲರಿಗೂ ಕೂಡ ಹೊಂದಾಣಿಕೆಯಾಗತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆನ್ನುವುದೇ ಇದರ ಮೂಲಭೂತವಾದ ಉದ್ದೇಶವಾಗಿದೆ. ಇದರಲ್ಲಿ ಜಾತ್ಯಾತೀತವಾಗಿ ಪಕ್ಷಾತೀತವಾಗಿ ಇದನ್ನು ನಾವುಗಣನೆಗೆ ತೆಗೆದುಕೊಳ್ಳಬೇಕೇ ವಿನ : ಇದರಲ್ಲಿರತಕ್ಕಂಥ, ಇದೇ ಕೊನೆಯ ಸಿದ್ಧಾಂತ ಅಂತ ಹೇಳ ತಕ್ಕಂಥದ್ದು ಇಲ್ಲ. ಆದರೆ ಇರತಕ್ಕಂಥ ಸಿದ್ಧಾಂತದಲ್ಲಿ ಕಳೆದ 5 ವರ್ಷಗಳ ನಮ್ಮ ಅನುಭವದಲ್ಲಿ ಇದು ಅದಕ್ಕಿಂತ ಒಳ್ಳೆಯ ಸಿದ್ಧಾಂತ ಎನ್ನುವುದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ 1972-73ನೇ ಸಂವಿಧಾನದ ಅಮೆಂಡ್‌ಮೆಂಟ್ ಆದಮೇಲೆ ಸಮಗ್ರವಾಗಿ ಭರತ ಖಂಡಕ್ಕೇ ಜಾರಿ ಆಗಬೇಕೆನ್ನುವ ತೀರ್ಮಾನಕ್ಕೆ ನಾವು ಬಂದಮೇಲೆ ಅದಕ್ಕೆ ಅನುಮೋದನೆಯನ್ನು ಕೊಟ್ಟಮೇಲೆ ಅದರ ಮೇಲೆ ಬಂದಿರತಕ್ಕಂಥ ಇಂಪ್ರೂಮೆಂಟ್ ಈಗ ನಮ್ಮ ಕೈಯಲ್ಲಿ ಇರತಕ್ಕಂಥೆ ಅಚ್ಚು ಮಾಡಿಕೊಟ್ಟಿರತಕ್ಕಂಥ ಈ ಪುಸ್ತಕ ಏನಿದೆ, ಇದರಲ್ಲಿ ನಾವು ಮೂಲಭೂತವಾಗಿ ಸೆಕ್ಷನ್ ಬೈ, ಸೆಕ್ಷನ್, ಅಥವಾ ಅವರಿಗೆ ಕೊಡತಕ್ಕಂಥ ಅದಿಕಾರದ ಬಗ್ಗೆ ತರ್ಕ ಮಾಡುವುದಕ್ಕಿಂತ ಮುಂಚೆ ಮುಖ್ಯವಾಗಿ ಈ ಮಸ್ತಕವನ್ನು ಪ್ರಿಂಟ್ ಮಾಡಿ ಹೊಸದಾದ ವ್ಯವಸ್ಥೆ ಜಾರಿಗೆ ಬಂದಮೇಲೆ ನಿಜವಾಗಿಯೂ ಹಳ್ಳಿಗಾಡಿನಲ್ಲಿರತಕ್ಕಂಥವನಿಗೆ ಸರ್ವ ಸಕಲ ಸಂಪತ್ತುಗಳು ಸಿಗುವುದಕ್ಕೆ ಇದರಲ್ಲಿ ಮಾರ್ಗ ಮಾಡಿ ಕೊಟ್ಟಿದ್ದೇವೇ ಅಥವಾ ಇಲ್ಲವೇ ಎನ್ನುವುದೇ ಮುಖ್ಯ. ಅದು ಬಹಳ ಮುಖ್ಯ. ನಿಜವಾಗಿಯೂ ಹಳ್ಳಿಯಲ್ಲಿರತಕ್ಕಂಥವರಿಗೆ whether it is a social welfare board or

a Mandal Panchayat or a Zilla Parishad or a Taluka Panchayat ಇದರ ವ್ಯವಸ್ಥೆಯಲ್ಲಿ ನಾವು ಏನು ಮಾಡುವುದಕ್ಕೆ ಹೋಗುತ್ತಿದ್ದೇವೆ ಅಂದರೆ ಹಳ್ಳಿಗಳ ಉದ್ಧಾರಕ್ಕೆ ಹಳ್ಳಿಯಲ್ಲಿ ಜೀವನಮಾಡತಕ್ಕಂಥವನಿಗೆ ಕೊಡತಕ್ಕಂಥ ಸಿವಿಕ್ ಫೆಸಿಲಿಟೀಸ್ ಏನಿದೆ ಅದನ್ನು ಕೊಡುವುದಕ್ಕೋಸ್ಕರ ಮಾತ್ರ ಇಷ್ಟೊಂದು ಚರ್ಚೆಯನ್ನು ಇವತ್ತು ನಾವು ಮಾಡುತ್ತಿದ್ದೇವೆ. ಅದಕ್ಕೆ ಬಹಳ ಮುಖ್ಯವಾಗಿ ಅಧಿಕಾರವನ್ನು ಕೊಡಬೇಕೆಂದು ತೀರ್ಮಾನವಾಗಿದೆ, Whether it is a direct election or an indirect election ಅದರ ಬಗ್ಗೆ ನಾವು ಚಿಂತನೆ ಮಾಡುತ್ತಿದ್ದೇವೆ. ಡೈರೆಕ್ಟ್ ಎಲೆಕ್ಷನ್ಸ್ ಆದರೆ ಒಂದು ತರಹದ ಸಮಸ್ಯೆ ಪ್ರಾರಂಭವಾಗುತ್ತದೆ. ಇನ್‌ಡೈರೆಕ್ಟ್ ಎಲೆಕ್ಷನ್ಸ್‌ನ್ನು 47 ವರ್ಷಗಳಿಂದ ನೋಡಿಕೊಂಡು ಬಂದಿದ್ದೇವೆ. ಇನ್‌ಡೈರೆಕ್ಟ್ ಎಲೆಕ್ಷನ್ಸ್ ಮಾಡುವುದು ಆಮೇಲೆ ಒಬ್ಬ ಅಧ್ಯಕ್ಷರನ್ನು ಮಾಡತಕ್ಕಂಥದ್ದು, ಒಬ್ಬ ಚೀಫ್ ಮಿನಿಸ್ಟರ್‌ರನ್ನು ಮಾಡತಕ್ಕದ್ದು. ಅಥವಾ ಪ್ರೈಮ್‌ಮಿನಿಸ್ಟರ್ ಮಾಡತಕ್ಕಂಥದ್ದಲ್ಲಿ ನಮ್ಮ ದೇಶದಲ್ಲಿ ಯಾವರೀತಿ ನಡೆಯುತ್ತಿದೆ ಎನ್ನುವುದನ್ನು ಈಗಾಗಲೇ ನಾವು 47 ವರ್ಷಗಳಿಂದ ಅನುಭವಿಸಿದ್ದೇವೆ. ಡೈರೆಕ್ಟ್ ಎಲೆಕ್ಷನ್ಸ್‌ನಿಂದ ಏನು ಅನುಕೂಲ ಎನ್ನುವುದನ್ನು where they have got a president who rules the entire country for five years ಅದನ್ನು ನಾವು ನೋಡುತ್ತೇವೆ. four year rule ಅಮೇರಿಕಾದಲ್ಲಿ ಏನಿದೆ ಇದನ್ನು ನೋಡಿದ್ದೇವೆ. ಇವೆಲ್ಲದರ ತಾರತಮ್ಯವನ್ನು ಅನುಸರಿಸಿ ಹಳ್ಳಿಗನಿಗೆ ಕೊಡಬೇಕಾದಂತಹ ಸೌಲಭ್ಯಗಳನ್ನು ಕೊಡತಕ್ಕಂಥ ಪವರ್‌ನ್ನು ಇದು ಸರಿ ಇದೆಯೋ ಇಲ್ಲವೋ ಎನ್ನುವುದರ ಬಗ್ಗೆ ಯೋಚನೆ ಮಾಡತಕ್ಕಂಥದ್ದೇ ಇದರ ಮೂಲಭೂತವಾದ ಪ್ರಶ್ನೆ ಎನ್ನುವುದನ್ನು ನಾವೆಲ್ಲರೂ ಅರ್ಥಮಾಡಿ ಕೊಳ್ಳಬೇಕು. ಇದನ್ನು ಒಂದು ಪಕ್ಷಕ್ಕೋಸ್ಕರ ಅಲ್ಲ, it is for the people who are residing in villages and in nook and corner of this country. That is most important. ಆ ಬೇಸಿಕ್ ಕನ್‌ಸೆಪ್ಟನ್ನು ನಾವು ಇಟ್ಟುಕೊಂಡು ಅದರ ಬಗ್ಗೆ ನಾವು ಯೊಚನೆ ಮಾಡಿದರೆ ಇದು ಸರಿಹೋಗುತ್ತದೆಯೇ ವಿನ : ಅದು ಅವರು ಮಾಡಿದ್ದು ತಪ್ಪು ಇವರು ಮಾಡಿದ್ದು ತಪ್ಪು ಅಂತ ಅನ್ನಬಾರದು. ಹೌದು, ಪಂಚಾಯತಿ ಇತ್ತು, ಆ ಪಂಚಾಯತಿ ಬಹಳ ಚೆನ್ನಾಗಿತ್ತು. ಅಲ್ಲಿ ಅನುಕೂಲವಾದ 2-3ಹಳ್ಳಿಗಳು ಸೇರಿಕೊಂಡಿತ್ತು. ಅದಕ್ಕೆ ಹಣ ಕೊಟ್ಟು ಬಿಟ್ಟಿದ್ದರೆ - they would have changed the entire-picture of the villages, What we need, road, school, electricity, irrigation facilities, drinking water, and health. ಇಷ್ಟನ್ನು ಕೊಡುವುದಕ್ಕೆ ಏನು ಬೇಕಾಗಿದೆ. ಅಥವಾ ಅವರ 57 ಸಾವಿರ ಜನ ಬೇಕಾಗಿಲ್ಲ ಬೇಕಾಗಿರತಕ್ಕಂಥದ್ದು money,you pump the money to villages to imprive the facilities

ಅದನ್ನು ಬಿಟ್ಟುಬಿಟ್ಟು ನಾವು ಇಲ್ಲಿ ಏನು ಮಾಡುತ್ತಿದ್ದೇವೆಂದರೆ ಅಧಿಕಾರವಿಕೇಂದ್ರೀಕರಣ ಮಾಡಿ ಬಿಟ್ಟರೆ ಮಹಾ ಸರ್ವಜ್ಞರು ಆಗಿ ಬಿಟ್ಟೆವು ಅಂತ ಕೆಲವರು they talk only about decentralisation, what sort of decentralisation ? ಜಿಲ್ಲಾಪರಿಷತ್ತನ್ನು ಮಾಡಿದಿರಿ, ಈ ಕರ್ನಾಟಕ ರಾಜ್ಯದಲ್ಲಿ ಒಂದು ಡಿಸ್ಟ್ರಿಕ್ಟಿಗೆ ಒಬ್ಬ ಡಿ.ಸಿ ಯವರು ಇದ್ದರು, ಕರ್ನಾಟಕ ರಾಜ್ಯದಲ್ಲಿ ಒಂದು ಅಸೆಂಬ್ಲಿ ಇತ್ತು. ಇವತ್ತು 19 ಅಸೆಂಬ್ಲಿಗಳನ್ನು ಜಿಲ್ಲಾಪರಿಷತ್ತು ಅಂತ ಹೇಳಿ ಅಲ್ಲಿ ಮಾಡಿದಿರಿ, ಇಲ್ಲಿ ಎರಡು ಅಸೆಂಬ್ಲಿಗಳಿವೆ. ವಿಧಾನ ಸಭೆ ವಿಧಾನ ಪರಿಷತ್ತು ಅಂತ ಎರಡು ಸಭೆಗಳಿವೆ.Do you

know what happened to the financial resources of this state ? you have ruined the entire set up. How much money you are spending on the administration?

ಯಾರನ್ನು ಕೇಳಿದರೂ ಜಿಲ್ಲಾಪರಿಷತ್ತಿಗೆ ಮೀಟಿಂಗ್ ಹೋಗಿದ್ದಾರೆ ಅಂತ ಹೇಳುತ್ತಾರೆ. ಬರೀ ಅಧಿಕಾರವಿಕೇದ್ರೀಕರಣ ಅಂತ ಹೇಳಿ ಬಹಳ ಹಣ ಖರ್ಚಾಗುತ್ತಿದೆ. ಹೇಳುವುದಕ್ಕೆ ಬಹಳ ಸುಂದರವಾಗಿರುತ್ತದೆ. It is just like a poetry or This book is a poetry ಎಂದು ನಾನು ಹೇಳುತ್ತೇನೆ. ಅದು ಅಲ್ಲಿ ಬೇಕಾಗಿರುವುದಿಲ್ಲ, what we need is the money to change the picture of the villages. we don't want any other thing. ನಿಮ್ಮ ಯಾವ ತರಹದ ವ್ಯಸ್ಥೆಯು ಬೇಕಾಗಿಲ್ಲ. ನೀವು ಯಾರನ್ನು ಬೇಕಾದರೂ ಕಳುಹಿಸಿ, ಅಲ್ಲಿ ಚರಂಡಿ ಮಾಡುವುದಕ್ಕೆ , ಅಲ್ಲಿ ರೋಡ್ ಮಾಡುವುದಕ್ಕೆ ಎಲೆಕ್ಟ್ರಿಸಿಟಿ ಒದಗಿಸುವುದಕ್ಕೆ ಹಣ ಬೇಕು ಅದನ್ನು ಬಿಟ್ಟುಭಿಟ್ಟು ಈ ವ್ಯವಸ್ಥೆಗೋಸ್ಕರ ನಾನು ಪ್ರೆಸಿಡೆಂಟ್ ಆಗಬೇಕು, ನಾನು ಮೇಲಕ್ಕೆ ಬರಬೇಕು, ಅಥವಾ ಎಂ.ಎಲ್.ಎ ಗೆ ಪವರ್ ಹೋಗಿಬಿಡುತ್ತದೆ, ಅಥವಾ ಎಂ.ಪಿ.ಗೆ ಪವರ್ ಹೋಗಿಬಿಡುತ್ತದೆ,we are only thinking of these things . That is not important. You make all the arrangements, ಚೆನ್ನಾಗಿ ಮಾಡಿ ಹಳ್ಳಿಗಳಿಗೆ ಬೇಕಾಗತಕ್ಕಂಥ atleast basic necessities ಏನಿದೆ ಅವುಗಳನ್ನು ಪ್ರೊವೈಡ್ ಮಾಡುವುದಕ್ಕೆ ವ್ಯವಸ್ಥೆ ಮಾಡಿ. ಮಂಡಲ್ ಪಂಚಾಯತಿಗಳು ಇವತ್ತು ಏನಿತ್ತೋ ಅವು ಈಗ ಚಿಕ್ಕ-ಪಂಚಾಯತಿಗಳಾಗುತ್ತವೆ.it has become a viable unit, that means we have to accept it. 26 ವಿಲೇಜಸ್ ಇರುವ ಬದಲು, ಇವತ್ತು 10 ವಿಲೇಜಸ್ 5000 ಜನಸಂಖ್ಯೆ ಅಂದರೆ 1000-1500 ಜನಸಂಖ್ಯೆ ಇರತಕ್ಕ 2-3 ವಿಲೇಜಸ್ ಸೇರಿದರೆ it will become a unit ಅಲ್ಲಿ Inter action ಇರುತ್ತದೆ. ಒಬ್ಬರಿಗೊಬ್ಬರಿಗೆ ಅಂಡರ್‌ಸ್ಟ್ಯಾಂಡಿಂಗ್ ಇರುತ್ತದೆ. it will become a viable unit. They can work together better than this. ಹಿಂದೆ ಇದ್ದಂಥವರು ಕ್ಷೇತ್ರವಾರನ್ನು ಮಾಡಿರುವುದನ್ನು ನೀವು ಲೆಕ್ಕಹಾಕಿದರೆ they have divided the villages in such a way ಒಬ್ಬರೊಬ್ಬರು ಸಾವಿರಾರು ವರ್ಷವಾದರೂ ಕೂಡ ಅವರಿಗೆ ಆ ಎನಿಮಿಟಿ ತಪ್ಪಬಾರದು. ಆ ತರಹ ಮಾಡಿ ಕಾನ್ಸ್‌ಟ್ಯೂಯನ್ಸಿ ಮಾಡತಕ್ಕಂಥ ವ್ಯವಸ್ಥೆ ಮಾಡಿದ್ದೀರಿ. ಅದನ್ನು ಮಾಡುವ ಬದಲು, ಇವತ್ತು ಏನಾಗುತ್ತದೆ ಎಂದರೆ ವಯಾಬಲ್ ಯೂನಿಟ್ ಆಗುತ್ತದೆ. Everybody has to accept, then we will go the taluk level. ಇವತ್ತು ತಾಲ್ಲೂಕು ಪಂಚಾಯತ್ ಏನಿದೆಯೋ it was for only name's sake. Taluk panchayat samithi is represented by the elected people. So there will be a President. So, it is a good thing. If we push the money to taluk level, if there is an elected body, that elected body will go to the villages and they deliver the goods early. That means we have to accept that policy because it is a three tier system. It is good. Then the Zilla Parishad. When I was in the committee we suggested to have the

Zilla Parishad as a supervisory body. ನಮ್ಮ ಊರಿಗೆ ಇಷ್ಟು ಶಾಲೆಗಳು ಬೇಕಾಗಿದೆ, ಇಷ್ಟು ವಿದ್ಯಾರ್ಥಿಗಳು ಇದ್ದಾರೆ, ರೋಡ್ ಬೇಕಾಗಿದೆ, ಇಂತಿಂಥ ಕಡೆ ರೋಡ್ ಹೋಗಬೇಕಾಗಿದೆ, ಇಷ್ಟು ವಿದ್ಯುತ್ ಬೇಕಾಗಿದೆ ಎಂದು ಲಿಸ್ಟ್ ನಾವು ಕೊಡಬೇಕಾಗಿದೆ. ಹಳ್ಳಿಗಳಲ್ಲಿ ಇರತಕ್ಕವರು ತಮ್ಮ ಊರಿಗೆ ಬೇಕಾದ್ದನ್ನು ತಾಲ್ಲೂಕು ಪಂಚಾಯತ್ ಲೆವೆಲ್‌ಗೆ ತೆಗೆದುಕೊಂಡು ಬಂದು ಅಲ್ಲಿ ಫೈನಲೈಜ್ ಮಾಡಿ that means an interlink. ಇಲ್ಲಿ ಭಾಷಣ ಮಾಡುವಂತಹ ಸಂದರ್ಭದಲ್ಲಿ ಇದನ್ನು ಮೂರು ವರ್ಷಗಳಿಂದ ನೋಡಿದ್ದೇನೆ. de-linking one from another in the name of de-centralisation ನಾನು ಒಂದು ಫಲಕವನ್ನು ಓದಿದ್ದೇನೆ. ಜನತಾಪಕ್ಷದವರು ಈ ಮಂಡಲ್ ಪಂಚಾಯತ್, ಜಿಲ್ಲಾಪರಿಷತ್ ಚುನಾವಣೆಗಳಲ್ಲಿ ಹಾಕಿದ ಫಲಕ ಈ ರೀತಿ ಇತ್ತು. "ಮತ ಜನತಾಪಕ್ಷಕ್ಕೆ - ಅಧಿಕಾರ ನಿಮ್ಮ ಕೈಗೆ ಇಂತಹ ಒಂದು ದೊಡ್ಡ ಬ್ಯಾನರ್ ಓದಿದ್ದೆ. ಚುನಾವಣೆ ಪ್ರಾರಂಭವಾದಾಗ ಈ ರೀತಿಯದ್ದಲ್ಲ ಬೇಕಾಗಿರತಕ್ಕಂಥದ್ದು. ಸರ್ಕಾರದಿಂದ ಹಿಡಿದು ಮಂಡಲ್ ಪಂಚಾಯತ್‌ವರೆಗೂ there must be a link. ಅವರಿಗೆ ಪವರ್‌ಕೊಟ್ಟು ಬಿಡಿ, ನೀವು ಪವರ್‌ನ್ನೆಲ್ಲಾ ಇಟ್ಟುಕೊಳ್ಳುವಂತೆ ಮಾಡಿದ್ದೀರಿ, ನೀವು ಜಾಸ್ತಿ ಪವರ್ ಕೊಟ್ಟು ಬಿಡಿ ಅಂತ ಮಾತನಾಡುತ್ತೇವೆಯೇ ವಿನ : we have an interlink between the Mandal Panchayat to the Government. ಇವತ್ತು ನಮ್ಮಲ್ಲಿ ಏನಾಗಿದೆ ಎಂದರೆ ಬರೀ ಪವರ್‌ಗೋಸ್ಕರ ಅಥವಾ ಕುರ್ಚಿಗೋಸ್ಕರ ಬರೀ ಡಿಲಿಂಕಿಂಗ್ ಯೋಚನೆ ಮಾಡುತ್ತೇವೆಯೇ ಹೊರತು nobody is thinking of linking. So it is a sort of process. Money from the budgetary allotment should flow to the villages for its improvement.

(ಶ್ರೀ ಶಿವಾನಂದ ಎಚ್.ಕೌಜಲಗಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು) : ಈಗ ಕಾನ್‌ಸ್ಟಿಟ್ಯೂಷನ್ ಮೇಲೆ ಮಾತನಾಡುವುದಾದರೆ ಈಗಾಗಲೇ 1972-73ರಲ್ಲಿ ಅಮೆಂಡ್‌ಮೆಂಟ್ ಆಗಿದೆ. ಅದು ಶ್ರೀ ರಾಮಯ್ಯನವರಿಗೂ ಚೆನ್ನಾಗಿ ಗೊತ್ತಿದೆ. ಈಗ ಒಂದು ಸಾರಿ ಕಾನ್‌ಸ್ಟಿಟ್ಯೂಷನ್ ಬರದದ್ದು ಅದು ಸಹ ಬದಲಾವಣೆಯಾಗುತ್ತದೆ. ಅಕಸ್ಮಾತ್ ಈಗ ಮುಂದುವರೆಯುವಂತಹ ವ್ಯವಸ್ಥೆಯಲ್ಲಿ ತಪ್ಪು ಇದ್ದರೆ ಅಥವಾ ಲೂಪ್ ಹೋಲ್ಸ್ ಇದ್ದರೆ it can be amended once again.

*ಈಗ ಇದನ್ನು ಸಂಪೂರ್ಣವಾಗಿ ತೆಗೆದು ಹೊಸದಾಗಿ ಏಕೆ ಬಂದಿದೆ ಎಂದರೆ 1972-73ರ ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಆಗದೇ ಹೋಗಿದ್ದರೆ it is only to improve, the amendment was passed. ಅದಕ್ಕೋಸ್ಕರ ಇದರಲ್ಲಿ ಹೊಸದಾಗಿ ಬಂದಿದೆ. ಐದು ವರ್ಷಗಳಲ್ಲಿ with experience if there are any loopholes, you can plug at any point of time for the sake of the people, not for the sake of the individuals. ಈ ವ್ಯವಸ್ಥೆಯಾಗಬೇಕು ಎಂಬ ಮಾತನ್ನು ನಾನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಈಗ ತಾಲ್ಲೂಕು ಸಮಿತಿಯಲ್ಲಿ ಒಂದೇ ಒಂದು ಸಜ್ಜೆಷನ್ ಕೊಡುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ ನಮಗೆ ಬಹಳ ಮುಖ್ಯವಾಗಿ ಬೇಕಾಗಿರುವಂಥಾದ್ದು. ಬೇಸಿಕ್ ಸಿವಿಕ್

ಅಮೆನಿಟೀಸ್ ಇವತ್ತು ಹಳ್ಳಿಗಳಿಗೆ ಏನು ಬೇಕಾಗಿದೆಯೋ ನಮ್ಮ ವ್ಯವಸ್ಥೆಯಲ್ಲಿ ಅದರ ಪ್ಲಾನಿಂಗ್ suggestions, must come from Gramasabha. ಗ್ರಾಮಸಭೆಯಿಂದ ತೀರ್ಮಾನವಾಗಬೇಕು. ಇಂಥಿಂಥ ಊರಿಗೆ ಇಂತಿಂಥ ಅನುಕೂಲತೆಗಳು ಬೇಕಾಗುತ್ತದೆ ಎಂದು it must come to the taluk level From the Taluk Panchayat they must decide ಅದು 5 ವರ್ಷಕ್ಕೆ ಮಾಡಬಹುದು 10 ವರ್ಷಕ್ಕೆ ಅಥವಾ ಮಾರನೇ ದಿನವೇ ಮಾಡಬಹುದು. It entirely depends upon the financial resources. ಇದನ್ನು ಮಾಡತಕ್ಕಂತಹ ವ್ಯವಸ್ಥೆ ಆಗಬೇಕು.ಅದು ಗೌರ್ನಮೆಂಟ್‌ನಿಂದ ಜಿಲ್ಲಾಪರಿಷತ್, ಜಿಲ್ಲಾ ಪರಿಷತ್ತಿನಿಂದ ಗೌರ್ನಮೆಂಟ್‌ಗೆ ಗೌರ್ನಮೆಂಟ್‌ನಿಂದ ಅನುದಾನ ಬಂದಮೇಲೆ ಅದನ್ನು ಎಕ್ಸಿಕ್ಯೂಟ್ ಮಾಡತಕ್ಕಂತಹ ಕೆಲಸ ಆಗುತ್ತದೆ. Where as in Western countries, especially in America,ಈ ವಿಲೇಜ್ ಪಂಚಾಯತ್‌ಗಳು ಏನು ಇದೆಯೋ ಅಲ್ಲಿ ಈ ಗೌರ್ನಮೆಂಟ್ ಅಫೀಷಿಯಲ್ಸ್ ಮೆಂಬರ್ಸ್ ಆಗಿರುತ್ತಾರೆ. ಆ ಗ್ರಾಮ ಪಂಚಾಯತ್ ಸಭೆಯಲ್ಲಿ ಸಜೆಷನ್ಸ್ ಕೊಡುವುದಕ್ಕೆ ಅಲ್ಲಿ ಅವರು ಮೆಂಬರ್ ಆಗಿರುತ್ತಾರೆ. ಎಲ್ಲಿಗೆ ಏನೇನು ಬೇಕಾಗಿದೆ, ರೋಡ್ಸ್, ಬ್ರಿಡ್ಜಸ್ ಎಲೆಕ್ಟ್ರಿಸಿಟಿ, ಡ್ರಿಕಿಂಗ್ ವಾಟರ್, ಎಜುಕೇಷನ್, ಹೆಲ್ತ್, ಇವೆಲ್ಲದರ ಬಗ್ಗೆ ಸಜೆಷನ್ ಕೊಡುತ್ತಾರೆ. ಅದಕ್ಕೆ Government will allot same money ಆದರೆ ಅದು ಸಾಕಾಗುವುದಿಲ್ಲ. ಆ ಹಳ್ಳಿಯಲ್ಲಿ ಅವರಿಗೆ ಅಂಬಿಷಿಯನ್ ಪ್ರೋಗ್ರಾಮ್ಸ್‌ನ್ನು ಹಾಕಬೇಕು ಎಂದು ಇರುತ್ತದೆ. ಬಹಳ ಚೆನ್ನಾಗಿ ಸ್ಕೂಲ್‌ನ್ನು ಕಟ್ಟಬೇಕು, ಎಕ್ಸ್‌ಪಾಂಡ್ ಮಾಡಬೇಕು, ಅಥವಾ ಇನ್ನೊಂದು ರಂಗಮಂದಿರ ಕಟ್ಟಬೇಕು ಕಮ್ಯೂನಿಟಿ ಹಾಲ್ ಕಟ್ಟಬೇಕು, ಎಂದು ಆ ಸಭೆ ತೀರ್ಮಾನ ಮಾಡಿದ್ದರೆ ಆಗ that Committe has to increase the financial resources either by taxation or by any other methods

ಅವರು ಇನ್‌ಕ್ರೀಸ್ ಮಾಡಿದರೆ ಆಗ ಅದನ್ನು ಎಕ್ಸಿಕ್ಯೂಟ್ ಮಾಡಬಹುದು. ಈ ರಿಸೋರ್ಸಸ್‌ಗೆ ಗೌರ್ನಮೆಂಟ್‌ನವರು ಕೊಡತಕ್ಕಂಥ ನಿಗದಿತವಾದ ಅಲಾಟ್‌ಮೆಂಟ್ ಏನು ಬರುತ್ತದೊ ಅದನ್ನು ಕೊಡುತ್ತಾರೆ. ಆದರೆ ಅದಕ್ಕಿಂತ ಮೇಲೆ ಮಾಡಬೇಕು ಎಂದು ಇದ್ದರೆ This Committee has to decide making arrangements to improve the financial resources. ಇದರ ಬಗ್ಗೆಯೂ ಕೂಡ ನಾವು ಯೋಚನೆ ಮಾಡಬಹುದು. ಇವತ್ತು ಕೆಲವು ಗ್ರಾಮಗಳಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟುವಂತಹ ಸಮಯದಲ್ಲಿ ಒಂದು ಸ್ಕೂಲನ್ನು ಕಟ್ಟುವಂತಹ ಸಮಯದಲ್ಲಿ That Committee, if they can try to improve their financial resources, ಅದಕ್ಕೆ ಡೊನೇಷನ್ ತೆಗೆದುಕೊಳ್ಳಬಹುದು ಅಥವಾ ಅಲ್ಲಿ ಎಲ್ಲರೂ ಸೇರಿ ಕಲೆಕ್ಟ್ ಮಾಡಿ ಕೊಡಬಹುದು ಅಥವಾ ಟ್ಯಾಕ್ಸೇಷನ್ ಮೇಲೆ ಆ ಗ್ರಾಮದವರೇ, ಒಪ್ಪಂದ ಮಾಡಿಕೊಂಡು ನಾವು ಇಷ್ಟಿಷ್ಟನ್ನು ಕೊಡುತ್ತೇವೆ ಎಂದು ಮಾಡತಕ್ಕಂತಹ ವ್ಯವಸ್ಥೆ ವೆಸ್ಟ್ರನ್ ಕಂಟ್ರೀಸ್‌ನಲ್ಲಿ ಕೆಲವು ಕಡೆ ಇದೆ.ಆದರೆ ನಮ್ಮಲ್ಲಿ ಈಗ ಏನಾಗಿದೆ ಎಂದರೆ ಏನೂ ಇಲ್ಲದ ಹಾಗೆ ಆಗಿದೆ. ಅಕಸ್ಮಾತ್ ಯಾರಾದರೂ ಒಬ್ಬ ಪವರ್‌ಫುಲ್ ಮೆಂಬರ್ ಇದ್ದರೆ, ಅವನು ಬಂದಂಥ ಅನುದಾನವನ್ನೆಲ್ಲಾ ಅವನ ಊರಿಗೆ ಉಪಯೊಗಿಸಿಕೊಂಡು ಬಿಡುತ್ತಾನೆ. ಅಥವಾ ಒಬ್ಬ ಪ್ರಧಾನ ಇದ್ದು, ಅವನು ಪವರ್‌ಫುಲ್ ಆಗಿದ್ದರೆ 5 ವರ್ಷ ಬಂದಿದ್ದು ಎಲ್ಲಾ ಅವನ ಊರಿನಲ್ಲಿ ಕೆಲಸ ಆಗುತ್ತದೆ, ಆದರೆ ಇನ್ನುಳಿದ 25

ಊರುಗಳಿಗೆ ಏನೂ ಕೆಲಸ ಇವತ್ತು ಆಗಿಲ್ಲ, ಅದನ್ನು ನಾವು ಈಗಾಗಲೇ ನೋಡಿದ್ದೇವೆ. It is by our experiance. Even sometimes, this Harijanwadaಗೆ ಹಣವನ್ನು ಕೊಟ್ಟಿದ್ದರೆ ಅದನ್ನು ಬೇರೆ ಕಡೆ ಉಪಯೋಗಿಸಿಕೊಂಡಿರುವ ಪ್ರಕರಣಗಳು ಇವತ್ತು ಮಂಡಲ್ ಪಂಚಾಯಿತ್‌ನಲ್ಲಿ ಇದೆ. ಇನ್ನು ಜಿಲ್ಲಾಪರಿಷತ್‌ನಲ್ಲಿ ನಮಗೂ ಮತ್ತು ಗೌರ್ನಮೆಂಟ್‌ಗೂ ಯಾವುದೇ ಸಂಬಂಧವೇ ಇಲ್ಲ ಎಂದು ಹೇಳುವಂತಹ ವ್ಯವಸ್ಥೆನೂ ಕೂಡ ಇದೆ. In Hassan the Zilla Parishat President was able to tell that we have no connection between us and the Government and our Government is entirely separate ನಮ್ಮದೇ ಆದಂತಹ ಒಂದು ಗೌರ್ನಮೆಂಟ್ ಇದೆ, ಆದ್ದರಿಂದ ನಿಮಗೂ ನಮಗೂ ಸಂಬಂಧವೇ ಇಲ್ಲ ಎಂದು ಹೇಳುತ್ತಾರೆ. ಮೆಡಿಕಲ್ ಆಫೀಸರ್ ಒಬ್ಬರನ್ನು ಟ್ರಾನ್ಸ್‌ಫರ್ ಮಾಡಿ ಜಿಲ್ಲಾಪರಿಷತ್ ಪ್ರೆಸಿಡೆಂಟ್ ಹತ್ತಿರ ಕಳುಹಿಸಿದರೆ ಆ ಅಫೀಸರ್‌ನ್ನು ಪ್ರೆಸಿಡೆಂಟ್ ಮೇಲೆ ಕೆಳಗೆ ನೋಡಿ ನಿನ್ನನ್ನು ಡ್ಯೂಟಿಗೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, ನೀನು ಹೋಗಬಹುದು ಎಂದು ಗೌರ್ನಮೆಂಟ್‌ಗೆ ವಾಪಸ್ಸು ಕಳುಹಿಸಿರತಕ್ಕಂತಹ ಪ್ರಕರಣಗಳು ಇವೆ. Do you want such sort of deentralisation? When a Medical Officer is posted there by the Government and when he goes there, and approaches the Zilla parishat President, he says, I dont want you, you can go back. Do you mean to say that you want such types decentralisation of power ? That is not correct. You must have a linkage between the Government and to the last man. We are all one. We are here to serve the people. He may be a Mandal Panchayat President, or M.L.A, or M.L.C,or M.P, But we are the representatives of the people and we have to work for the benefit of the people up to the last man. ಈ ಐಡಿಯಾಸ್ ಮೇಲೆ ನಾವು ಇದನ್ನು ಬಿಲ್ಡಪ್ ಮಾಡಬೇಕೇ ವಿನ : ಇದನ್ನು ನಾನು ಮೂಡ ತಕ್ಕಂಥಾದ್ದು ಅಲ್ಲ. ಇದು ಪರ್ಮನೆಂಟ್ ವ್ಯವಸ್ಥೆ ಆಗಬೇಕು. ಈಗ ಕಾನ್ಸ್‌ಟಿಟ್ಯೂಯನ್ಸಿ ಮಾಡತಕ್ಕಂತಹ ಸಂದರ್ಭದಲ್ಲಿ You must have a central point ಇವತ್ತು ಕಾನ್ಸ್‌ಟಿಟ್ಯೂಯನ್ಸಿ ಮಾಡಿರುವಾಗ ಯಾವುದೋ ಒಂದು ಕಾರ್ನರ್ ಇರತಕ್ಕಂತಹ ವಿಲೇಜನ್ನು ಸೆಂಟರ್ ಮೂಡಿ ಈ ಕಡೆ 25 ಕಿಲೋಮೀಟರ್‌ನಿಂದ ಆ ಊರಿಗೆ ಹೋಗತಕ್ಕಂತಹ ವ್ಯವಸ್ಥೆಯನ್ನು ಇದರಲ್ಲಿ ಮಾಡಿಯಾಗಿದೆ. ಇದೆಲ್ಲಾ ಕೇವಲ ವೋಟಿಗೋಸ್ಕರ. not for the sake of the people ಇಂತಹ ವ್ಯವಸ್ಥೆ ತಪ್ಪಬೇಕು. This must be a permanent feature.ಇದು ಜನಗಳಿಗೋಸ್ಕರ ಆಗಬೇಕೇ ಹೊರತು ಯಾವುದೋ ಒಂದು ರಾಜಕೀಯ ಪಕ್ಷಕ್ಕಾಗಲಿ. ಅಥವಾ ಯಾರೋ ಒಬ್ಬ ಪ್ರಭಾವಿತ ರಾಜಕಾರಣಿಗಾಗಲಿ ಈ ತರಹದ ವ್ಯವಸ್ಥೆ ಆಗಕೂಡದು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗ ನನ್ನ ತಾಲ್ಲೂಕಿನಲ್ಲಿ ಚನ್ನರಾಯಪಟ್ಟಣದ ಪಕ್ಷದಲ್ಲಿ ಇರತಕ್ಕಂಥ ಒಂದು small village has been linked to Nuggehalli. ಆ 35 ಕಿಲೋಮಿಾಟರ್ ಏತಕ್ಕ ? ಈ ಕ್ಯಾಂಡಿಡೇಟ್ ಅವನು ಜಿಲ್ಲಾಪರಿಷತ್ತಿಗೆ ಕಂಟೆಸ್ಟ್

ಮಾಡಬೇಕಾಗಿರುವುದರಿಂದ ಈ ವಿಲೇಜನ್ನು ಆ ಹೋಬಳಿ ಹೆಡ್‌ಕ್ವಾರ್ಟರ್ಸ್‌ಗೆ ಸೇರಿಸಿ ಮಾಡಿರತಕ್ಕಂಥ ವ್ಯವಸ್ಥೆ ಇದೆ. ಎಲ್ಲಿ ಹರಿಜನ ಗಿರಿಜನರು ಜಾಸ್ತಿ ಇದ್ದಾರೋ ಅದನ್ನು ಬಿಟ್ಟುಬಿಟ್ಟು ಮೂರು ಹೋಬಳಿಗಳನ್ನು ಸೇರಿಸಿ ಒಂದು ಕಾನ್‌ಸ್ಟಿಟ್ಯೂಯೆನ್ಸಿ ಮಾಡಿ ಅದು ರಿಸರ್ವ್ ಕಾನ್‌ಸ್ಟಿಟ್ಯೂಯೆನ್ಸಿ ಮಾಡಿರತಕ್ಕಂಥ ಒಂದು ನಿದರ್ಶನ ಇದೆ. ಇಂಥ ನ್ಯೂನತೆಗಳೆಲ್ಲ ತಪ್ಪಬೇಕಾಗುತ್ತದೆ. ಇದಕ್ಕೆ we must put an end to this ಇದು ಜನಗಳಿಗೋಸ್ಕರ ಆಗಬೇಕಾಗಿದೆಯೇಹೊರತು, ಯಾವುದೇ ಪಕ್ಷಕ್ಕೋಸ್ಕರ ಅಥವಾ ಯಾರದೋ ಪ್ರಭಾವಕ್ಕೆ ಒಳಗಾಗತಕ್ಕಂಥ ವ್ಯವಸ್ಥೆಯಾಗಬಾರದು. ಅವತ್ತು ಹೋದಸಾರಿ ನಾನು ಜನತಾ ಪಕ್ಷದ ಪುಸ್ತಕದಲ್ಲಿ ನೋಡಿದ್ದೆ. ಕಂಪಾಸನ್ನು ಇಟ್ಟುಕೊಂಡು ಸೆಂಟ್ರಲ್ ಪ್ಲೇಸನ್ನು ಫಿಕ್ಸ್ ಮಾಡಿ ಮಾಡಬೇಕು ಎಂದು ಹೇಳಿ ಆ ಪುಸ್ತಕದಲ್ಲಿ ಇದೆ. ಆದರೆ ಮಾಡಿದ್ದೇನು ? ಈ ತರಹದ ವ್ಯವಸ್ಥೆ ಇನ್ನು ಮುಂದು ಕೂಡ ಆಗಕೂಡದು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದು ಪರ್ಮನೆಂಟ್ ವ್ಯವಸ್ಥೆಯಾಗಬೇಕು. ಜನಗಳಿಗೋಸ್ಕರ ಆಗಬೇಕು. ಇದರಲ್ಲಿ ಅನೇಕ ಒಳ್ಳೆಯ ವಿಷಯಗಳಿವೆ. ನಾನು ಅಬ್ಸರ್ವ್ ಮಾಡಿದಹಾಗೆ we are concentrating only on power ಯಾರ ಹತ್ತಿರ power ಇರಬೇಕು, ಎಲ್ಲಿಗೆ ಹೋಗಬೇಕು ಎನ್ನುವುದರ ಮೇಲೆ ಮಾತನಾಡುತ್ತಿದ್ದೇವೆಯೇ ಹೊರತು We are not talking about the basic importance of this Panchayat Raj, their structure. ಈ ಪಂಚಾಯತ್‌ರಾಜ್ ಬಗ್ಗೆ ಏನು ಗಾಂಧೀಜಿಯವರು ಬಹಳ ಆಸೆ ಇಟ್ಟುಕೊಂಡಿದ್ದರೋ ಅದರ ವ್ಯವಸ್ಥೆ, ಅವರು ಇಂಡಿವಿಜುಯಲ್ ಆಗಿ ಅವರವರ ಊರುಗಳನ್ನು ಅಭಿವೃದ್ಧಿ ಮಾಡಿಕೊಳ್ಳಲಿ, ಅಲ್ಲಿ ಬರತಕ್ಕಂಥ ವ್ಯವಸ್ಥೆ ಸರಿಯಾಗಲಿ ಎನ್ನತಕ್ಕಂಥ ಒಂದು ಮೂಲೋದ್ದೇಶ ಇದ್ದರೂ ಕೂಡ When the administration matter and the financial matter come, it must be equally attended. This is most important. It is not the Act or the Rules or the amendments that are important. What we are really going to give to the poor people who have been neglected since thousands of years, is important. ನಮ್ಮಲ್ಲಿ ಈಗ ಏನಾಗಿದೆ ಎಂದರೆ ನಾವು ಏನೇ ಯೋಚನೆ ಮಾಡಿದರೂ ಕೂಡ ಅವರವರ ಸೇಫ್ಟಿ, ಅವರವರದೇ ಮಾತು ಎತ್ತಿದರೆ ಜಾತಿಯುತ ಬಗ್ಗೆ ಮಾತನಾಡುತ್ತೇವೆ. ಮಾತು ಎತ್ತಿದರೆ ಯಾವುದೋ ಊರಿನಲ್ಲಿ ಒಂದು ಗಲಾಟೆಯಾಗಿಬಿಟ್ಟರೆ ಅಲ್ಲಿ ಅವನ ಹೊಲಕ್ಕೋಸ್ಕರವೋ, ಹೊಲ ಕೊಯ್ಯುವುದಕ್ಕೋಸ್ಕರವೋ ಅಥವಾ ಕಳ್ಳತನ ಮಾಡಿದ್ದಕ್ಕೋ ಅಥವಾ ಎಲೋತೆಂಗಿನ ಕಾಯಿ ಕೆಡವಿದ್ದಕ್ಕೋ ಗಲಾಟೆಯಾಗಿಬಿಟ್ಟರೆ ಅಲ್ಲಿ ಬೇರೆ ಬೇರೆ ಜಾತಿಯವರು ಪಕ್ಕ ಪಕ್ಕದಲ್ಲಿ ಇದ್ದು ಎರಡು ಜಾತಿಯ ಇಬ್ಬರು ಸೇರಿಕೊಂಡು ಅಲ್ಲಿ ಗಲಾಟೆ ಮಾಡಿದರೆ the entire country has to suffer ಆದ್ದರಿಂದ ಇಂಥದ್ದರಲ್ಲಿ We must put an end to this.

ಎಲ್ಲೋ ನಡೆದಂಥ ವಿಷಯವನ್ನು ಇಲ್ಲಿಗೆ ತೆಗೆದುಕೊಂಡು ಬಂದು ಇಲ್ಲಿ ನಾವು ಜನಗಳ ಬಗ್ಗೆ ಯೋಚನೆ ಮಾಡುವುದು ಬಿಟ್ಟುದೇಶದ ಬಗ್ಗೆ ಯೋಚನೆ ಮಾಡುವುದು ಬಿಟ್ಟು ಯಾವುದೋ ಒಂದು ನ್ಯೂಸ್ ಪೇಪರ್‌ನಲ್ಲಿರುವ ನ್ಯೂಸ್ ತೆಗೆದುಕೊಂಡು ಬಂದು ಅದನ್ನು ಇಲ್ಲಿ ಗಂಟೆಗಟ್ಟಲೆ ವಾದ ಮಾಡುತ್ತಿದ್ದೇವೆ. ಆದ್ದರಿಂದ ಈಗ ಯಾವುದಕ್ಕೂ ನಾವು ಪ್ರಾಮುಖ್ಯತೆ ಕೊಡಬೇಕೋ ಯಾವುದಕ್ಕೆ ಹೆಚ್ಚಿನ ಕಾಲವನ್ನು ಕಳೆಯಬೇಕು ಎಂಬ

ಬಗ್ಗೆ ನಾವು ಯೋಚನೆ ಮಾಡತಕ್ಕಂಥ ಕಾಲ ಇಲ್ಲಿ ಬಂದಿದೆ. ಏಕೆಂದರೆ ನಮ್ಮ 50 ದಿವಸಗಳ ಅಸೆಂಬ್ಲಿಯಲ್ಲಿ ನೋಡಿದರೆ ನೀವು ನಮ್ಮ ರೆಕಾರ್ಡನ್ನು ತೆಗೆದು ನೋಡಿದರೆ ನಮ್ಮ ರಾಜ್ಯದ ಹಣವನ್ನು ಪ್ರತಿ ನಿಮಿಷಕ್ಕೂಬೇಕಾದಷ್ಟು ಖರ್ಚು ಮಾಡಲಿದ್ದೇವೆ. ನಾವು ಇಲ್ಲಿ ದೇಶದ, ಬಗ್ಗೆ ಸಮಾಜದ ಬಗ್ಗೆ ಚಿಂತನೆಯನ್ನು ಮಾಡುವುದನ್ನು ಬಿಟ್ಟು ಇನ್ನಾವುದೋ Political ego ಇಟ್ಟುಕೊಂಡೋ ಅಥವಾ ಇನ್ನಾವುದೇ ಪೇಪರ್‌ನಲ್ಲಿ ಬಂದಂಥ ನ್ಯೂಸ್ ತೆಗೆದುಕೊಂಡು ಬಂದು ಅದರ ಬಗ್ಗೆ ಗಂಟೆಗಟ್ಟಲೆ, ಭಾಷಣ ಮಾಡಿಕೊಂಡು ಇಲ್ಲಿ ಕಾಲ ಕಳೆಯತಕ್ಕಂದದ್ದನ್ನು I do not know how much of time we have spent for nothing ಎಂದು ನಾನು ಈ ಸಭೆಯ ಮೂಲಕ ಅಧ್ಯಕ್ಷರಿಗೆ ವಿನಂತಿ ಮಾಡಿಕೊಳುತ್ತೇನೆ. ಏಕೆಂದರೆ, We must put an end to this. We are not at all giving importance for time.

ಬಹಳಷ್ಟು ಶೀಲದ ಬಗ್ಗೆ ಮಾತನಾಡುತ್ತೇವೆ. ಕಾಲದ ಬಗ್ಗೆ ಯಾರು ಕೂಡ ಗಣನೆಗೆ ತೆಗೆದುಕೊಳ್ಳತಕ್ಕಂಥವರು ಬಹಳಷ್ಟು ಕಡಿಮೆಯಾಗಿದ್ದಾರೆ. ಬರೀ ಶೀಲದ ಬಗ್ಗೆ ಮಾತನಾಡಿ ಏನು ಪ್ರಯೋಜನ ? We must follow either Japan, or Germany or United States of America. ಕೊನೆಯಪಕ್ಷ ಕಾಪಿ ಹೊಡೆಯುವುದನ್ನಾದರೂ ಮಾಡಿ ನಾವು ಸ್ವಲ್ಪ ಜನರಾದರೂ ಅದನ್ನು ಕಲಿತು ಮಾರ್ಗದರ್ಶನ ಕೊಟ್ಟರೆ ಒಳ್ಳೆಯದು ಎಂದು ನನಗನಿಸುತ್ತದೆ.

12.50 ಎ.ಎಂ

ಆಮೇಲೆ ವಿಕೇಂದ್ರೀಕರಣ ಮೂಲತ : ಈ Resource mobilisation is most important ಮಂಡಲ್ ಪಂಚಾಯತಿ, ತಾಲ್ಲೂಕು ಪಂಚಾಯತಿ,ಬಹಳ ಚೆನ್ನಾಗಿ ಕೆಲಸ ಮಾಡಬೇಕು ಎನ್ನುವುದದಾದರೆ ನಮ್ಮ ಅನುದಾನ ಏನು ಇಲ್ಲಿಂದ ಫೈನಾನ್ಷಿಯಲ್ ಅಸಿಸ್ಟೆನ್ಸ್ ಇಲ್ಲಿಂಥ, ಗವರ್ನಮೆಂಟಿಂದ ಹೋಗುತ್ತದೋ ಅದರ ಜೊತೆಗೆ ನೀವು ಅಧಿಕಾರವನ್ನು ಮಂಡಲ್ ಪಂಚಾಯತಿಗೆ ರೀಸೋರ್ಸ್ ಮೊಬಿಲೈಸೇಷನ್ ಕೊಟ್ಟಿದ್ದೀರೋ, ಆ ಒಂದು ಹಣವನ್ನು ಇಲ್ಲಿಂದ ಆಗ್‌ಮೆಂಟ್ ಮಾಡದೇ ಹೋದರೆ ಅಲ್ಲಿಯೇ ಬರತಕ್ಕ ರಿಸೋರ್ಸ್ ಏನು ಇದೆಯೋ ಅದರಲ್ಲಿ ಯಾವ ಇಂಪ್ರೂವ್‌ಮೆಂಟನ್ನು ಹಳ್ಳಿಗಳಲ್ಲಿ ಮಾಡುವುದಕ್ಕೆ ಸಾಧ್ಯತೆ ಆಗುವುದಿಲ್ಲ. ಇವತ್ತು ಕೆಲವು ಮಂಡಲ್‌ಗಳಿಗೆ ಫೈನಾನ್ಷಿಯಲ್ ರಿಸೋರ್ಸ್ ಚೆನ್ನಾಗಿ ಸಿಕ್ಕಬಹುದು. ಆದರೆ ಬಹಳಷ್ಟು ಮಂಡಲಗಳಿಗೆ, ಪಂಚಾಯತಿಗಳಿಗೆ ವ್ಯವಸ್ಥೆ ಏನು ಇದೆಯೋ ಅದಕ್ಕೆ ಫೈನಾನ್ಷಿಯಲ್ ರಿಸೋರ್ಸ್ ಬಹಳಷ್ಟು ಕಡಿಮೆ ಇರುತ್ತದೆ. ಅವರಿಗೆ ಲೈಟ್ ಛಾರ್ಜ್ ಕೂಡ ಕಟ್ಟುವುದಕ್ಕೆ ಆಗುವುದಿಲ್ಲ. ವಾಟರ್ ಸಪ್ಲೈಯನ್ನು ಮ್ಯಾನೇಜ್ ಮಾಡುವುದಕ್ಕೆ ಆಗುವುದಿಲ್ಲ. ಊರಿನ ಒಳಗಡೆ ವ್ಯವಸ್ಥೆಯನ್ನು ಕೂಡ ಸರಿಯಾದ ರೀತಿಯಲ್ಲಿ ಅವರು ಇಟ್ಟುಕೊಳ್ಳುವುದಕ್ಕೆ ಸಾಧ್ಯ ಆಗುವುದಿಲ್ಲ. ಅದಕ್ಕೆ ನಾನು ಒಂದೇ ಒಂದು ಪ್ರಾಕ್ಟಿಕಲ್ ಎಕ್ಸ್‌ಪೀರಿಯನ್ಸ್‌ನಲ್ಲಿ ಈ ಐದು ವರ್ಷಗಳಕಾಲದಲ್ಲಿ ಆಗಿರತಕ್ಕದ್ದನ್ನು ಹೇಳುವುದಾದರೆ,ಅದು ಗ್ರಾಮದೊಳಗಡೆ ಇರತಕ್ಕ ಕೆಲಸ. ಅದು ಹೆಲ್ತ್ ಇರಬಹುದು, ಎಜುಕೇಶನ್ ಇರಬಹುದು ಒಳಚರಂಡಿ ವ್ಯವಸ್ಥೆ ಇರಬಹುದು, ಗ್ರಾಮದ ಒಳಗಡೆ ಇರತಕ್ಕಂಥ ರಸ್ತೆಗಳು ಆಗ ಬಹುದು. ಇದು ಮಂಡಲ್ ಪಂಚಾಯತ್‌ಗೆ ಏನು ನೀವು ವ್ಯವಸ್ಥೆ ಮಾಡುತ್ತೀರೋ ಅದಕ್ಕೆ ಕೊಡತಕ್ಕ ವ್ಯವಸ್ಥೆ ಆದರೆ

ಇನ್ನೂ ಹೊರಗಡೆ ಇರತಕ್ಕದ್ದು ಅಂದರೆ ಏನು ಲಿಂಕ್ ರೋಡ್ಸ್ ಇರುತ್ತದೋ ಅಥವಾ ಇನ್ನೇನಾದರೂ ಬೇರೆಯದು ಇರುತ್ತದೋ ಅದನ್ನು ಪಂಚಾಯತ್ ವ್ಯವಸ್ಥೆಯಲ್ಲಿ ಅಲ್ಲಿ ಮಾಡಿ, ಅದನ್ನು ನೋಡಿಕೊಳ್ಳತಕ್ಕ ವ್ಯವಸ್ಥೆ ಮಾಡಿ. ಏನು ಮೇನ್ ರೋಡ್ಸ್, ಆಮೇಲೆ ಎಲೆಕ್ಟ್ರಿಸಿಟಿ ಇರಿಗೇಷನ್ ಇದೆಲ್ಲಾ ಏನು ಇದೆಯೋ ಇದನ್ನು ಡೈರೆಕ್ಟಾಗಿ Through the individual Departments ಮ್ಯಾನೇಜ್ ಮಾಡಿದರೆ ಮಾತ್ರ ಅವತ್ತು ಪಂಚಾಯತ್ ರಾಜ್ ಕೆಲಸ ಮಾಡುತ್ತದೆ. ಡೀಲಿಂಕಿಂಗ್ ಅವರಿಗೇ ಕೊಟ್ಟುಬಿಡಿ, ಅವರೇ ಎಲ್ಲಾ ನೋಡಿಕೊಳ್ಳುತ್ತಾರೆ, ಅವರೇ ಮಾಡಿಬಿಡಲಿ ಎಂದರೆ ಸಧ್ಯಕ್ಕೆ ಇನ್ನು 50 ವರ್ಷಗಳ ಕಾಲ ನಮ್ಮ ದೇಶದಲ್ಲಿ ಆ ವ್ಯವಸ್ಥೆ ಸರಿಯಾಗಿ ಆಗುವುದಿಲ್ಲ ಎನ್ನುವ ಮಾತನ್ನು ಮುಚ್ಚುಮರೆ ಇಲ್ಲದೆ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನೀವು ನಿಜವಾಗಿ ಕೂಡ ಹಳ್ಳಿಗಳಿಗೆ ಏನಾದರೂ ಒಳ್ಳೆಯದು ಮಾಡಬೇಕು ಎನ್ನುವುದಾದರೆ Think about sanitation, Drinking water and cleanliness of the villages,

ಇದೆಲ್ಲವನ್ನು ಅವರು ಮ್ಯಾನೇಜ್ ಮಾಡತಕ್ಕ ವ್ಯವಸ್ಥೆ ಆಗಬೇಕು. ಅದಕ್ಕೆ ಸಫಿಷಿಯೆಂಟ್ ಫೈನಾನ್ಸಿಯಲ್ ಅಸಿಸ್ಟೆನ್ಸ್ ಬೇಕಾಗುತ್ತದೆ. ಇದನ್ನು ಮಾಡಿದ್ದರೆ ಆಗ ಗ್ರಾಮಗಳನ್ನು ಚೆನ್ನಾಗಿ ಇಟ್ಟುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆದರೆ ಇದೆಲ್ಲವನ್ನೂ ಒಟ್ಟಿಗೆ ಸೇರಿಸಿ ಮಾಡಿದರೆ ಇನ್ನೇನೂ ಆಗುವುದಿಲ್ಲ. ನನಗೆ ಗೊತ್ತಿರುವಂತೆ ಇವತ್ತು ನೀವು ಪವರ್ಸನ್ನು ಕೊಟ್ಟಿರಿ. ಎಷ್ಟು ಮಂಡಲ್‌ಗಳಲ್ಲಿ ಸೈಟ್‌ಗಳನ್ನು, ಗುಂಡು ತೋಪಿನಲ್ಲಿ ಇದ್ದಂತಹ ಮರಗಳನ್ನು , ಆ ಮೇಲೆ ರೋಡ್ ಸೈಡ್‌ನಲ್ಲಿದ್ದಂತಹ, ಗವರ್ನಮೆಂಟಿಗೆ ಸೇರಿದಂತಹ ಜಾಗವನ್ನು ಕೂಡ ಅವರಿಗೆ ಪಟ್ಟಾಮಾಡಿ ಕೊಡತಕ್ಕ ವ್ಯವಸ್ಥೆ ಮಾಡಿ, ಇವತ್ತು ಎಲ್ಲಾ ಕೋರ್ಟ್‌ನಲ್ಲಿ ಬಿದ್ದಿರತಕ್ಕ ಅನೇಕ ಕೇಸ್‌ಗಳು
ಇದ್ದೆವೆ Individual cases, I do not want to go into details.

ಇಂತಹ ವ್ಯವಸ್ಥೆ ಆಗದಂತೆ ಅದಕ್ಕೆ clear cut idea, their powers and responsibilities and resources

ಇದಿಷ್ಟೂ ಕೂಡ ಡಿಫೈನ್ ಮಾಡಬೇಕು. clear picture must be there and power must be given to them. ಹೀಗೆ ಮಾಡಿ ಇನ್ನು ಉಳಿದಿದ್ದನ್ನೆಲ್ಲಾ ಬೇರೆ ಈ ಡಿಪಾರ್ಟ್‌ಮೆಂಟ್‌ಗಳಲ್ಲಿ ಮ್ಯಾನೇಜ್ ಮಾಡತಕ್ಕ ವ್ಯವಸ್ಥೆ ಆದಾಗ ಮಾತ್ರ ಈ ರೂರಲ್ ಡೆವಲಪ್‌ಮೆಂಟ್ ಮಾಡ ಬೇಕು ಎಂದು ನಾವೇನು ಸದಿಚ್ಛೆಯನ್ನು ಇಟ್ಟುಕೊಂಡಿದ್ದೇವೆ, ಅದು ಫರಿಲ್‌ಫಿಲ್ ಆಗಬೇಕು ಎನ್ನುವುದಾದರೆ ಈ ಒಂದು ವಿಷಯಗಳ ಮೇಲೆ ತಾವು ಗಮನವನ್ನು ಹರಿಸಬೇಕು ಎನ್ನುವ ಮಾತನ್ನು ಹೇಳುತ್ತೇನೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ನಾನು ಇದನ್ನು ಕೂಲಂಕಷವಾಗಿ ಓದಿದ್ದರೂ ನಾನು ಕ್ಲಾಸ್ ಬೈ ಕ್ಲಾಸ್ ಹೇಳುವುದಕ್ಕೆ ಇಚ್ಛೆ ಪಡುವುದಿಲ್ಲ. ಮತ್ತು ಇವರ ಬಗ್ಗೆ ಎಷ್ಟು ಮಾತನಾಡಿದರೂ ಸಹ ಈಗಾಗಲೇ ಕೊನೆಯ ಹಂತಕ್ಕೆ ಬಂದಿದೆ. ಆದರೆ ಒಟ್ಟಿನಲ್ಲಿ ಹೇಳುವುದಾದರೆ ಇದು ಚೆನ್ನಾಗಿದೆ.

ಈ ವ್ಯವಸ್ಥೆಯಿಂದ ನಮ್ಮ ಹಳ್ಳಿಗಳ ಉದ್ಧಾರ ಆಗಲಿ. ಹಳ್ಳಿಗಳಲ್ಲಿ ಶಾಂತಿ ನೆಲಸತಕ್ಕ ಕೆಲಸ ಕೂಡ ಇದರಲ್ಲಿ ಆಗಿದೆ. ಏತಕ್ಕೆಂದರೆ ಆ ಪಾರ್ಟಿ ಸಿಂಬಲ್ಸ್ ಇಲ್ಲದೇ ಯಾವುದು ಎಲೆಕ್ಷನ್ ನಡೆಯಬೇಕು ಎಂದು ಇತ್ತೋ, ಅದಕ್ಕೆ ನಮ್ಮ ಕಡೆ ಕರೆಯುತ್ತಿರತಕ್ಕದ್ದು, ಮಂಡಲ್ ಪಂಚಾಯತಿ ಎಂದು ಕರೆಯುವುದಿಲ್ಲ. ಯಾವತ್ತು ಆ ಮರ್ಡರ್ ಪಂಚಾಯತಿಯನ್ನು ಕಳಿಸುತ್ತೀರಿ ಎಂತಲೇ ಹಳ್ಳಿಗಳಲ್ಲಿ ಮಾತನಾಡುವುದು. ಏನಾಗುತ್ತದೆ ಮಂಡಲ್ ಪಂಚಾಯತಿಯದು ಯಾವತ್ತು ಬರುತ್ತದೆ, ಆ ಮರ್ಡರ್ ಪಂಚಾಯತಿಯನ್ನು ಮೊದಲು ಕಳಿಸಿಬಿಟ್ಟು ನಮ್ಮನ್ನು ನೆಮ್ಮದಿಯಿಂದ ಇರುವುದಕ್ಕೆ ಬಿಡಿ ಎಂದುಹಳ್ಳಿಗಳಲ್ಲಿ ಜನ ಕೇಳತಕ್ಕದ್ದು . ಅಂತಹ ವ್ಯವಸ್ಥೆಗೆ, ಅಂತಹ ಒಂದು ಉಬ್ಬಣ ಸ್ಥಿತಿಗೆ ನಿಂದೆ ಆದಂತಹ ಒಂದು ಅಚಾತುರ್ಯ ಎಂತಲೇ ಹೇಳಬಹುದು. ಉದ್ದೇಶ ಒಳ್ಳೆಯದಿರಬಹುದು, ಆದರೆ, ಕೆಡುಕಾಗಿದೆ. ಅದನ್ನು ತಪ್ಪಿಸುವಂಥ ವ್ಯವಸ್ಥೆ ಈಗ ಆಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಡೈರೆಕ್ಟ್ ಅಂಡ್ ಇನ್‌ಡೈರೆಕ್ಟ್ ಎಲೆಕ್ಷನ್ ಬಗ್ಗೆ ಒಂದು ಮಾತನ್ನು ಹೇಳ ಬಯಸುತ್ತೇನೆ. ಇದರ ಬಗ್ಗೆ ಇಲ್ಲಿ ವಾದ ನಡೆದಿದೆ. ಎರಡರಲ್ಲೂ ಕಷ್ಟಗಳಿವೆ. ಡೈರೆಕ್ಟ್ ಎಲೆಕ್ಷನ್‌ನಲ್ಲಿ ಒಂದು ಅನುಕೂಲವಿದೆ. ಇನ್‌ಡೈರೆಕ್ಟ್ ಎಲೆಕ್ಷನ್ ಅನ್ನು ನಾವು ನೋಡಿದ್ದೇವೆ. ಏನೆಂದರೆ, ಇನ್‌ಡೈರೆಕ್ಟ್ ಎಲೆಕ್ಷನ್‌ನಲ್ಲಿ ಅಭ್ಯರ್ಥಿಗಳನ್ನು ಹೊತ್ತುಕೊಂಡು ಹೋಗತಕ್ಕಂಥಾದ್ದು, ಅನಂತರ ಪ್ರಭಾವಿ ರಾಜಕಾರಣಿಗಳು ಒತ್ತಡ ತಂದು ಇಂತಹವರನ್ನೇ ಪ್ರಧಾನರನ್ನಾಗಿ ಮಾಡಬೇಕೆಂದು ಹೇಳುವಂಥಾದ್ದು ಇರುತ್ತದೆ. ಅನೇಕ ಪ್ರಭಾವಿ ರಾಜಕಾರಿಣಿಗಳು ಏನು ಮಾಡುತ್ತಾರೆಂದರೆ, ಇಂತಹವರೇ ಆಗಬೇಕೆಂದು ಪಟ್ಟು ಹಿಡಿಯುತ್ತಾರೆ. ಆತ ಯೂಸ್‌ಲೆಸ್ ಫೆಲೊ ಆಗಿರಬಹುದು ಅಥವಾ ಒಬ್ಬ ruffian ಕೊಲೆಗಡುಕ ಇರಬಹುದು, muscle power or money power ಇದರಲ್ಲಿ ಚುನಾಯಿತರಾದ ಪ್ರತಿನಿಧಿಗೆ ಪ್ರಧಾನರನ್ನಾಗಿ ಮಾಡುವಂತೆ ಪ್ರಭಾವಿ ರಾಜಕಾರಣಿಗಳು ಸಲಹೆ ಮಾಡತಕ್ಕಂಥಾದ್ದು. ಈ ರೀತಿ ಸಲಹೆ ಕೊಡತಕ್ಕಂಥ ಕೆಲಸವೂ ಕೂಡ ನಡೆದುಕೊಂಡು ಬಂದಿರುವುದನ್ನು ನಾವೆಲ್ಲರೂ ನೋಡಿದ್ದೇವೆ. ಅದುದರಿಂದ, ಈ ವ್ಯವಸ್ಥೆಯನ್ನು ತಪ್ಪಿಸಿ, ಡೆರೆಕ್ಡ್ ಎಲೆಕ್ಷನ್ ಅನ್ನು ನೀವು ಮಾಡದೇ ಇದ್ದರೆ ಯಾವುದೇ ನಿರ್ಣಯ ಪಾಸ್ ಆಗಬೇಕಾದರೂ ಕೂಡ ಎಲೆಕ್ಟೆಡ್ ಮೆಂಬರ್ಸ್‌ನಿಂದ majority of the people must vote for that ಎಂದು ನೀವು ಮಾಡಿದರೆ, ಆಗ ಅತನ ಮೇಲೆ ಕಡಿವಾಣ ಹಾಕಿದಂತಾಗುತ್ತದೆ. ಅನಂತರ, ಡೈರೆಕ್ಟ್ ಎಲೆಕ್ಷನ್ ಮಾಡಿ ಅಧ್ಯಕ್ಷ ಬೇಡವೆಂದರೆ ಅತನನ್ನು ತೆಗೆದುಹಾಕುವುದಕ್ಕೂ ನೀವು ಬೇಕಾದಷ್ಟು ಅನುಕೂಲತೆಗಳನ್ನು ಮಾಡಿಕೊಳ್ಳಬಹುದು, ಅದಕ್ಕೆ ಬೇಕಾದಷ್ಟು ಅನುಕೂಲತೆಗಳನ್ನು ಮಾಡಿಕೊಳ್ಳಬಹುದು, ಅದಕ್ಕೆ ಬೇಕಾದಷ್ಟು ಅನುಕೂಲತೆಗಳನ್ನು ಮಾಡಿಕೊಳ್ಳಬಹುದು, ಅದಕ್ಕೆ ಬೇಕಾದಷ್ಟು ಪ್ರಾವಿಷನ್ಸ್ ಇದೆ. Suppose he misuses the power and the finance, ಅಲ್ಲಿದೆ, ಸಂವಿಧಾನದ ಕ್ರಿಮಿನಲ್ ಆ್ಯಕ್ಟ್ ಪ್ರಕಾರ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಲೂ ಬಹುದು. ಆದುದರಿಂದ, ಡೈರೆಕ್ಟ್ ಎಲೆಕ್ಷನ್ ಮಾಡಿದರೆ, ಆ ಅವಧಿಯಲ್ಲಿ ಉಂಟಾಗತಕ್ಕ ಗೊಂದಲ ಮಯ ವಾತಾವರಣವನ್ನು ತಪ್ಪಿಸುವುದಕ್ಕಾಗುತ್ತದೆಂಬ ವಿಷಯವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ರಿಜರ್ವೇಷನ್ ಯಾವ್ಯಾವ ಜಾಗಗಳಲ್ಲಿ ಹೇಗೆ ಮಾಡಬೇಕೆಂದು, ಯಾರಿಗೂ ತೊಂದರೆಯಾಗದಂತೆ ನೀವು ಏನು ಪ್ರಾಪರ್ ರಿಜರ್ವೇಷನ್ ಅನ್ನು ಸಜೆಸ್ಟ್ ಮಾಡಿದ್ದೀರಿ, ಅದರಲ್ಲಿ ಮಂಡಲ ಕಮಿಷನ್ ಒಂದು ಅಡ್ಡ ಬರಬಹುದು. ಅಥವಾ Somebody may go to court, ಆ ತರಹ ಆಗಬಹುದು. ಆದುದರಿಂದ, ಅದರ

ಪರಿಮಿತಿಯೊಳಗೆ ಇರುವುದಕ್ಕೆ ನೀವು ಈಗಾಗಲೇ ಯೋಚನೆ ಮಾಡಿದ್ದೀರಿ. ಅಲ್ಲದೆ, ಆಯಾ ಬ್ಯಾಕ್‌ವರ್ಡ್ ಕಮ್ಯೂನಿಟೀಸ್ ಮತ್ತು ಎಸ್‌ಸಿ ಎಸ್‌ಟಿ ರಿಸರ್ವ್ ಕಾನ್‌ಸ್ಟಿಟ್ಯೂಯನ್ಸಿ ಎಲ್ಲಿ ಬರುತ್ತದೋ, ಅಲ್ಲಿನ ಜನಸಂಖ್ಯೆಗನುಗುಣವಾಗಿ ನೀವು ಮಾಡಿದರೆ ಒಳ್ಳೆಯದಾಗುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈಗ ನೀವು ಒಂದು ಲಿಸ್ಟ್ ಕಳುಹಿಸಿ ಒಬ್ಬ ಎಸ್‌ಸಿಎಸ್‌ಟಿ ಇರಬಹುದು, ಒಬ್ಬ ಲೇಡಿ ಇರಬೇಕೆಂದು ಹೇಳಿ ಕಳುಹಿಸಿದಾಗ ಪಿಎಲ್‌ಡಿ ಬ್ಯಾಂಕ್‌ಗೆ ಟಿಎಪಿಸಿಎಂಎಸ್‌ಗೆ, ಎಪಿಎಂಸಿಗೆ ನಾವು ಅಭ್ಯರ್ಥಿಯನ್ನು ಹುಡುಕಬೇಕಾಗುತ್ತದೆ. ಕೆಲವು ಏರಿಯಾದಲ್ಲಿ ನೀವು ಆ ಏರಿಯಾದ ಜನಸಂಖ್ಯೆಗನುಗುಣವಾಗಿ ರಿಸರ್ವೇಷನ್ ಇಟ್ಟರೆ ಅಲ್ಲಿ you are going to please the people also and at the same time, ಈ ತರಹದ ಪ್ರಾಬ್ಲಮ್ ಇರುವುದಿಲ್ಲವೆನ್ನುವ ಮಾತನ್ನು ಹೇಳುವುಕ್ಕೆ ಇಷ್ಟಪಡುತ್ತೇನೆ. ಒಟ್ಟಿನಲ್ಲಿ, ಏನು ಮಹಾತ್ಮ ಗಾಂಧೀಜಿಯವರು ರಾಮರಾಜ್ಯ ಅಥವಾ ಸುಭೀಕ್ಷ ದೇಶದ ಕನಸು ಕಂಡಿದ್ದರು ಹಳ್ಳಿಗಳಲ್ಲಿ ಶಾಂತಿಯುತವಾದ ವಾತಾವರಣ ಇರುವುದಕ್ಕೆ ಮತ್ತು ಅವರಿಗೆ ಬೇಕಾಗಿರತಕ್ಕಂಥ ಮೂಲಭೂತ ಅಗತ್ಯಗಳನ್ನು ಪೂರೈಸುವುದಕ್ಕೆ ಸದನದಲ್ಲಿ ಏನು ಒಂದು ವಿದೇಯಕ ಮಂಡನೆಯಾಗಿದೆ, ಅವರುಗಳ ಅಗತ್ಯಗಳನ್ನು ಪೂರೈಸುವಲ್ಲಿ ಈ ಒಂದು ಪಂಚಾಯತ್‌ರಾಜ್ ವಿದೇಯಕ ನಾಂದಿಯಾಗಲಿ. ಇದರಿಂದ ನಮ್ಮ ಕರ್ನಾಟಕ ರಾಜ್ಯಕ್ಕಷ್ಟೇ ಅಲ್ಲ, ಭಾರತ ದೇಶದ ನಾನಾ ಮೂಲೆಗಳಲ್ಲಿರತಕ್ಕಂಥ ಹಳ್ಳಿಗಳಿಗೆ ಸಿಗತಕ್ಕಂಥ ಅವಿರ್ಭಾಗ ಸಿಗುವುದಕ್ಕೆ ಇದೊಂದು ಮಾರ್ಗದರ್ಶಿಯಾಗಲೆಂಬ ಮಾತನ್ನು ಹೇಳುತ್ತಾ, ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈ ಹಿಂದ್.

* ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) : ಸನ್ಮಾನ್ಯ ಅಧ್ಯಕ್ಷರೇ,ಮಾನ್ಯ ಪಂಚಾಯತ್ ರಾಜ್ ಮಂತ್ರಿಗಳು ಒಂದು ಹೊಸ ವಿಧೇಯಕವನ್ನು ಮಂಡಿಸಿದಾಗ ನಾನು ಕೆಲವು ಆಕ್ಷೇಪಗಳನ್ನು ವ್ಯಕ್ತಮಾಡಿದ್ದೆ. ಆ ಆಕ್ಷೇಪಗಳನ್ನು ಪ್ರಸ್ತಾಪ ಮಾಡುವುದಕ್ಕೆ ಮುಂಚೆ, ಕೆಲವು ವಿಚಾರಗಳನ್ನು ಪ್ರಾಸ್ತಾವಿಕವಾಗಿ ಪ್ರಸ್ತಾಪಿಸಲು ಬಯಸುತ್ತೇನೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ನಮ್ಮ ರಾಜ್ಯಾಂಗ ರಚನೆಯನ್ನು ಮಾಡುವಂಥ ಸಂದರ್ಭದಲ್ಲಿ, ರಾಜಕೀಯ ನೀತಿಯು ನಿರ್ದೆಶಿಸಿದ ತತ್ವಗಳಲ್ಲಿ ನಮಗೆ ಒಂದು ಸೂಚನೆಯನ್ನು ನಿರ್ದೇಶನವನ್ನು ನೀಡಿದರು. ಇದು ಸಂವಿಧಾನದ 40ನೇ ಪ್ರಕರಣದಲ್ಲಿ ಅಡಗಿದೆ ಎನ್ನುವ ಮಾತನ್ನು ಈಗಾಗಲೇ ಅನೇಕ ಜನ ಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ. ಮಹಾತ್ಮಗಾಂದೀಜಿಯವರ ಏನುಕನಸು ಇತ್ತು, ಈ ರಾಷ್ಟ್ರದಲ್ಲಿ ಗ್ರಾಮ ಸ್ವರಾಜ್ಯವನ್ನು ರೂಪಿಸಬೇಕು, ಮತ್ತು ಕೆಳಹಂತದಲ್ಲಿ ಸ್ವಯಂ ಸರ್ಕಾರಗಳನ್ನು ರೂಪಿಸಬೇಕು ಮತ್ತು ಸಾಕಷ್ಟು ಅಧಿಕಾರಗಳನ್ನು, ಹೊಣೆಗಾರಿಕೆಯನ್ನು ಕೊಡಬೇಕೆನ್ನುವ ಕನಸು ಏನಿತ್ತು, ಆ ಕನಸು ನನಸಾಗುವುದಕ್ಕೆ ಅನೇಕ ಪ್ರಯತ್ನಗಳು, ಸ್ವಾತಂತ್ರ್ಯ ಗಳಿಸಿದಾಗಿ ನಿಂದಲೂ ನಡೆಯುತ್ತಾ ಬಂದಿದೆ. ಮೊಟ್ಟಮೊದಲನೆಯ ಪ್ರಯತ್ನ 1957ರ ಸುಮಾರಿನಲ್ಲಿ ಬಲವಂತರಾವ್ ಮೆಹ್ತಾ ಸಮಿತಿಯಿಂದ ಪ್ರಾರಂಭವಾಯಿತು. ಆ ಸಮಿತಿಯ ಪ್ರಯತ್ನಗಳನ್ನು ಅನುಷ್ಠಾನ ಮಾಡುವಲ್ಲಿ ಮಹಾರಾಷ್ಟ್ರ ಮತ್ತು ಗುಜರಾತ್ ಸರ್ಕಾರಗಳು ಪ್ರಯತ್ನ ಮಾಡಿದವು. ತದನಂತರ, ಬಹಳ ಪ್ರಮುಖವಾದ, ಪ್ರಗತಿಪರವಾದ, ಪ್ರಾಮಾಣಿಕವಾದ ಪ್ರಯತ್ನ ಆಗಿದ್ದು ಪಶ್ಚಿಮ ಬಂಗಾಳದಲ್ಲಿ ಮತ್ತು ಕರ್ನಾಟಕದಲ್ಲಿ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಮೊಟ್ಟಮೊದಲನೆಯದಾಗಿ, ಮಹಾತ್ಮಗಾಂಧಿಯವರ ಕನಸಾಗಿದ್ದ ಈ ಗ್ರಾಮಸ್ವರಾಜ್ಯದ

ಕಲ್ಪನೆ ಏನಿತ್ತು, ಅದನ್ನು ನನಸು ಮಾಡುವುದಕ್ಕೆ ಅಥವಾ ಕಾರ್ಯರೂಪಕ್ಕೆ ತರುವುದಕ್ಕೆ ಮೊಟ್ಟಮೊದಲು ಪ್ರಾಮಾಣಿಕವಾದ ಪ್ರಯತ್ನ ನಡೆದಿದ್ದು ಕರ್ನಾಟಕದಲ್ಲಿ ಎಂದು ನಾನು ಭಾವಿಸಿದ್ದೇನೆ. ಈ ಮಾತನ್ನು ಹೇಳುವಾಗ ಅತ್ಯಂತ ಹೆಮ್ಮೆಯಿಂದ ಹೇಳುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿ, ರಾಮಕೃಷ್ಣ ಹೆಗಡೆಯವರ ನೇತೃತ್ವದ ಸರ್ಕಾರ ಈ ಒಂದು ಪ್ರಯತ್ನ ಮಾಡಿತ್ತು, ಆ ಪ್ರಯತ್ನವನ್ನು ನಾನು ಮತ್ತೆ ಹೊಗಳಬೇಕಾಗಿಲ್ಲ. ನಿಜವಾಗಿಯೂ ಸಹ ಅದನ್ನು ಪಕ್ಷಾತೀತವಾಗಿ ನೋಡುವಂಥ, ಹಾಗೂ ಎಲ್ಲಾ ಪಕ್ಷಗಳ ರಾಜ್ಯಕಾರಣಿಗಳೂ ಹಾಗೂ ಎಲ್ಲಾ ಪಕ್ಷಗಳವರೂ ಒಪ್ಪುತಾರೆಂದು ಹೇಳುತ್ತೇನೆ. ಇದಕ್ಕೆ ಉದಾಹರಣೆಯಾಗಿ ಒಂದು ಮಾತನ್ನು ಹೇಳುತ್ತೇನೆ. ಮೊನ್ನೆ 1992ನೇ ಇಸವಿಯಲ್ಲಿ ಏನು ಪಾರ್ಲಿಮೆಂಟಿನಲ್ಲಿ ಈ ವಿಚಾರ ಪ್ರಸ್ತಾಪವಾಯಿತು, ಈ ರೀತಿ ಪ್ರಸ್ತಾಪವಾದ ಸಂದರ್ಭದಲ್ಲಿ ಅಲ್ಲಿ ಏನು ಕಾಂಗ್ರೆಸ್ ಮಂತ್ರಿಗಳಿದ್ದರು, ಅವರೂ ಈ ಮಾತ್ತನ್ನು ಒಪ್ಪಿದ್ದಾರೆ. ಅವರು ಏನು ಹೇಳಿದ್ದಾರೆಂದರೆ, This is not the demand. Some reports were made from time to time. Infact, certain States like Maharashtra, Gujarat, as far as PanchayatRaj structure is concerned, are following recommendations of Balwantrao Mehta Committee. More recetly States like West Bengal, Andra pradesh and Karntaka have provided wider range of delegation and powers and authority down to the District and intermediate level. However, barring these exceptions, in most of the other States the record as far as PanchayatRaj institutions are concerned, has not been very good. That is the certificate given to other states in the Country.

ಸನ್ಮಾನ್ಯ ಅಧ್ಯಕ್ಷರೇ, ಯಾರು ಈ ದೇಶದಲ್ಲಿ, 1947ರಿಂದ ಬಹುಕಾಲ ಅಧಿಕಾರದಲ್ಲಿದ್ದಂಥ ಜನ ಯಾರಿದ್ದಾರೆ,ಅವರು ಇದನ್ನು ನೆರವೇರಿಸಿ ಕೊಡಲಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ತದನಂತರ, ಕರ್ನಾಟಕ ಪಂಚಾಯತ್ ರಾಜ್ ವಿದೇಯಕವನ್ನು ಹೊಸದಾಗಿ ತಂದಿದ್ದಾರೆ. ಇದನ್ನು ಯಾವ ಕಾನೂನಿಗೆ ಬದಲಿಯಾಗಿ ತಂದಿದ್ದಾರೆಂದರೆ, 1983ನೇ ವಿಧೇಯಕ ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿತ್ತು. ಕರ್ನಾಟಕ ಜಿಲಾಪರಿಷತ್ತು, ತಾಲ್ಲೂಕು ಪಂಚಾಯ್ತಿ ಸಮಿತಿ ಮಂಡಲ ಪಂಚಾಯ್ತಿ ಸಮಿತಿ ಮತ್ತು ನ್ಯಾಯ ಪಂಚಾಯ್ತಿ ಕಾನೂನು ಏನಿದೆ, ಇದಕ್ಕೆ ಬದಲಾಗಿ ಈ ಕಾನೂನನ್ನು ತಂದಿದ್ದಾರೆ. ಹಾಗಾದರೆ, ಎಷ್ಟರಮಟ್ಟಿಗೆ ಈ ಕಾನೂನಿಗೆ ಭಿನ್ನವಾಗಿದೆ ಅಥವಾ ಈ ಕಾನೂನಿನಲ್ಲಿರುವಂಥ ಅಂಶಗಳು ಯಾವ ಒಂದು ಗ್ರಾಮ ಸ್ವರಾಜ್ಯವನ್ನು ಸ್ಥಾಪನೆ ಮಾಡಬೇಕು, ರೂಪ ಮಾಡಬೇಕು ಅದಕ್ಕೆ ಪ್ರಯತ್ನಪಡುತ್ತದೆಯೇ ಅಥವಾ ಹಿಂದೆ ಇದ್ದಂಥ ಕಾನೂನಿನಲ್ಲಿ ಯಾವುದಾದರೂ ಅಡ್ಡ ಆತಂಕ ಇದ್ದರೆ, ಅದನ್ನು ಇವರು ವಿಚಾರಣೆ ಮಾಡಿದ್ದರೆ, ನಾನು ಖಂಡಿತವಾಗಿಯೂ ಸಹ ಈ ಸರ್ಕಾರವನ್ನು ಅಭಿನಂದನೆ ಮಾಡುತ್ತಿದ್ದೆ. ಅದಕ್ಕೆ ಬದಲಾಗಿ ಏನಾದರೂ ಯಾವ ಗ್ರಾಮ ಸ್ವರಾಜ್ಯವನ್ನು ಸ್ಥಾಪನೆ ಮಾಡುವುದಕ್ಕೆ ಬೇಕಾದಂಥ, ಕೆಳಹಂತದಲ್ಲಿ, ಜನತೆಯ ಪ್ರತಿನಿಧಿಗಳಿಗೆ ಯೋಜನಾ ಅಧಿಕಾರವನ್ನು, ಆರ್ಥಿಕ ಅಧಿಕಾರವನ್ನು, ಆಡಳಿತಾತ್ಮಕವಾದ ಅಧಿಕಾರವನ್ನು ಕೊಡುವಂಥ

ಕೆಲಸ ಏನಾದರೂ ನಡೆಯದಿದ್ದರೆ, ಇದನ್ನು ನಿಜವಾಗಿಯೂ ಸಹ ಖಂಡನೆ ಮಾಡಬೇಕಾಗುತ್ತದೆ. ನಾವು ಇದನ್ನು ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ ಮತ್ತು ಸರ್ಕಾರಕ್ಕೆ ಸಲಹೆ ಮಾಡಬೇಕಾಗುತ್ತದೆ. ಮೊಟ್ಟಮೊದಲನೆಯದಾಗಿ, ಸಂವಿಧಾನಾತ್ಮಕವಾದ ರೀತಿಯಲ್ಲಿಯೇ ಈ ಮಸೂದೆ ಬಗ್ಗೆ ಚರ್ಚೆ ಮಾಡುವುದಕ್ಕೆ ಬಯಸುತ್ತೇನೆ. ಆವತ್ತಿನದಿವಸ ಈ ವಿಧೇಯಕ ಘಂಡನೆಯಾದಾಗ, ನಾನು ಹೇಳಿದೆ, ನಿಮ್ಮ ಈ ವಿಧೇಯಕ ಸಂವಿಧಾನಾತ್ಮಕವಾಗಿಲ್ಲ ಅಥವಾ ಸಂವಿಧಾನ ವಿಧಿಗಳಿಗೆ ಅನುಗುಣವಾಗಿಲ್ಲ ಎನ್ನುವುದನ್ನು ಪರಿಶೀಲನೆ ಮಾಡುವುದಕ್ಕೆ ಸಾಕಾದಷ್ಟು ಸಮಯ ಕೊಡಿ ಎಂದು ಕೇಳಿದಾಗ, ಈ ಸರ್ಕಾರ ಅದಕ್ಕೆ ಸಿದ್ಧ ಇರಲಿಲ್ಲ. ಪರವಾಗಿಲ್ಲ, ಆದರೂ ಕೂಡ ನಾನು ಇವತ್ತು ಮೊಟ್ಟಮೊದಲನೆಯದಾಗಿ ಮಾನ್ಯ ಮಂತ್ರಿಗಳಿಗೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ. 1991 ಅಥವಾ 92ನೇ ಇಸವಿಯಲ್ಲಿ ಸಂವಿಧಾನದ 72ನೇ ತಿದ್ದುಪಡಿ ಏನಿದೆ ಅದರ ಕೆಲವು ವಿಚಾರಗಳ ಬಗ್ಗೆ ತಮ್ಮ ಗಮನ ಸೆಳೆಯುತ್ತೇನೆ. ಅದರಲ್ಲಿ ಏನು ಹೇಳಿದ್ದಾರೆಂದರೆ,

Every panchayat unless sooner dissolved under law for the time being in force, shall continue for five years, from the date appointed for its first meeting and no longer,

Election to constitute a Municipality shall be completed :

a) before the expiry of its duration specified in clause1
b) before the expiry of the period of six months from the date of its dissolution

Subject to the provision of this Constitution, the Legislature of a State may, make a provision with respect to the composition of Panchayat. Provided that the ratio between the population of the territorial area of a panchayat at any level and the number of seats in such panchayats to be filled by election shall as far as practicable be the same throughout the State.ಇದಕ್ಕನುಗುಣವಾಗಿ ನಿಮ್ಮ ಈ ಬಿಲ್ ಇದೆಯೆ ?

ಶ್ರೀ ಎಂ.ವೈ. ಘೋರ್ಪಡೆ : ಇದೆ.

ಶ್ರೀ ಹೆಚ್. ಏಕಾಂತಯ್ಯ : ಇನ್ನೂ ಒಂದುಸಾರಿ ತಮಗೆ ಹೇಳುತ್ತೇನೆ. "Provided that the ratio between the population of territorial area of a panchayat at any level and the seats shall be filled be election shall as far practicable be the same throughout the State."

ಹಾಗಾದರೆ,ಈಗ ತಾವು ಏನು ಕೆಲವು ವಿಧಿಗಳನ್ನು ಈ ವಿಧೇಯಕದಲ್ಲಿಟ್ಟಿದ್ದೀರಿ ಅದನ್ನು ಪರಿಶೀಲನೆ ಮಾಡೋಣ. ತಾವು ಏನು ಹೇಳಿದ್ದೀರೆಂದರೆ, 400 ಜನರಿಗೆ ಒಬ್ಬರಂತೆ ಮಂಡಲ್ ಪಂಚಾಯಿತಿ ಸದಸ್ಯರನ್ನು ಗುರ್ತಿಸಿ ಆರಿಸಬೇಕೆಂದು ಹೇಳಿದ್ದೀರಿ. ಇದರಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಇದು ಕಾನೂನಿಗೆ ವಿರುದ್ಧವಾಗಿಲ್ಲ. ತಾಲೂಕು ಪಂಚಾಯಿತಿಯಲ್ಲಿ 10 ಸಾವಿರ ಜನರಿಗೆ ಒಬ್ಬರಂತೆ ಮಾಡಿದ್ದೀರಿ. ಆದರೆ ಇದರಲ್ಲಿ ಒಂದು ಪ್ರೊವಿಷೋವನ್ನು ಹಾಕಿದ್ದೀರಿ. ಅದೇನೆಂದರೆ : ತಾಲ್ಲೂಕು ಪಂಚಾಯಿತಿಯ ಚುನಾಯಿತ ಸದಸ್ಯರ ಸಂಖ್ಯೆಯು ಸರ್ಕಾರದಿಂದ ಕಾಲಕಾಲಕ್ಕೆ ಅಧಿಸೂಚಿಸುವ ನೀತಿಯನ್ನು ಒಳಗೊಂಡಿರತಕ್ಕದ್ದು. ಪರಂತು ಒಂದು ಲಕ್ಷಕ್ಕೆ ಹೆಚ್ಚಾಗಿರುವ ಜನಸಂಖ್ಯೆಯ ತಾಲ್ಲೂಕುಗಳಿಗೆ ಕನಿಷ್ಠ 11 ಮಂದಿ ಚುನಾಯಿತ ಸದಸ್ಯರಿರತಕ್ಕದ್ದು. 11 ಜನ ಚುನಾಯಿತ ಸದಸ್ಯರಿರಬೇಕಾದರೆ ಕನಿಷ್ಠಪಕ್ಷ 1.10. ಲಕ್ಷ ಜನಸಂಖ್ಯೆ ಇರಲೇಬೇಕು. ಆದರೆ ತಾವು ಏನು ಹೇಳಿದ್ದೀರಿ ಅದು ಆಗುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀ ಎಂ.ವೈ.ಘೋರ್ಪಡೆ :ಇದರಲ್ಲಿ "as far as practicable" ಎನ್ನತಕ್ಕಪದಗಳನ್ನು ನಾವು ಏನು ಉಪಯೋಗಿಸಿದ್ದೇವೆ, ಅದನ್ನು ತಾವು ಗಮನಿಸಬೇಕು. ಎಕ್ಸ್ಯಾಕ್ಟ್ ಆಗಿ ಅಷ್ಟೇ ಇರಬೇಕು ಎಂದೇನಿಲ್ಲ. ಮಲೆನಾಡುಭಾಗದಲ್ಲಿ 10 ಸಾವಿರ ಜನಸಂಖ್ಯೆಗೆ ಒಬ್ಬರು ಎಂದಿಟ್ಟುಕೊಂಡರೆ, ಕೆಲವುಕಡೆ 3-4 ಸದಸ್ಯರು ಬರಬಹುದು. ಈ 3-4 ಸದಸ್ಯರಿಂದ ತಾಲ್ಲೂಕು ಪಂಚಾಯಿತಿಯನ್ನು ಹೇಗೆ ರಚನೆ ಮಾಡುವುದಕ್ಕಾಗುತ್ತದೆ? ಅಂಥ ಕಡೆ ಆ ಎಕ್ಸ್ ಅಫಿಷಿಯೋ ಮೆಂಬರ್ಸ್ ಬಹಳ ಜಾಸ್ತಿಯಾಗುತ್ತಾರೆ. ಎಲೆಕ್ಟೆಡ್ ಮೆಂಬರ್ಸ್ 3-4 ಜನ ಆಗುವುದಾದರೆ ಅದು ವಿಕೃತ. ಇಂಥ ವಿಕೃತಿಯನ್ನು ತಪ್ಪಿಸುವುದಕ್ಕೆ ನಾವು ಅಂಥ ಕಡೆ ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇದ್ದರೆ ಕನಿಷ್ಟಪಕ್ಷ ಸದಸ್ಯರ ಸಂಖ್ಯೆ 11 ಇರಲೇಬೇಕೆಂದು ಇಟ್ಟಿದ್ದೇವೆ. ಅಂದರೆ 50 ಸಾವಿರ ಜನಸಂಖ್ಯೆ ಇದ್ದು 11 ಸದಸ್ಯರು ಇದ್ದರೆ ಸರಾಸರಿ 10 ಸಾವಿರ ಬರುವುದಿಲ್ಲ. ಇದು ಗೊತ್ತಿದೆ. ಆದರೆ ರ್‍ಯಾಷನಲ್ ಡಿಸ್ಟಿಂಗ್ಷನ್, ಅದು ಇರ್‍ಯಾಷನಲ್ ಅಲ್ಲ. ಅದಕ್ಕೆ ಕೋರ್ಟಿನಲ್ಲಿ ನಮಗೇನು ತೊಂದರೆ ಕೊಡಲಿಲ್ಲ.

ಶ್ರೀ ಹೆಚ್. ಏಕಾಂತಯ್ಯ : ನನ್ನದು ಏನು ತಕರಾರು ಇಲ್ಲ. ಇವತ್ತು ಹೇಳುತ್ತೇನೆ ನಿಮಗೆ ರ್‍ಯಾಷನಲ್ ಆಗುತ್ತದೆ. 10 ಇದ್ದರೆ 9 ಇದ್ದರೆ ರ್‍ಯಾಷನಲ್ ಆಗುತ್ತದೆ. ಅಥವಾ 11 ಇದ್ದರೆ ರ್‍ಯಾಷನಲ್ ಆಗಬಹುದು.

ಶ್ರೀ ಎಂ.ವೈ.ಘೋರ್ಪಡೆ : ಅದು ಮಾನ್ಯ ಚಂದ್ರೇಗೌಡರಿಗೆ ಅನುಕೂಲವಾಗಲಿ ಎಂದು ಮಾಡಿದ್ದು.

ಶ್ರೀ ಹೆಚ್.ಏಕಾಂತಯ್ಯ : ಮಾನ್ಯ ಚಂದ್ರೇಗೌಡರು ಮತ್ತು ಮಾನ್ಯ ಘೋರ್ಪಡೆಯವರು ಇಬ್ಬರೂ ಒಪ್ಪಿದರೂ ಸಹ ಈ ಕಾನೂನು ಸಂವಿಧಾನದ ಬದ್ಧವಾಗಿ ಸಿಂಧುವಾಗಲಿಕ್ಕೆ ಸಾಧ್ಯವಿಲ್ಲ. ಏತಕ್ಕೆಂದರೆ ಸಂವಿಧಾನದಲ್ಲಿ ಏನು ರೂಪಿಸಿಕೊಂಡಿದ್ದೀರಿ ಅದರ ಬಗ್ಗೆ ಸೀರಿಯಸ್ ಇಲ್ಲವೆಂದರೆ ನನ್ನದೇನು ತಕರಾರು ಇಲ್ಲ. ಅದ್ದರಿಂದ ಮೊದಲನೆಯದಾಗಿ ನನ್ನ ಆಕ್ಷೇಪವೇನೆಂದರೆ ಚುನಾಯಿತ ಸದಸ್ಯರು ತಾಲ್ಲೂಕು

ಪಂಚಾಯತಿಯಲ್ಲಿ ಸರ್ಕಾರದಿಂದ ಕಾಲಕಾಲಕ್ಕೆ ಅಧಿಸೂಚಿಸಲಾಗುವ ತಾಲ್ಲೂಕ್ಕಿನ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಿಂದ ತಾಲ್ಲೂಕ್ಕಿನ ಜನಸಂಖ್ಯೆಯ 10 ಸಾವಿರಕ್ಕೆ ಅಧವಾ ಅದರ ಭಾಗಕ್ಕೆ ಒಬ್ಬ ಸದಸ್ಯರಂತೆ ಚುನಾಯಿತ ವ್ಯಕ್ತಿಗಳನ್ನು ಒಳಗೊಂಡಿರತಕ್ಕಂಥದ್ದು ಎಂದು ಹೇಳಿ ಅದಕ್ಕೆ ಏನಾದರು ಪ್ರಾವಿಷನ್ ಏನು ಮಾಡಿದ್ದಾರೆ, ಅದು ಕಾನೂನಿನ ಪ್ರಕಾರ ಸಂವಿಧಾನದ ಪ್ರಕಾರ ಸಿಂಧುವಾಗಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಚುನಾವಣೆಮಾಡಬೇಕಾಗಿಲ್ಲ ಎನ್ನುವ ತಮ್ಮ ಉದ್ದೇಶವನ್ನು ಇಟ್ಟುಕೊಂಡು ಇಂಥ ಸಂವಿಧಾನಕ್ಕೆ ವಿರುದ್ಧವಾಂಥ ರೀತಿಯಲ್ಲಿ ನೀವು ಕಾನೂನನ್ನು ಮಾಡಲಿಕ್ಕೆ ಹೊರಟಿದ್ದೀರೆಂದು ಹೇಳಲಿಕ್ಕೆ ಇದು ಒಂದು ಸಮರ್ಥನೆ. ಇನ್ನೊಂದು ಹೇಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ಕಾನೂನಿನಲ್ಲಿ ಕೂಡ ಇದೆ. ಮಲೆನಾಡುಭಾಗದಲ್ಲಿ ಜನಸಂಖ್ಯೆ ಜಾಸ್ತಿ ಇರುವ ಕಡೆ ಇದೆ. ಅದನ್ನು ಯಾರು ಸಹ ಕೋರ್ಟಿನಲ್ಲಿ ಹೋಗಿ ಪ್ರಶ್ನೆಮಾಡಿಲ್ಲ.

ಶ್ರೀ ಹೆಚ್.ಏಕಾಂತಯ್ಯ : ಅದಕ್ಕೆ ನಾನು ಹೇಳುತ್ತಿರುವುದು, ಈ ರೀತಿಯಾದಂಥ ಚರ್ಚೆ ಮಾಡಲಿಕ್ಕೆ ತಾವು ತಯಾರಾಗಿಲ್ಲ. ನಾವು ಮಾಡಿದಂಥ ಕಾಲದಲ್ಲಿ ಸಂವಿಧಾನದ 73ನೇ ತಿದ್ದುಪಡಿ ಕಾನೂನಾಗಿರಲಿಲ್ಲ. ಆವಾಗ ನಮಗೆ ಅಧಿಕಾರವಿತ್ತು. ಆದರೆ ಇವತ್ತಿನದಿವಸ ಆ ಕಾನೂನನ್ನು ನಾವು ಸಂವಿಧಾನಬದ್ಧವಾಗಿ ಚಲಾಯಿಸಬೇಕಾಗಿದೆ. ಅದ್ದರಿಂದ ಅದು ಸಾಧ್ಯವಿಲ್ಲ. ಸನ್ಮಾನ್ಯ ಅಧ್ಯಕ್ಷರೇ, ತದನಂತರ ಇನ್ನೊಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದಕ್ಕೆ ಸಂಬಂಧಪಟ್ಟದ್ದಾದರೆ ಜಿಲ್ಲಾಪರಿಷತ್ತಿನ ಸಂಬಂಧದಲ್ಲೂ ಮಾನ್ಯ ಮಂತ್ರಿಗಳು ಅಲ್ಲಿ ಒಪ್ಪಿಕೊಂಡಿದ್ದಾರೆ. 40 ಸಾವಿರ ಜನರಿಗೆ ಒಬ್ಬ ಪ್ರತಿನಿಧಿಯನ್ನು ಆಯ್ಕೆ ಮಾಡಬೇಕೆಂದು ಹೇಳಿದ್ದಾರೆ. ಸ್ವಾಮಿ, ಚಿಕ್ಕಮಗಳೂರಿನಲ್ಲಿ ಮಾನ್ಯ ಚಂದ್ರೇಗೌಡರು ಇದ್ದಾರೆಂದು, ಶಿವಮೊಗ್ಗದಲ್ಲಿ ಮಾನ್ಯ ಬಂಗಾರಪ್ಪನವರು ಇದ್ದಾರೆಂದು ಇದರ ವ್ಯತ್ಯಾಸ ಮಾಡಲಿಕ್ಕೆ ಸಾಧ್ಯವಿಲ್ಲ. ಅಥವಾ ಮಾನ್ಯ ವೀರಪ್ಪಮೊಯಲಿಯವರು ದಕ್ಷಿಣ ಕರ್ನಾಟಕದಲ್ಲಿದ್ದಾರೆಂಬ ದೃಷ್ಟಿಯಿಂದ ವ್ಯತ್ಯಾಸ ಆಗಲಿಕ್ಕೆ ಸಾಧ್ಯವಿಲ್ಲ. ಸಂವಿಧಾನದಲ್ಲಿ ನಾವು ಏನು ಹೇಳಿಕೊಂಡಿದ್ದೇವೆ, ಈ ಒಂದು ಅನುಪಾತ ಏನಿದೆ, ರೇಷಿಯೋ ಏನಿದೆ ಅದು ಇದೇ ರಾಜ್ಯದಲ್ಲಿ ಒಂದೇ ಆಗಿರತಕ್ಕಂಥದ್ದು ಎನ್ನುವ ಮಾತಿದೆ. ಆದರೆ ತಮಗೆ ಅದು ಗೊತ್ತಿದ್ದರೂ ಸಹ ನಾನು ಹೇಳಿದಂತೆ ಇವತ್ತಿನದಿವಸ 243 (ಸಿ) ನಲ್ಲಿ "Provided that the ratio between the population of the teritorian are of a panchayats at any level and the number of seats in such panchayat to be filled by election shall as far as practicable be the same throughout the State" ಕೇವಲ ಚಿಕ್ಕಮಗಳೂರು ಜಿಲ್ಲೆಗೆ ಮಾತ್ರ ಇದು ಆಗಲಿಕ್ಕೆ ಸಾಧ್ಯವಿಲ್ಲ. ಇದು ಇಡೀ ಕರ್ನಾಟಕ ರಾಜ್ಯದಲ್ಲಿರುವಂಥ ಒಟ್ಟು ಜನಸಂಖ್ಯೆ ಏನಿದೆ, ಆ ಜನರನ್ನು ನೀವು 10 ಸಾವಿರದಿಂದ ಭಾಗಮಾಡಿದಾಗ ಅದರ ಭಾಗಕ್ಕೆ ಏನಾದರು ಎರಡು ಸಾವಿರ ಮೂರು ಸಾವಿರ ಸಿಕ್ಕುತ್ತದೆಂದರೆ, ಮತ್ತು ಕೆಲವು ಸಂದರ್ಭದಲ್ಲಿ 9 ಸಾವಿರ ಆಗುವುದಾದರೆ ನಾನು ಅರ್ಥಮಾಡಿಕೊಳ್ಳುತ್ತಿದೆ. ಆದರೆ ಒಂದು ಕಡೆ ನೀವು ಎರಡುಸಾವಿರ ಜನರಿಗೆ ಒಬ್ಬ ಪ್ರತಿನಿಧಿಯನ್ನು ಅಯ್ಕೆ ಮಾಡುವುದಾದರೆ ಯಾವುದೇ

ಕಾರಣದಿಂದ ಅದು ಸಂವಿಧಾನಬದ್ಧವಾಗಲಿಕ್ಕೆ ಸಾಧ್ಯವಿದಿಯೇ ? ಆಗಲಿಕ್ಕೆ ಸಾಧ್ಯವಿಲ್ಲ. ಅದೇ ರೀತಿಯಲ್ಲಿ ತಾವು ಜಿಲ್ಲಾಪರಿಷತ್ತಿನ ಕಾನೂನ್ನು ಮಾಡಿದಿರಿ. ಏನು ಮಾಡಿದಿರಿ ಅದರಲ್ಲಿ? ಅದರಲ್ಲಿ ಹೇಳಿದ್ದೀರಿ, ಜಿಲ್ಲಾ ಪಂಚಾಯಿತ್ ಚುನಾಯಿತ ಸದಸ್ಯರಲ್ಲಿ ಜಿಲ್ಲೆಗಳಲ್ಲಿನ ತಾಲ್ಲೂಕುಗಳಿಂದ ಚುನಾಯಿತರಾದ ವ್ಯಕ್ತಿಗಳು ಇರತಕ್ಕದ್ದು. ಕೊಡಗು ಉತ್ತರ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳನ್ನು ಹೊರತುಪಡಿಸಿ, ಇದಾವುದು ನಿಮಗೆ ಅಧಿಕಾರವಿಲ್ಲ ಸ್ವಾಮಿ. ಸಂವಿಧಾನಬದ್ಧವಾಗಿ ನಿಮಗೆ ಯಾವ ಅಧಿಕಾರವೂ ಇಲ್ಲ, ಆದರೆ ವಿಧಿಗಳಿಗೆ ವಿರುದ್ಧವಾಗಿ ತಾವು ಕಾನೂನು ಮಾಡುವುದಾದರೆ ನನ್ನದೇನು ಅಕ್ಷೇಪವಿಲ್ಲ. ಅದನ್ನು ನಾನು ಮಾಡದಿದ್ದರು ಬೇರೆ ಕಡೆ ಪ್ರಶ್ನೆಮಾಡುವವರು ಇದ್ದಾರೆ. ಆದರೆ ತಮ್ಮ ಗಮನಕ್ಕೆ ತರಬೇಕಾದದ್ದು ನನ್ನ ಕರ್ತವ್ಯ. ಆ ದಿಸೆಯಲ್ಲಿ ನಾನು ಹೇಳುತ್ತಿದ್ದೇನೆ. ಚುನಾಯಿತರಾಗಿರತಕ್ಕಂಥ ಸದಸ್ಯರ ಸಂಖ್ಯೆಗೆ ಅನುಗುಣವಾಗಿ 40 ಸಾವಿರ ಜನಸಂಖ್ಯೆಗೆ ಅಥವಾ ಅದರ ಭಾಗಕ್ಕೆ ಒಬ್ಬ ಸದಸ್ಯರಂತೆ ನಿಗದಿಪಡಿಸಲಾಗಿದೆ. "ಕೊಡಗು ಉತ್ತರ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ 30 ಸಾವಿರ ಜನಸಂಖ್ಯೆಗೆ ಮತ್ತು ಅದರ ಭಾಗಕ್ಕೆ ಒಬ್ಬ ಸದಸ್ಯರಂತೆ ಚುನಾಯಿತರಾಗತಕ್ಕದ್ದು." ಇದು ಕ್ಯಾಶ್ ಆಗುತ್ತದೆ, ಅದರಲ್ಲಿ ಏನು ಅನುಮಾನ ಇಟ್ಟುಕೊಳ್ಳಬೇಡಿ. ಅನುಮಾನವಿದ್ದರೆ ನಿಮ್ಮಲ್ಲೇನಾದರು ಸರ್ಕಾರದವರು ಅಡ್ವೋಕೇಟ್ ಜನರಲ್‌ರವರನ್ನು ನೇಮಕ ಮಾಡಿಕೊಂಡಿದ್ದರೆ, ಕಾನೂನು ಇಲಾಖೆಯೆಂದು ಏನಾದರು ಇದ್ದರೆ, ಅವರ ಅಭಿಪ್ರಾಯ ಕೇಳಿದರೆ ನಾನು ತಮಗೆ ಹೇಳುತ್ತೇನೆ, ಈ ಸದನದಮುಂದೆ ಅವರ ಅಭಿಪ್ರಾಯವನ್ನು ಇಡಿ. ಏತಕ್ಕೋಸ್ಕರ ಈ ಮಾತು ಹೇಳುತ್ತಿದ್ದೇನೆಂದರೆ, ಚುನಾವಣೆ ಮಾಡಬೇಕೆಂಬ ನೆಪ ಇಟ್ಟು ಕೊಂಡು ಇಂಥ ಅಸಿಂಧುವಾದ ಕಾನೂನುಗಳನ್ನು ಮಾಡುವುದರ ಮೂಲಕ ಜನತೆಯ ಹಿತ ಕಾಪಾಡುವುದಕ್ಕೆ ಸಾಧ್ಯವಿಲ್ಲ. ಅದೇ ರೀತಿಯಾಗಿ ಇವತ್ತಿನ ದಿವಸ 30 ರಿಂದ 40 ಸಾವಿರ ಎಂದು ಏನು ಮಾಡಿದ್ದೀರಿ ಅದು ಸಹ ಸಂವಿಧಾನದ 243(ಸಿ) ಏನು ಹೇಳಿದೆ ಅದಕ್ಕೆ ವಿರುದ್ಧವಾಗಿದೆ. ಆದುದರಿಂದ ಇದು ಸಂವಿಧಾನಕ್ಕೆ ಅನುಗುಣವಾಗಿಲ್ಲವೆಂದು ನಾನು ಹೇಳುತ್ತೇನೆ. ಇದರ ಬಗ್ಗೆ ನಿಮಗೆ ಹೆಚ್ಚಿನ ಮಾಹಿತಿ ಬೇಕಾದರೆ ಸರ್ಕಾರಕ್ಕೆ ಅವಕಾಶ ಇದೆ, ತಮಗೆ ಅವಕಾಶ ಇದೆ, ಅಡ್ವೋಕೇಟ್ ಜನರಲ್ ಅವರಿಗೆ ಹೇಳಿಕಳುಹಿಸಿ, ಅವರ ಅಭಿಪ್ರಾಯವನ್ನು ಸಭೆಗೆ ತಿಳಿಸಿ. ಅವರು ಅಭ್ಯಾಸ ಮಾಡಿ ನಮಗೆ ಹೇಳಲಿ. ಅವರ ಅಭಿಪ್ರಾಯದಿಂದ ಏತಕ್ಕೆ ಸಭೆಯನ್ನು ವಂಚಿತ ಮಾಡುತ್ತೀರಿ ? ಈ ಕಾನೂನು ಸರಿಯಾಗಿದೆ, ಸಂವಿಧಾನಬದ್ಧವಾಗಿದೆ ಎಂದು ಹೇಳ್ಳಿದ್ದಾರೆಯೇ ಅಥವಾ ಇಲ್ಲವೇ ಎಂದು ಮಂತ್ರಿಗಳನ್ನು ನಾನು ಕೇಳಬಯಸುತ್ತೇನೆ.

ಶ್ರೀ ಎಂ.ವೈ.ಘೋರ್ಪಡೆ : ಈ ಕಾನೂನು ಮಾಡುವಾಗ ಪದೇಪದೇ ಅಡ್ವೊಕೇಟ್ ಜನರಲ್ ಆಗಲಿ ಅಥವಾ ಲಾ ಸೆಕ್ರೆಟರಿ ಆಗಲಿ ಅಥವಾ ಲಾ ಮಿನಿಸ್ಟ್ರಿಯಲ್ಲಿ ಸಂಬಂಧಪಟ್ಟ ಅಧಿಕಾರಸ್ಥರಾಗಲಿ ಅವರನ್ನು ಕನ್‌ಸಲ್ಟ್ ಮಾಡಿ ಮಾಡಿದ್ದೇವೆ. ಅವರ ಆಕ್ಷೇಪಣೆ ಇದ್ದರೆ ಅಂಥದ್ದು ಮಾಡುತ್ತಿರಲಿಲ್ಲ. ಅವರದ್ದು ಆಕ್ಷೇಪಣೆ ಏನು ಇಲ್ಲ. ಲಾ ಡಿಪಾರ್ಟ್‌ಮೆಂಟಿನಲ್ಲಿ ಸಂಪೂರ್ಣ ಒಪ್ಪಿಗೆ ಇದೆ.

ಶ್ರೀ ಹೆಚ್. ಏಕಾಂತಯ್ಯ : ನಿಮ್ಮ ಸರ್ಕಾರದಲ್ಲಿ, ಕಾನೂನು ಇಲಾಖೆ ಎಷ್ಟು ಬಲವಾಗಿದೆ ಎಂಬುದಕ್ಕೆ ಇದಕ್ಕಿಂತ ಬೇರೆ ನಿದರ್ಶನ ಬೇಕಾಗಿಲ್ಲ. ಸಾಮಾನ್ಯ ಮನುಷ್ಯನಿಗೆ ಇದು ಅರ್ಥವಾಗುವುದಾದರೆ ನಿಮ್ಮ ಇಲಾಖೆಯಲ್ಲಿ ಅಥವಾ ಕಾನೂನು ಇಲಾಖೆಯಲ್ಲಿ ಇದು ಗೋಚರವಾಗದಿದ್ದರೆ ಅಂಥ ಇಲಾಖೆ ಸರ್ಕಾರದಲ್ಲಿರುವುದಕ್ಕೆ

ಖಂಡಿತವಾಗಿ ಅರ್ಹವಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಶಿವಮೂರ್ತಿ : ತಾವು ಯಾರನ್ನು ಡಿಫೆಂಡ್ ಮಾಡುತ್ತಿದ್ದೀರಿ ?

ಶ್ರೀ ಡಿ ಎಂ. ನಾಡಗೌಡ : ಹಿಂದಿನ ವಿಧೇಯಕವನ್ನು ತೆಗೆದು. ನೋಡಬಹುದು. ಅಲ್ಲಿ ಕೂಡ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಎಂದು ಮಾಡಿದ್ದೀರಿ. ಕೆಲವೊಂದು ಕಡೆ 110 ಕೆ ಒಬ್ಬ ರೆಪ್ರೆಸೆಂಟೇಟೀವ್ ಇರುವಂತೆ ಮಾಡಿದ್ದೀರಿ. 800 ಇದ್ದಲ್ಲಿ 3 ಜನ ಮೆಂಬರ್ ಮಾಡಿದ್ದೀರಿ. ಜಿಲ್ಲಾಪರಿಷತ್‌ನಲ್ಲಿ ಇದೇ ರೀತಿ ನಿಯಮವನ್ನು ಅನುಸರಿಸಿದ್ದೀರಿ.

ಶ್ರೀ ಹೆಚ್. ಏಕಾಂತಯ್ಯ : ನಾನು ಹೇಳುವುದನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಇದು 1992 ನೇ ಇಸವಿಯಲ್ಲಿ ಸಂವಿಧಾನದ 73ನೇ ತಿದ್ದುಪಡಿ ಆದಮೇಲೆ ಅದಕ್ಕನುಗುಣವಾದ ರೀತಿಯಲ್ಲಿ ನಾವು ಕಾನೂನು ತಂದಿದ್ದೇವೆ. ಮೊದಲು ಸಂವಿಧಾನ ತಿದ್ದುಪಡಿಯಾಗಿರಲಿಲ್ಲ. ಈ ವಿಚಾರದಲ್ಲಿ ಇವತ್ತಿನ ದಿವಸ ಸಂವಿಧಾನದಲ್ಲಿ ಏನು ಹೇಳಿದ್ದಾರೆಂದರೆ, "as far as practicable it should be the same ratio."ಅಂತ ಹೇಳಿದ್ದಾರೆ. ಅದುದರಿಂದ 40 ಸಾವಿರ, 30 ಸಾವಿರ ಒಂದೇ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಹೇಳಿದರೆ ಕತ್ತೆ,ಕುದುರೆ ಒಂದೇ ಎಂದು ಹೇಳಿದ ಹಾಗೆ ಆಗುತ್ತದೆ. 41 ಸಾವಿರ ಇದೆ, 42 ಸಾವಿರ ಇದೆ, 35ರಿಂದ 40 ಸಾವಿರ ಇದೆ ಎಂದು ಹೇಳಿದ್ದರೆ ನಾನು ಅರ್ಥಮಾಡಿಕೊಳ್ಳುತ್ತಿದ್ದೆ. 40 ಸಾವಿರ ಎಂದು ನಿರ್ಧಿಷ್ಟವಾಗಿ ಹೇಳಿ ಅದನ್ನು ಕೆಲವು ಕಡೆ 30 ಸಾವಿರಕ್ಕೆ ತರುತ್ತೇವೆಂದರೆ ಅದು ನಿಜವಾಗಿ ಸಂವಿಧಾನಕ್ಕೆ ಬದ್ಧವಾಗಿಲ್ಲವೆಂದು ನನ್ನ ಪ್ರಾಮಾಣಿಕ ಅನಿಸಿಕೆ. ಇದು ಸರ್ಕಾರದ ವಿವೇಚನೆಗೆ ಬಿಟ್ಟದ್ದು. ನಾನು ಸರ್ಕಾರವನ್ನು ಮತ್ತೊಮ್ಮೆ ಕೇಳುತ್ತೇನೆ, ಅಡ್ವೊಕೇಟ್ ಜನರಲ್ ಏನಿದ್ದಾರೆ ಅವರ ಅಭಿಪ್ರಾಯವನ್ನು ಈ ಸಭೆಗೆ ತಿಳಿಸಬೇಕು. ಅವರ ಗಹನವಾದ ಅಭಿಪ್ರಾಯ ಏನಿದೆ, ಮಹತ್ವದ ಅಭಿಪ್ರಾಯ ಏನಿದೆ, ಅದು ಈ ಸಭೆಗೆ ದೊರಕಲಿ. ಅಂಥ ಅವಕಾಶ ಸಿಕ್ಕಿದೆ. ಅಂಥ ಅವಕಾಶವನ್ನು ಉಪಯೋಗಿಸಿಕೊಂಡು ಅವರ ಅಭಿಪ್ರಾಯವನ್ನು ಸಭೆಗೆ ತಿಳಿಸುವಂಥ ಕ್ರಮ ಕೈಗೊಳ್ಳಬೇಕೆಂದು ಅಧ್ಯಕ್ಷರಲ್ಲಿ ನಾನು ಕೇಳಿಕೊಳ್ಳುತ್ತೇನೆ, ಮತ್ತು ಸರ್ಕಾರವನ್ನು ವಿನಂತಿಸಿಕೊಳ್ಳುತ್ತೇನೆ. ತದನಂತರ ಈ ಚುನಾವಣಾ ಕ್ಷೇತ್ರಗಳನ್ನು ನಿಗದಿ ಮಾಡುವುದರ ಬಗ್ಗೆ ತಾವು ಹೇಳಿದೀರಿ,blanket powers are given to the Deputy Commissioners, to the government. ಅದು ಎಷ್ಟರಮಟ್ಟಿಗೆ ಸರಿ? ತಾವು ಹೇಳಬಹುದು, ನಾಡಗೌಡರು ಹೇಳಿದಹಾಗೆ ನಿಮ್ಮ ಕಾಲದಲ್ಲಿ ಕೊಟ್ಟಿರಲಿಲ್ಲವೆ ಎಂದು? ಅದಕ್ಕೆ ಒಂದು ನೀತಿ ನಿರೂಪಣೆ ಮಾಡಬೇಕು. ಅದಕ್ಕೆ ಗೈಡ್‌ಲೈನ್ಸ್ ಏನು ? ಹೇಗೆ ಬೇಕಾದರೂ ಮಾಡಬಹುದೆ ? ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇದರಲ್ಲಿ ಸಂವಿಧಾನದ ತಿದ್ದುಪಡಿಯನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ತಾವು ಏನು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನು ನಿಗದಿ ಮಾಡುತ್ತೀರಿ ಅದನ್ನು nobody can question in the court of law. ಚುನಾವಣೆ ಆಗಿರಬಹುದು, ಅಥವಾ ಡೀಲಿಮಿಟೇಷನ್ ಏನಿದೆ ಅದನ್ನು ಪ್ರಶ್ನೆ ಮಾಡುವ ಅಧಿಕಾರ ನಮಗೆ ಇಲ್ಲ, ಹೌದೆ ? ಇಂಥ ಒಂದು ಅಧಿಕಾರ ಇಲ್ಲದಿರುವ ಸಂಧರ್ಭದಲ್ಲಿ ಯಾವ ಒಬ್ಬ ಅಧಿಕಾರಿಗೆ ತಾವು ಅಧಿಕಾರ ಕೊಡುತ್ತೀರಿ ಆ ಅಧಿಕಾರ ನಿರ್ಧಿಷ್ಟಪಡಿಸಿದ ರೀತಿಯಲ್ಲಿ

ನಿರ್ದಿಷ್ಟಪಡಿಸಿದ ಮಾರ್ಗದರ್ಶನದ ಆಧಾರದ ಮೇಲೆ ಚುನಾವಣಾ ಕ್ಷೇತ್ರಗಳನ್ನು ನಿಗದಿ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಟ್ಟಿಲ್ಲ.

ಶ್ರೀ ಎಂ.ವಿ. ವೆಂಕಟಪ್ಪ : ಡೆಪ್ಯೂಟಿ ಕಮಿಷನರ್ ಮತ್ತು ಡಿವಿಜನಲ್ ಕಮಿಷನರ್ ಹತ್ತಿರ ಅಪೀಲು ಹೋಗಬಹುದುದೆಂದು ಇದೆ.

1.20 ಎ.ಎಂ

ಶ್ರೀ ಹೆಚ್.ಏಕಾಂತಯ್ಯ : ಆಯಿತು. ಮಾನ್ಯ ವೆಂಕಟಪ್ಪನವರು ಹೇಳಿದಹಾಗೆ ಮೇಲ್ಮನವಿಸಲ್ಲಿಸುವ ಅಧಿಕಾರ ಇದ್ದರೂ ಸಹಾ ನಾನು ಹೇಳುತ್ತೇನೆ, ಅದಕ್ಕೆ ಆಧಾರ ಇಲ್ಲದೇ ಇದ್ದರೆ ಆ ಮೇಲ್ಮನವಿಯ ತೀರ್ಮಾನ ಕೂಡಾ ಅಷ್ಟೇ ಗೊಂದಲದಿಂದ ಕೂಡಿರುತ್ತದೆ. ಅದರಲ್ಲಿ ಅನುಮಾನ ಇಟ್ಟುಕೊಳ್ಳಬೇಡಿ. ಏಕೆಂದರೆ ನಿರ್ದಿಷ್ಟವಾದ ರೀತಿಯಲ್ಲಿ ಹೊಣೆಗಾರಿಕೆಯನ್ನು ಏನಾದರು ಮಾಡುವುದಕ್ಕೆ ಅನುವು ಮಾಡದೇ ಇದ್ದರೆ, ಮಾರ್ಗದರ್ಶನ ಮಾಡದೇ ಇದ್ದರೆ ಅದು ಸಾಧ್ಯವಾಗುವುದಿಲ್ಲ. ಆ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಶ್ರೀ ಎಂ.ವಿ.ವೆಂಕಟಪ್ಪ : ರೂಲ್ಸ್‌ನಲ್ಲಿ ಮೆನ್‌ಷನ್ ಮಾಡುತ್ತಾರೆ. ಗೈಡ್‌ಲೈನ್ಸ್‌ನಲ್ಲಿ ಇಲ್ಲ.

ಶ್ರೀ ಹೆಚ್. ಏಕಾಂತಯ್ಯ : ಅದು ನಿಮ್ಮ ಬಿಲ್‌ನಲ್ಲಿ ಇದೆಯೇ?

ಶ್ರೀ ಎಂ.ವಿ. ವೆಂಕಟಪ್ಪ : ಇಲ್ಲ.

ಶ್ರೀ ಹೆಚ್. ಏಕಾಂತಯ್ಯ : ಮತ್ತೆ ಓದೋದಿಲ್ಲ ಮಾಡೋದಿಲ್ಲ, ನಮ್ಮ ಪ್ರಾಣ ತಿನ್ನುತ್ತೀರಲ್ಲ ನೀವು ಹೇಳಿದ ರೀತಿಯಲ್ಲಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನು ನಿಗದಿ ಮಾಡುವಾಗ ಸರ್ಕಾರ ರೂಪಿಸಬಹುದಾದ ನಿಯಮಾವಳಿಗಳ ರೀತ್ಯ ಮಾಡಬೇಕೆಂದು ಇದ್ದರೆ . ವೆಂಕಟಪ್ಪನವರು ಹೇಳಿದ್ದನ್ನು ಒಪ್ಪಿಕೊಳುತ್ತೇನೆ. ಅಂತಹ ಒಂದು ವಿಧಿ ಇದರಲ್ಲಿ ಇಲ್ಲ. ಈ ರೀತಿಯಾಗಿ ತಾವು ಏನು ಇವತ್ತಿನದಿವಸ ಈ ಚುನಾವಣಾ ಪ್ರಾದೇಶಿಕ.....

ಶ್ರೀ ಎಂ.ವೈ. ಘೋರ್ಪಡೆ : ಡೀಲಿಮಿಟೇಷನ್ಸ್ ಮಾಡುವುದು ಹೊಸದು ಅಲ್ಲ. ನೂರಾರು ಸಲ ನಮ್ಮ ಅಧಿಕಾರಸ್ಥರು ಡೀಲಿಮಿಟೇಷನ್ಸ್ ಮಾಡಿದ್ದಾರೆ. ಅವರಿಗೆ ತಿಳಿದ ಹಾಗೆ ಮಾಡುವುದಕ್ಕೆ ಸ್ವಾತಂತ್ರ್ಯ ಇಲ್ಲ. ಅದಕ್ಕೆ ಒಂದು ಕ್ರಮ ಇದೆ. ಕಾಂಟಿಗ್ಯುಯಿಟಿ, ಪಾಪ್ಯುಲೇಷನ್, ಕಾಂಪ್ಯಾಕ್ಟ್‌ನೆಸ್ ಇದೆಲ್ಲಾ ನೋಡಿ ಡೀಲಿಮಿಟೇಷನ್ ಮಾಡಿಕೊಂಡು ಬಂದಿದ್ದಾರೆ. ಅದನ್ನು ಬಿಟ್ಟು ಇವತ್ತು ಸ್ವೇಚ್ಛೆಯಿಂದ ಅವರು ಬೇಕಾದ್ದು ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇವೆಂದು ಹೇಳುವುದು ಸರಿಯಲ್ಲವೆಂದು ಹೇಳಬೇಕಾಗುತ್ತದೆ.

ಶ್ರೀ ಹೆಚ್. ಏಕಾಂತಯ್ಯ : ನೀವು ಎಲ್ಲವನ್ನು ನಿಮ್ಮ ದೃಷ್ಟಿಕೋನದಿಂದಲೇ ನೋಡಬೇಡಿ. ಈ ದೇಶದಲ್ಲಿ ನಮ್ಮ ನಿಮ್ಮ ಪ್ರಭಾವಕ್ಕೆ ಒಳಗಾಗಿ ಸಂಬಂಧಪಟ್ಟ ಅಧಿಕಾರಿಗಳು ನೀವು ಹೇಳಿದ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಮಾಡಬಹುದು. ಅವರಿಗೆ ಬಂಧಿಸತಕ್ಕ ನಿಯಮಾವಳಿ ಮಾಡಿಲ್ಲ. ಆದುದರಿಂದ ಹೆಚ್ಚುಹೆಚ್ಚು ಸ್ವೇಚೆಯಿಂದ ತಮ್ಮ ಅಧಿಕಾರವನ್ನು ಚಲಾವಣೆ ಮಾಡುವುದಕ್ಕೆ ಅನುವಾಗುವ ರೀತಿಯ ಕಾನೂನನ್ನು ತಂದಿದ್ದೀರಿ ಎನ್ನುವುದು ನನ್ನ ವಾದ. ಇವತ್ತು ಸಂವಿಧಾನದಲ್ಲಿ ಪಾಪ್ಯುಲೇಷನ್ ಬಗ್ಗೆ ಇರುವುದರಿಂದ ಅವರು ನೋಡಲೇಬೇಕು. ಕಾಂಟಿಗ್ಯುಯಿಟಿ ಬಗ್ಗೆ ಹೇಳಿದ್ದೀರಿ. ಆದುದರಿಂದ ಈ ಒಂದು ಮಿತಿ ಇದ್ದಾಗ ಅದು ಅತ್ಯಂತ ಅಪಾಯಕಕಾರಿ ಆಗುತ್ತದೆ. ಸ್ವೇಚ್ಛಾವರ್ತನೆಗೆ ಕಾರಣವಾಗುತ್ತದೆ. ಆದ್ದರಿಂದ ನಿರ್ದಿಷ್ಟಪಡಿಸಿದ ಗೈಡ್‌ಲೈನ್ಸ್ ಇಲ್ಲ. ಮಾನ್ಯ ವೆಂಕಟಪ್ಪನವರು ಹೇಳಿದಹಾಗೆ ಪ್ರಿಸ್‌ಕ್ರೈಬ್ ಮಾಡಿ ರೂಲ್ಸ್ ಮಾಡುತ್ತೇವೆಂದು ಇದ್ದರೆ ಅದನ್ನು ಹೇಳಬೇಕಾಗುತ್ತದೆ. ಅದಕ್ಕೆ ಸಂಬಂಧಪಟ್ಟಹಾಗೆ ತಿದ್ದುಪಡಿ ತರಬೇಕಾದುದು ಅತ್ಯಂತ ಅವಶ್ಯಕ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ.ಶಿವಮೂರ್ತಿ : ಏಕಾಂತಯ್ಯನವರೇ, ದೀಲಿಮಿಟೇಷನ್ಸ್ ಬಗ್ಗೆ ಹೇಳುತ್ತಿದ್ದೀರಿ. ಯಾವ ರೀತಿ ಗೈಡ್‌ಲೈನ್ಸ್ ಇರಬೇಕೆಂದು ಹೇಳಿ.

ಶ್ರೀ ಹೆಚ್. ಏಕಾಂತಯ್ಯ : ನನಗೆ ಆ ಕಡೆ ಕೂರಿಸಿ, ಹೇಳುತ್ತೇನೆ.

ಶ್ರೀ ಕೆ. ಶಿವಮೂರ್ತಿ : ಹಿಂದೆ ಡೀಲಿಮಿಟೇಷನ್ಸ್ ಮಾಡುವಾಗ ಯಾವ ರೀತಿ ಎಲ್ಲೆಮೀರಿ ಮಾಡಿದ್ದಾರೆ ಎನ್ನುವ ಬಗ್ಗೆ ತಮ್ಮ ಹತ್ತಿರ ಆಧಾರ ಇದೆ. ಅದನ್ನು ಆಧಾರವಾಗಿಟ್ಟುಕೊಂಡು ಯಾವ ರೀತಿ ನೈತಿಕ ಹೊಣೆಗಾರರನ್ನಾಗಿ ಮಾಡಬೇಕೆಂದು ಸಲಹೆ ಕೊಡಿ.

ಶ್ರೀ ಎಂ. ವೈ. ಘೋರ್ಪಡೆ : ಪ್ರತಿಯೊಂದು ವಿಷಯವನ್ನೂ ಆಕ್ಟ್‌ನಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡಿದರೆ ವಿಕೃತವಾಗುತ್ತದೆ. ಆಕ್ಟ್‌ನಲ್ಲಿ ಸೇರಿಸುವುದನ್ನು ಆಕ್ಟ್‌ನಲ್ಲಿ ಸೇರಿಸಬೇಕು. ರೂಲ್ಸ್‌ನಲ್ಲಿ ಸೇರಿಸುವುದನ್ನು ರೂಲ್ಸ್‌ನಲ್ಲಿ ಸೇರಿಸಬೇಕು. ಹಾಗೆ ಮಾಡಿದರೆ ಜನರಿಗೆ ಅರ್ಥವಾಗುತ್ತದೆ. ಖಂಡಿತವಾಗಿ ಇದರ ಬಗ್ಗೆ ನಾವು ರೂಲ್ಸ್ ಮಾಡುತ್ತೇವೆ. ಆ ರೂಲ್ಸ್ ಮಾಡುವ ಅಧಿಕಾರವನ್ನು ಈ ಅಕ್ಟ್‌ನಲ್ಲಿ ಸೇರಿಸಿಲ್ಲ.

ಶ್ರೀ ಹೆಚ್. ಏಕಾಂತಯ್ಯ : ರೂಲ್ಸ್ ಮಾಡುವುದಾದರೆ ನಿಮ್ಮಿಂದ ನಾನು ಭರವಸೆ ಏನು ಕೇಳುತ್ತೇನೆಂದರೆ, ರೂಲ್ಸ್‌ನಲ್ಲಿ ರೂಪಿಸಿ ಬರಲಾದ ನಿಯಮಾವಳಿಗಳಿಗೆ ಅನುಗುಣವಾಗಿ ಚುನಾವಣಾ ಕ್ಷೇತ್ರವನ್ನು ನಿಗದಿ ಮಾಡತಕ್ಕದ್ದು ಎಂದು ಈ ವಿಧೇಯಕದಲ್ಲಿ ಇದ್ದಿದ್ದರೆ ಒಪ್ಪುತ್ತೇನೆ. ಈ ವಿದೇಯಕದಲ್ಲಿ ಅದು ಇಲ್ಲ. ಇದನ್ನು ತಮ್ಮ ಗಮನಕ್ಕೆತಂದಿದ್ದೇನೆ. ಇದರ ಬಗ್ಗೆ ಚರ್ಚೆ ಬೇಡ. ಅದುನಿಮಗೆ ಬಿಟ್ಟಿದ್ದು. ತದನಂತರ ಗ್ರಾಮಸಭಾದ ಪರಿಕಲ್ಪನೆಯ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಡೀ ದೇಶದಲ್ಲಿ ಮೊಟ್ಟಮೊದಲು ಜನರೇ ಭಾಗವಹಿಸತಕ್ಕಂತಹ ಈ ರೀತಿಯಲ್ಲಿ ಗ್ರಾಮಸಭೆಯ ಪರಿಕಲ್ಪನೆ ಪ್ರಾರಂಭ ಆಗಿದ್ದು ಈ ಒಂದು ರಾಜ್ಯದಲ್ಲಿ ಜನತಾದಳ ಅಥವಾ ಜನತಾಪಕ್ಷ ಅಧಿಕಾರ ಇದ್ದಾಗ ಏನು ಕಾನೂನು ತಂದೆವು ಅದರಲ್ಲಿ ಮೊಟ್ಟಮೊದಲು ಪ್ರಾರಂಭವಾಯಿತೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ.ಶಿವಮೂರ್ತಿ : ಏಕಾಂತಯ್ಯನವರೇ, ಡೀಲಿಟೇಷನ್ ಬಗ್ಗೆ ಹೇಳುತ್ತಿದ್ದೀರಿ. ಯಾವ ರೀತಿ ಗೈಡ್‌ಲೈನ್ಸ್ ಇರಬೇಕೆಂದು ಹೇಳಿ.

ಶ್ರೀ ಏಕಾಂತಯ್ಯ : ನನಗೆ ಆ ಕಡೆ ಕೂರಿಸಿ, ಹೇಳುತ್ತೇನೆ.

ಶ್ರೀ ಕೆ.ಶಿವಮೂರ್ತಿ : ಹಿಂದೆ ಡೀಲಿಮಿಟೇಷನ್ಸ್ ಮಾಡುವಾಗ ಯಾವ ರೀತಿ ಎಲ್ಲೆಮೀರಿ ಮಾಡಿದ್ದಾರೆ ಎನ್ನುವ ಬಗ್ಗೆ ತಮ್ಮ ಹತ್ತಿರ ಆಧಾರ ಇದೆ. ಅದನ್ನು ಆಧಾರವಾಗಿಟ್ಟುಕೊಂಡು ಯಾವ ರೀತಿ ನೈತಿಕ ಹೊಣೆಗಾರನ್ನಾಗಿ ಮಾಡಬೇಕೆಂದು ಸಲಹೆ ಕೊಡಿ.

ಶ್ರೀ ಎಂ.ವೈ ಘೋರ್ಪಡೆ : ಪ್ರತಿಯೊಂದು ವಿಷಯವನ್ನೂ ಅಕ್ಟ್‌ನಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡಿದರೆ ವಿಕೃತವಾಗುತ್ತದೆ. ಆಕ್ಟ್‌ನಲ್ಲಿ ಸೇರಿಸುವುದನ್ನು ಆಕ್ಟ್‌ನಲ್ಲಿ ಸೇರಿಸಬಹುದು. ರೂಲ್ಸ್ ಸೇರಿಸುವುದನ್ನು ರೂಲ್ಸ್‌ನಲ್ಲಿ ಸೇರಿಸಬೇಕು. ಹಾಗೆ ಮಾಡಿದರೆ ಜನರಿಗೆ ಅರ್ಥವಾಗುತ್ತದೆ. ಖಂಡಿತವಾಗಿ ಇದರ ಬಗ್ಗೆ ನಾವು ರೂಲ್ಸ್ ಮಾಡುತ್ತೇವೆ. ಅರೂಲ್ಸ್ ಮಾಡುವ ಅಧಿಕಾರವನ್ನು ಈ ಅಕ್ಟ್‌ನಲ್ಲಿ ಸೇರಿಸಿಲ್ಲ.

ಶ್ರೀ ಹೆಚ್.ಏಕಾಂತಯ್ಯ : ರೂಲ್ಸ್ ಮಾಡುವುದಾದರೆ ನಿಮ್ಮಿಂದ ನಾನು ಭರವಸೆ ಏನು ಕೇಳುತ್ತೇನೆಂದರೆ ರೂಲ್ಸ್‌ನಲ್ಲಿ ರೂಪಿಸಿ ಬರಲಾದ ನಿಯಮಾವಳಿಗಳಿಗೆ ಅನುಗುಣವಾಗಿ ಚುನಾವಣಾ ಕ್ಷೇತ್ರವನ್ನು ನಿಗದಿ ಮಾಡತಕ್ಕದ್ದು ಎಂದು ಈ ವಿದೇಯಕದಲ್ಲಿ ಇದ್ದಿದ್ದರೆ ಒಪ್ಪುತ್ತೇನೆ. ಈ ವಿದೇಯಕದಲ್ಲಿ ಅದು ಇಲ್ಲ ಇದನ್ನು ತಮ್ಮ ಗಮನಕ್ಕೆತಂದಿದ್ದೇನೆ. ಇದರ ಬಗ್ಗೆ ಚರ್ಚೆ ಬೇಡ. ಅದುನಿಮಗೆ ಬಿಟ್ಟಿದ್ದು. ತದನಂತರ ಗ್ರಾಮಸಭಾದ ಪರಿಕಲ್ಪನೆಯ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಡೀ ದೇಶದಲ್ಲಿ ಮೊಟ್ಟಮೊದಲು ಜನರೇ ಭಾಗವಹಿಸತಕ್ಕಂತಹ ಈ ರೀತಿಯಲ್ಲಿ ಗ್ರಾಮಸಭೆಯ ಪರಿಕಲ್ಪನೆ ಪ್ರಾರಂಭ ಆಗಿದ್ದು ಈ ಒಂದು ರಾಜ್ಯದಲ್ಲಿ ಜನತಾದಳ ಅಥವಾ ಜನತಾಪಕ್ಷ ಅಧಿಕಾರ ಇದ್ದಾಗ ಏನು ಕಾನೂನು ತಂದೆವು ಅದರಲ್ಲಿ ಮೊಟ್ಟಮೊದಲು ಪ್ರಾರಂಭವಾಯಿಚೆಂಜು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಶಿವಮೂರ್ತಿ : ಅದಕ್ಕಿಂತಲೂ ಮುಂಚೆ ಜಿಲ್ಲಾ ಬೋರ್ಡ್‌ಗಳು ಇದ್ದವು. ತಾಲ್ಲೂಕುಪಂಚಾಯಿತಿ ಇತ್ತು. ಆಗ ಗ್ರಾಮ ಸಭೆ ಚೆನ್ನಾಗಿ ನಡೆಯುತ್ತಿತ್ತು. ಅದಕ್ಕೆ ತಾವು ಹೊಸ ರೂಪಕೊಟ್ಟು ಹಾಳುಮಾಡಿದಿರಿ ಎಂದು ನಾನು ಹೇಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ಆಮೇಲೆ ಮಾತನಾಡಿ. ನಮ್ಮ ತಕರಾರು ಇಲ್ಲ. ಗ್ರಾಮಸಭೆ ಎಂದರೆ ಏನು ಎಂದು ಅರ್ಥ ಆಗಿದ್ದರೆ ಇದನ್ನು ಅವರು ಹೇಳುತ್ತಿರಲಿಲ್ಲ. ನಾನು ಹೇಳುತ್ತಿರುವುದು ಗ್ರಾಮಸಭೆಯ ಪರಿಕಲ್ಪನೆ, ಗ್ರಾಮಸಭೆ ಏನು ಅನ್ನುವುದನ್ನು ಈಗಾಗಲೇ ಹಿಂದಿನ ಅಕ್ಟ್‌ನಲ್ಲಿ ಹೇಳಿದ್ದೇವೆ. ಗ್ರಾಮಪಂಚಾಯಿತಿ ಬೇರೆ, ಗ್ರಾಮಸಭೆ ಬೇರೆ. ಅದನ್ನು ಇಲ್ಲ ಹೇಳುವುದಕ್ಕಾಗುತ್ತದೆಯೇ ? ನಾನು ಪಾಠ ಮಾಡುವುದಕ್ಕಾಗುವುದಿಲ್ಲ. ನಾನು ನನ್ನ ಅಭಿಪ್ರಾಯವನ್ನು ಮಾತ್ರ ಸಭೆಯ ಮುಂದೆ ಇಡುತ್ತೇನೆ.

ಶ್ರೀ ಕೆ. ಶಿವಮೂರ್ತಿ : ಗ್ರಾಮಸಭೆ ಬೇರೆಯೆಂದು ನಾವು ಪದ ಕೊಟ್ಟಿರಲಿಲ್ಲ. ಆದರೆ ಹಿಂದೆ ಗ್ರಾಮಸಭೆಗಳನ್ನು ನಡೆಸುತ್ತಿದ್ದರು. ಆ ಪದವನ್ನು ನೀವು ಕೊಟ್ಟಿರಿ ಅಷ್ಟೆ, ಪ್ರಾಕ್ಟಿಕಲ್ ಆಗಿ ಹಿಂದೆ ಆ ಕೆಲಸ ಆಗಿತ್ತು.

ಶ್ರೀ ಹೆಚ್. ಏಕಾಂತಯ್ಯ : ಅವರ ಅಭಿಪ್ರಾಯ ಏನೇ ಇರಲಿ. ನಾನು ಅದನ್ನು ಪ್ರಶ್ನೆ ಮಾಡುವುದಿಲ್ಲ. ನಾನು ಹೇಳುತ್ತಿರುವುದು ವಸ್ತುಸ್ಥಿತಿ: ಅದನ್ನು

ಒಪ್ಪಿಕೊಳ್ಳುವ ಸೌಜನ್ಯ ಇಲ್ಲದಿದ್ದರೆ ನಾನೇನು ಮಾಡಲಿಕ್ಕೆ ಸಾಧ್ಯವಿಲ್ಲ. ಗ್ರಾಮಸಭೆಯ ಪರಿಕಲ್ಪನೆ ಅಥವಾ ಇಂತಹ ಒಂದು ಕಾರ್ಯಗಳಲ್ಲಿ ಅಭಿಪ್ರಾಯ ಕೆಳಹಂತದಲ್ಲಿ ಸಾಮಾನ್ಯ ಜನರು ಪ್ರತಿಯೊಬ್ಬ ಮತದಾರರು ಸಹ ಸ್ವಲ್ಪಮಟ್ಟಿಗೆ ಭಾಗವಹಿಸುವಂತೆ ಅವಕಾಶ ಕೊಟ್ಟಿತ್ತು. ಕರ್ನಾಟಕದಲ್ಲಿ ಜನತಾದಳದ ಸರ್ಕಾರ ಮೊಟ್ಟಮೊದಲು ಕಾನೂನು ತಂದಿತ್ತು ಎನ್ನುವಮಾತನ್ನು ನಾನು ಪುನ : ಹೇಳಲಿಕ್ಕೆ ಹೆಮ್ಮೆಪಡುತ್ತೇನೆ.

ಶ್ರೀ ಕೆ. ಶಿವಮೂರ್ತಿ .: ನಾವು ಐಆರ್‌ಡಿಪಿ ಲೋನ್ ಕೊಡಲು ಫಲಾನುಭವಿಗಳನ್ನು ಸೆಲೆಕ್ಟ್ ಮಾಡಬೇಕಾದರೆ ಹೋಗಿ ಹೆಸರು ಬರೆದುಕೊಂಡು ಬರುತ್ತಿರಲಿಲ್ಲ. ಸಭೆ ಸೇರಿ ಫಲಾನುಭವಿಗಳನ್ನು ಸೆಲೆಕ್ಟ್ ಮಾಡುತ್ತಿದ್ದರು. ಆದರೆ ಈ ಪದ ಕೊಟ್ಟಿರಲಿಲ್ಲ.

ಶ್ರೀ ಹೆಚ್. ಏಕಾಂತಯ್ಯ : ಈ ಕಾನೂನಿನ ಅಡಿಯಲ್ಲಿ ಮುಖ್ಯವಾದ ಉದ್ದೇಶ ಏನಾದರೂ ಇತ್ತೆಂದರೆ, ಮಹಾತ್ಮಾಗಾಂಧೀಜಿಯವರು ಪಂಡಿತ ಜವಹರಲಾಲ್‌ನೆಹರು ಅವರು ಗ್ರಾಮೀಣ ಸ್ವರಾಜ್ಯದ ಹರಿಕಲ್ಪನೆ ಏನಿತ್ತು ಅಂದರೆ ಏನಾದರೂ ಯೋಜನೆ ಕೆಲಸಕಾರ್ಯಗಳನ್ನು ಮಾಡಬೇಕಾದರೆ ತಮಗೆ ಬೇಕಾದಂತಹ ಯೋಜನೆಗಳನ್ನು ರೂಪಿಸಿಕೊಂಡು ಆ ಕಾರ್ಯಕ್ರಮವನ್ನು ಅನುಷ್ಠಾನ ಮಾಡುವಂತಹ ಸಂದರ್ಭದಲ್ಲಿ ಸೂಪರ್‌ವಿಷನ್ ಪವರ್ ಎಂದು ಹೇಳಿ ಮತ್ತು ನಿಯಂತ್ರಣ ಮಾಡುವಂತಹ ಅಧಿಕಾರವನ್ನು ಕೆಳಹಂತದಲ್ಲಿ ಜನರಿಗೆ ಕೊಡುವ ವ್ಯವಸ್ಥೆಯನ್ನು ಗ್ರಾಮೀಣ ಸ್ವರಾಜ್ಯದ ಒಂದು ಪರಿಕಲ್ಪನೆಯಲ್ಲಿ ನಾವು ಕಂಡಿದ್ದೇವೆ. ಅಂತಹ ಒಂದು ಪರಿಕಲ್ಪನೆ ಅಷ್ಟೆ ಅಲ್ಲ, ಸಾಮಾನ್ಯ ಜನರು ಬಾಗವಹಿಸಬೇಕು ಎನ್ನುವ ದೃಷ್ಟಿಯಿಂದ ಇಂತಹ ಒಂದು ಗ್ರಾಮಸಭೆಯನ್ನು ನಾವು ಮಾಡಿ ಕೊಂಡಿದ್ದೇವೆ, ಅದನ್ನು ಮುಂದುವರಿಸುತ್ತಾ ಇದ್ದರೆ ತಮಗೆ ಅಭಿನಂದನೆಗಳು. ಆವೊಂದು ಪ್ರಶ್ನೆಯನ್ನು ಶಾಸನದಲ್ಲಿ ತಂದಿದ್ದಾರೆ. ಮೊದಲು ಚುನಾವಣೆಗಳನ್ನು ಯಾವ ರೀತಿ ಮಾಡಬೇಕೆಂದು ಸ್ಪಷ್ಟವಾಗಿರಲಿಲ್ಲ. ಗ್ರಾಮಪಂಚಾಯಿತಿಯ ಚುನಾವಣೆಯನ್ನು ಪಕ್ಷದ ಆಧಾರದ ಮೇಲೆ ಮಾಡಬೇಕೇ ಅಥವಾ ಬೇಡವೇ ಎಂಬ ಬಗ್ಗೆ ಜಿಜ್ಞಾಸೆ ಇತ್ತೆಂದು ಕಾಣುತ್ತದೆ. ಆ ಜಿಜ್ಞಾಸೆ ಪುನ : ಪರಿಹಾರವಾದಹಾಗೆ ಕಾಣುತ್ತದೆ. ಈಗ ಒಂದು ತೀರ್ಮಾನಕ್ಕೆ ಸರ್ಕಾರ ಬಂದಿದೆಯೆಂದು ನಾನು ಬಾವಿಸಿದ್ದೇನೆ. ಅವರು ಇದಕ್ಕೆ ಒಂದು ತಿದ್ದುಪಡಿಯನ್ನು ಕಳುಹಿಸಿದ್ದಾರೆ ಅದೇನೆಂದರೆ ಕೆಳಹಂತದಲ್ಲಿ ಅಂದರೆ ಗ್ರಾಮಪಂಚಾಯತಿ ಚುನಾವಣೆಗಳನ್ನು ನಾವು ಪಕ್ಷದ ಆಧಾರದ ಮೇಲೆ ಮಾಡಲಿಕ್ಕೆ ಸಾಧ್ಯವಿಲ್ಲ, ಬೇರೆ ರೀತಿಯಲ್ಲಿ ಮಾಡಬೇಕೆಂದು ಅವರು ಹೇಳಿದ್ದಾರೆ. ನಾನು ಕೇಳುತ್ತೀನೆ, ಪಕ್ಷದ ಆಧಾರದ ಮೇಲೆ ತಾವು ಏತಕ್ಕೋಸ್ಕರ ಮಾಡಲಿಕ್ಕೆ ತೊಂದರೆಯಿದೆ ? ತೊಂದರೆ ಇದೆ ಎಂದು ಹೇಳುವಂತಹ ಜನ ಮುಖ್ಯವಾಗಿ ಹೇಳುವುದು ಗ್ರಾಮೀಣಪ್ರದೇಶಗಳಲ್ಲಿ ವರ್ಗಗಳ ಸಂಘರ್ಷಣೆಯಾಗುತ್ತದೆ ಜಾತಿಗಳ ಗುಂಪಾಗುತ್ತದೆ ಅಥವಾ ವ್ಯಕ್ತಿಗಳ ಗುಂಪಾಗುತ್ತದೆ ಕಾನೂನು ಪರಿಪಾಲನೆ ಮಾಡಲಿಕ್ಕೆ ಸಮಸ್ಯೆಯಾಗಬಹುದು ಮತ್ತು ಹಳ್ಳಿಗಳಲ್ಲಿ ದ್ವೇಷ ಭಾವನೆ ಉಂಟಾಗಬಹುದೆನ್ನುವ ಮಾತನ್ನು ಹೇಳುತ್ತಾರೆ. ಹಾಗಾಗಿ ನೀವು ಚುನಾವಣೆಗಳನ್ನು ಲೋಕಸಭೆಗೆ ಮಾಡಿದಾಗ, ವಿಧಾನಸಭೆಗೆ ಮಾಡಿದಾಗ, ಕೆಳ ಹಂತದಲ್ಲಿ ತಾಲ್ಲೂಕು ಸಮಿತಿಗಳಿಗೆ ಮಾಡಿದಾಗ ಪಕ್ಷದ ಆಧಾರದ ಮೇಲೆ ಮಾಡುವುದಾದರೆ ಈಗ ತಾವೇನು ಲೋಪದೋಷಗಳನ್ನು ಹೇಳಿದ್ದೀರಿ ಅಂತಹ ಒಂದು

ಪರಿಸ್ಥಿತಿ ನಿರ್ಮಾಣವಾಗುವುದಿಲ್ಲವೆ ? ಏನು ಗ್ಯಾರಂಟಿ ಕೊಟ್ಟಿದ್ದೀರಿ ? ಒಂದು ಊರಿನಲ್ಲಿ ಕಾಂಗ್ರೆಸ್ ಅಥವಾ ಭಾರತೀಯ ಜನತಾ ಪಾರ್ಟಿ, ಜನತಾದಳ ಪಕ್ಷಗಳಿಗೆ ಸೇರಿದ ಅಭ್ಯರ್ಥಿಗಳು ಸ್ಪರ್ಧೆ ಮಾಡುವುದರಿಂದ ಇಂತಹ ಒಂದು ವೈಷಮ್ಯಗಳು ದ್ವೇಷಭಾವನೆಗಳು ಕೆಳಹಂತದಲ್ಲಿ ಉಂಟಾಗುತ್ತವೆಂದರೆ ಅದು ತಪ್ಪು. ನಮ್ಮ ಜನತಂತ್ರ ವ್ಯವಸ್ಥೆಯನ್ನು ಮೊಟ್ಟಮೊದಲನೆಯದಾಗಿ ಮುಂದುವರಿಸಿಕೊಂಡು ಹೋಗಬೇಕಾದರೆ ಪಾರ್ಲಿಮೆಂಟರಿ ಸಿಸ್ಟಮ್ ಆಫ್ ಡೆಮಾಕ್ರಸಿ ಎಂದು ನಾವೇನು ಕರೆಯುತ್ತೇವೆ ಪ್ರಜಾಪ್ರಭುತ್ವದ ಒಂದು ಸಂಸ್ಥೆ ಏನಾದರೂ ಈ ದೇಶದಲ್ಲಿ ಉಳಿಯಬೇಕಾದರೆ ವ್ಯವಸ್ಥಿತವಾದ ರೀತಿಯಲ್ಲಿ ಸೈದ್ಧಾಂತಿಕವಾದ ರೀತಿಯಲ್ಲಿ ನಮ್ಮ ಜನರನ್ನು ತಯಾರು ಮಾಡಬೇಕಾಗುತ್ತದೆ. ಅದಕ್ಕೆ ಬದಲಾಗಿ ಕಾಂಗ್ರೆಸ್ ಮತ್ತು ಸಮಾಜವಾದಿ ಜನತಾಪಕ್ಷ ಎಂದು ಹೇಳಿದರೆ ಎಲ್ಲಿ ತಪ್ಪಾಗುತ್ತದೆ ? ಆದರೆ ಅದು ಸಾಧ್ಯವಿಲ್ಲ. ಇವತ್ತಿನದಿವಸ ಒಂದು ನೀತಿಯನ್ನು ಕೆಳಹಂತದಲ್ಲಿ ಪ್ರತಿನಿಧಿಸದೇ ಇರುವುದರಿಂದ ಮತ್ತು ಇದರಿಂದ ಏನಾದರೂ ಮೇಲ್ಮೆಯನ್ನು ಸಾಧಿಸುತ್ತೇವೆ ಎಂದು ತಿಳಿದುಕೊಂಡಿದ್ದರೆ ಅದು ತಪ್ಪು. ಒಂದು ಕಾಂಗ್ರೆಸ್ ಮತ್ತು ಜನತಾದಳದ ಗುಂಪು ಆಗಿಲ್ಲದೇ ಇರಬಹುದು. ಇದು ಬೇರೆಯವರ ಹೆಸರಿನಲ್ಲಿ, ವ್ಯಕ್ತಿಗಳ ಹೆಸರಲ್ಲಿ ಗುಂಪು ಆಗುತ್ತದೆ. ಮತ್ತು ಮತ್ತಷ್ಟು ತೀವ್ರವಾದಂಥ ದ್ವೇಷಬಾವನೆ ಉಂಟಾಗುವುದಕ್ಕೆ ಕಾರಣವಾಗುತ್ತದೆ. ಅದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮಲ್ಲಿ ಏನು ಆ್ಯಂಟಿ ಡಿಫೆಕ್ಷನ್ ಬಿಲ್ ಇದೆ. ಆ ದೃಷ್ಟಿಯಿಂದ ಹೇಳುತ್ತಿದ್ದೇನೆ. ಜನತಂತ್ರ ವ್ಯವಸ್ಥೆ ಸರಿಯಾದ ರೀತಿಯಲ್ಲಿ ನಡೆಯಬೇಕಾದರೆ ಪಕ್ಷ ಆಧಾರಿತವಾದಂಥ ಸೈದ್ಧಾಂತಿಕವಾದ ರೀತಿಯಲ್ಲಿ ಜನರನ್ನು ಸಿದ್ಧಪಡಿಸಬೇಕಾಗಿದೆ. ಅವರನ್ನು ಹಾಗೆ ತಯಾರು ಮಾಡಬೇಕಾಗಿದೆ. ಈ ದಿಸೆಯಿಂದಲೂ ಸಹ ತಾವು ಇದನ್ನು ಪುನರಾಲೋಚನೆ ಮಾಡಬೇಕು ಮತ್ತು ಪಕ್ಷದ ಆಧಾರದ ಮೇಲೆ ಚುನಾವಣೆಗಳನ್ನು ಗ್ರಾಮಪಂಚಾಯತಿ ಮಟ್ಟದಲ್ಲಿ ನಡೆಸುವುದು ಅತ್ಯಂತ ಅವಶ್ಯಕ. ಇದು ಕೇವಲ ಕೆಳಹಂತದಲ್ಲಿ ಸೈದ್ಧಾಂತಿಕವಾಗಿ ಜನರನ್ನು ತಯಾರು ಮಾಡುವ ದೃಷ್ಟಿಯಿಂದ ಮಾತ್ರವಲ್ಲ, ಆ ರೀತಿ ತಯಾರಾದಂಥ ಜನ ಜನತಂತ್ರದ ಸಂಘಸಂಸ್ಥೆಗಳಲ್ಲಿ ಅದು ವಿಧಾನಸಭೆ ಇರಬಹುದು, ತಾಲ್ಲೂಕು ಪಂಚಾಯತಿ ಇರಬಹುದು ಮತ್ತು ಜಿಲ್ಲಾ ಪರಿಷತ್ತು ಇರಬಹುದು, ಪಾರ್ಲಿಮೆಂಟ್ ಇರಬಹುದು, ಅಲ್ಲಿ ಅವರಿಗೆ ಅನುಭವವನ್ನು ಕೊಟ್ಟಂತಾಗುತ್ತದೆ. ಆ ಒಂದು ದೃಷ್ಟಿಯಿಂದ ಆದರೂ ಸಹ ಈ ಪಕ್ಷದ ಆಧಾರದಮೇಲೆಚುನಾವಣೆ ನಡೆಸಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ನಾನು ಒಂದು ಮಾತನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ನಮ್ಮ ಅನುಭವ ಏನೆಂದರೆ, ಪಕ್ಷದ ರಾಜಕೀಯ ಪೈಪೋಟಿಯಿಂದ ಸಾಕಷ್ಟು ಅನಾಹುತ ಗ್ರಾಮಮಟ್ಟದಲ್ಲಿ ನಡೆದಿದೆ. ಇದು ಎಲ್ಲರ ಅನುಭವ. ಸೈದ್ಧಾಂತಿಕವಾಗಿ ಹೇಳುವುದಾದರೆ ಈ ಸೈದ್ಧಾಂತಿಕ ಪ್ರಶ್ನೆ ಹಳ್ಳಿಮಟ್ಟದಲ್ಲಿ ಅಭಿವೃದ್ಧಿ ಕೆಲಸ ಮಾಡುವುದರಲ್ಲಿ ಉಂಟಾಗುವುದಿಲ್ಲ. ಯಾವಪ್ರಕಾರ ಕಾನೂನು ಮಾಡಬೇಕೆಂಬುದು ಅದು ಪಾರ್ಲಿಮೆಂಟ್ ಮಟ್ಟದಲ್ಲಿ , ಅಥವಾ ವಿಧಾನಸಭಾ ಮಟ್ಟದಲ್ಲಿ ಬರಬಹುದು. ಆದರೆ ಹಳ್ಳಿಮಟ್ಟದಲ್ಲಿ ಇದು ಜನತಾ ರಸ್ತೆ, ಇದು ಬಿ.ಜೆ.ಪಿ ರಸ್ತೆ, ಇದು ಜನತಾ ಸ್ಕೂಲು, ಇದು ಬಿ.ಜೆ.ಪಿ. ಸ್ಕೂಲು ಅಂತ ಹೇಳಿ ಪ್ರತ್ಯೇಕಿಸಲಿಕ್ಕೆ ಅವಕಾಶ ಇಲ್ಲ. ಏಕೆಂದರೆ ಆ ಒಂದು ಕಾರ್ಯಕ್ರಮ ಎಲ್ಲರೂ ಒಪ್ಪಿರತಕ್ಕಂಥ ಕಾರ್ಯಕ್ರಮ. ನಾವು ಅಧಿಕಾರ ವಿಕೇಂದ್ರೀಕರಣ ಮಾಡುವಾಗ ಅದರ ಪ್ರಾಮಾಣಿಕವಾದಂಥ ಪರಿಣಾಮಕಾರಿಯಾದಂಥ, ಅನುಷ್ಠಾನವನಷ್ಟೇ ಅವರು ಮಾಡತಕ್ಕದ್ದು. ಅದಕಾರಣ ಐಡಿಯಾಲಾಜಿಕಲೀ ಅಲ್ಲಿ ಪಕ್ಷಗಳು

ಇರಲೇಬೇಕೂಂತ ಇಲ್ಲ. ಆ ದೃಷ್ಟಿಯಿಂದ ಪಕ್ಷಗಳು ಅನಾವಶ್ಯಕ. ಆ ಮಟ್ಟದಲ್ಲಿ ಎಂದು ಅನ್ನಿಸುತ್ತದೆ. ಮತ್ತು ಇದು ಒಂದು ಪ್ರಯೋಗ ಒಂದು ಶಾಂತಿ ಮತ್ತು ಸಮಾಧಾನ ಮತ್ತು ಒಳ್ಳೆಯ ಪರಿಸರವನ್ನು ಕಾಪಾಡಿಕೊಳ್ಳುವದಕ್ಕೆ ಸಾಧ್ಯವಾಗದಿದ್ದರೆ ಅದರ ಅಭಿವೃದ್ಧಿ ಕೆಲಸವನ್ನು ನಾವು ಮುಂದುವರೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕಾರಣ ಪಕ್ಷ ರಹಿತವಾದಂಥ ಚುನಾವಣೆಯನ್ನು ಗ್ರಾಮ ಮಟ್ಟದಲ್ಲಿ ಮಾಡುವಂಥಾದ್ದು. ಇದು ಒಂದು ಪ್ರಯೋಗ. ಇದು ಯಶಸ್ವಿಯಾದರೆ ಬೇರೆ ಮಟ್ಟದಲ್ಲಿ ಕೂಡ ಇದರ ಪ್ರಭಾವವನ್ನು ನಾವು ನೋಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನನಗೆ ಅನ್ನಿಸುತ್ತದೆ. ಪಂಚಾಯತ್‌ರಾಜ್ ಮಟ್ಟದಲ್ಲಿ ಸಾಧ್ಯವಾಗಬಹುದು. ಪಾರ್ಲಿಮೆಂಟ್, ಲೆಜಿಸ್ಲೇಚರ್ ಮಡ್ಡದಲ್ಲಿ ನಾನು ಒಪ್ಪುತ್ತೇನೆ. ಪಾರ್ಲಿಮೆಂಟರಿ ಸಿಸ್ಟಮ್‌ನಲ್ಲಿ ಪಕ್ಷಗಳು ಇರಬೇಕು.

ಉಪಾಧ್ಯಕ್ಷರು : ಈಗ ಸದನ ಮುಂದುವರೆದು ಮತ್ತೆ ಎರಡೂವರೆ ಗಂಟೆಗೆ ಸೇರುತ್ತದೆ.

(ಸದನವು 1 ಗಂಟೆ 33 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನ : ಮಧ್ಯಾಹ್ನ 2 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಲಾಯಿತು)

(ಸಭೆ 2 ಗಂಟೆ 50 ನಿಮಿಷಕ್ಕೆ ಸಮಾವೇಶಗೊಂಡಿತು(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷಪೀಠವನ್ನು ಅಲಂಕರಿಸಿದ್ದರು)

ಕರ್ನಾಟಕ ಪಂಚಾಯತ್ ರಾಜ್ ವಿದೇಯಕ -1993 (ಪರ್ಯಾಲೋಚನಾ ಪ್ರಸ್ತಾವ) ಮುಂದುವರೆದ ಚರ್ಚೆ

ಶ್ರೀ ಹೆಚ್. ಏಕಾಂತಯ್ಯ : ಸನ್ಮಾನ್ಯ ಉಪಾಧ್ಯಕ್ಷರೇ, ನಾನು ಈಗಾಗಲೇ ಪ್ರಸ್ತಾಪ ಮಾಡುತ್ತಿದ್ದ ಹಾಗೆ ಚುನಾವಣಾ ಕ್ಷೇತ್ರದ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿದ್ದೆ. ಮತ್ತು ಅದಕ್ಕೆ ಯಾವ ಒಂದು ಮಾರ್ಗದರ್ಶನ ಇಲ್ಲದಂತಹ ರೀತಿಯಲ್ಲಿ ಸರ್ಕಾರಿ ಅಧಿಕಾರಿಗಳಿಗೆ ಏನು ಅಧಿಕಾರ ಕೊಟ್ಟಿದ್ದೀರಿ, ಅದು ಸರಿಯಲ್ಲ, ಆ ಬಗ್ಗೆ ಸರಿಯಾದ ಮಾರ್ಗದರ್ಶನ ಕೊಡಬೇಕೆಂದು ಹೇಳಿದ್ದೇನೆ. ಈಗ ಮುಂದಿನ ಪ್ರಶ್ನೆ ಏನೆಂದರೆ, ಈ ಒಂದು ಮೀಸಲಾತಿ. ಮೀಸಲಾತಿಯನ್ನು ಈ ವಿಧೇಯಕದಲ್ಲಿ 2 ಹಂತದಲ್ಲಿ ತಂದಿದ್ದೀರಿ. ಮೊದಲನೇ ಹಂತ, ಸದಸ್ಯರ ಸ್ಥಾನಗಳನ್ನು ಮೀಸಲಾತಿಗೆ ಒಳ ಪಡಿಸುವುದು ಮತ್ತು 2ನೇ ಹಂತ ಏನು ಗ್ರಾಮಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಹುದ್ದೆಗಳು ಏನಿವೆ, ಅದಕ್ಕೆ ಮೀಸಲಾತಿಯನ್ನು ಕೊಡುವುದು. ಈ ಮೀಸಲಾತಿಯನ್ನು ಏನು ಮೊದಲ ಹಂತದಲ್ಲಿ ತಂದಿದ್ದೀರಿ, ಅದು ಸಹಾ ಸಂವಿಧಾನಕ್ಕೆ ಬಾಹಿರವಾದ ರೀತಿಯಲ್ಲಿ ಈ ವಿಧೇಯಕವನ್ನು ತಂದಿದ್ದಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ, 73ನೇ ಸಂವಿಧಾನ ತಿದ್ದುಪಡಿ ವಿಧೇಯಕ ಏನು ಇದೆ, ಈ ವಿಧೇಯಕದ 243ಡಿ ಅದನ್ನು ಮೊದಲು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. 243 ಡಿ - ಇದರಲ್ಲಿ ಈ ರೀತಿ ಹೇಳುತ್ತಿದ್ದಾರೆ.

Seats shall be reserved for the Scheduled Castes and the Scheduled Tribes in every Municipality and the number of seats so reserved shall bear, as nearly as may be

the same proportion to the total number of seats to be filled by direct election in that Muncipality as the Population of the Scheduled Castes in the Municipal area........,

ಅಧ್ಯಕ್ಷರೇ, ಈ ಮೀಸಲಾತಿ ಬಗ್ಗೆ ಹೇಳುವುದಾದರೆ ಅದು ಗ್ರಾಮಪಂಚಾಯಿತಿ ಇರಬಹುದು, ತಾಲ್ಲೂಕುಪಂಚಾಯಿತಿ ಇರಬಹುದು ಅಥವಾ ಜಿಲ್ಲಾಪರಿಷತ್ತು ಇರಬಹುದು, ಪ್ರತಿಯೊಂದರಲ್ಲೂ ಸಹಾ ಅವರ ಒಂದು ಪ್ರಾವಿಸೋವನ್ನು ಸೇರಿಸಿದ್ದಾರೆ. ಏನು ಸೇರಿಸಿದ್ದಾರೆ ಎಂದರೆ,

"....ಪರಂತು ಅಂತಹ ಮೀಸಲಾತಿಯು ಅನುಸೂಚಿತ ಜಾತಿಗಳ ಸಂದರ್ಭದಲ್ಲಿ ಗ್ರಾಮಪಂಚಾಯಿತಿ ಸದಸ್ಯರ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಶೇಕಡಾ 15 ಕ್ಕಿಂತಲೂ ಕಡಿಮೆ ಇರತಕ್ಕದ್ದಲ್ಲ. ಮತ್ತು ಅನುಸೂಚಿತ ಪಂಗಡಗಳ ಸಂದರ್ಭದಲ್ಲಿ ಶೇಕಡಾ 3 ಕ್ಕಿಂತಲೂ ಕಡಿಮೆಇರತಕದ್ದಲ್ಲ ಈವೊಂದು ಪ್ರೊವಿಜನ್ ಏನಿದೆ, ಇದನ್ನು ಜಿಲ್ಲಾಪರಿಷತ್‌ಗೆ ಸಂಬಂಧಪಟ್ಟಂತೆ ಮತ್ತು ತಾಲ್ಲೂಕು ಪಂಚಾಯತಿಗೆ ಸಂಬಂಧಪಟ್ಟಂತೆ ಈ ಸದಸ್ಯರ ಸ್ಥಾನಗಳನ್ನು ಮೀಸಲಾತಿ ಇಡುವಂತಹ ಸಂದರ್ಭದಲ್ಲೂ ಸಹ ಅವರು ಒಂದು ಪ್ರಾವಿಜನ್ ಹೇಳಿದ್ದಾರೆ. ಈವೊಂದು ಪ್ರಾವಿಜನ್ ಏನಿದೆ ಇದು ಎಷ್ಟರಮಟ್ಟಿಗೆ ಸಂವಿದಾನದ 243(ಡಿ) ನಾನೇನು ಓದಿದೆ ಅದಕ್ಕೆ ಅನುಗುಣವಾಗಿದೆಯೇ? ಸಂವಿಧಾನದ 243(ಡಿ) ಪ್ರಕರಣ ಏನಿದೆ not only that, nothing can be done against that provision......

ನಾನು ಒಂದು ಉದಾಹರಣೆಗೆ ಹೇಳುತ್ತೇನೆ. ನಾನು ಈಗ ನನ್ನ ಬಾಷಣವನ್ನು ಮುಂದುವರೆಸಬೇಕೇ ಅಥವಾ ಬೇಡವೇ ?

ಉಪಾಧ್ಯಕ್ಷರು : ಮಂತ್ರಿಗಳು ಇದ್ದಾರಲ್ಲ, ತಾವು ಹೇಳಿ.

ಶ್ರೀ ಹೆಚ್. ಏಕಾಂತಯ್ಯ : ನಾನು ಯಾರಿಗೆ ಹೇಳಲಿ? ಇಷ್ಟೊಂದು ಉಪೇಕ್ಷೆಯಿದ್ದರೆ ಅವರ ಅವಶ್ಯಕತೆಯಿಲ್ಲ. ನಾವು ಮಾತನಾಡುವುದೇ ಆಗಲಿ, ನೀವು ಸಭೆ ನಡೆಸುವುದಾಗಲೀ ಅದರ ಅವಶ್ಯಕತೆಯಿಲ್ಲ. It is an insult to us ಈಗ ನಾನೇನು ಮಾತನಾಡಿದೆಯೆಂದು ಅವರು ಹೇಳಲಿ. ಸನ್ಮಾನ್ಯ ಹಿರಿಯ ಸಚಿವರಿಂದ ನಾನು ಉತ್ತರ ಬಯಸುತ್ತೇನೆ. ನಾನು ಯಾವಾಗ ಒಂದು ಸಂವಿಧಾನ ಮಾಹಿರವೆಂದು ಹೇಳಿದರೂ ಸಹ ಅದನ್ನು ಕಿವಿಗೊಟ್ಟು ಕೇಳಿದಿದ್ದರೆ ನಾನೇನು ಹೇಳಬೇಕು? ಸೌಜನ್ಯವೆಂದು ಹೇಳಲೇ ಅಥವಾ ನೀವೇ ಹೇಳಿಬಿಡಿ. ಏಕೆಂದರೆ ನಾನು ಆ ಪದ ಹೇಳಿದರೆ ಪಾಪ ಅವರ ಮನಸಿಸ್ಗೆ ನೋವಾಗುತ್ತದೆ. ಮೀಸಲಾತಿಯ ನೆಪದಲ್ಲಿ ನೀವೇನು ಕೊಟ್ಟಿದ್ದೀರಿ, ನಾನು ಮೀಸಲಾತಿಗೆ ವಿರೋಧದಿಂದ ಈ ಮಾತನ್ನು ಹೇಳುತ್ತಿಲ್ಲ. ನಾನು ಯಾರ ಪದ ಇದ್ದೇನೆ ಎನ್ನುವ ಮಾತನ್ನು ಆಮೇಲೆ ಹೇಳುತ್ತೇನೆ. ಇವತ್ತು ಕಾನೂನಿನಲ್ಲಿ ಏನು ತಂದಿದ್ದೀರಿ, ಈ ಕಾನೂನಿನ ಅಡಿಯಲ್ಲಿ ನೀವು ಸಂವಿಧಾನ ಬಾಹಿರವಾದಂತಹ ಪ್ರಕರಣಗಳನ್ನು ಪ್ರಾವಿಜನ್ ಇಲ್ಲದೇ ಇರುವ ಮುಖಾಂತರ ಈವೊಂದು ಕಾನೂನನ್ನು ಜಾರಿಗೆ ತರಲಿಕ್ಕೆ ಸಾಧ್ಯವಿಲ್ಲದ ಪರಿಸ್ಥಿತಿಯನ್ನು ನಿರ್ಮಾಣ ಮಾಡುತ್ತಾ ಇದ್ದೀರಿ.

ಪುನ : ಓದುತ್ತೇನೆ : 243 (ಡಿ)

'Seats shall be reserved for the Scheduled Castes and the Scheduled Tribes in every Panchayat and the number of seats so reserved shall bear, as nearly as may be the same proportion to the total number of seats to be filled by direct election in that Panchayat as the Population of the Schedued Castes in the panchayat area or of the Scheduled Tribes in the Panchayat area bears to the total Population of that area...

ಅಂದರೆ ಅಲ್ಲಿರುವಂತಹ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನಸಂಖ್ಯೆ ಯಾವ ಪ್ರಮಾಣದಲ್ಲಿದೆ ಎಂಬುದನ್ನು ನೀವು ಗಮನದಲ್ಲಿಟ್ಟುಕೊಂಡು ಆ ಪ್ರಮಾಣದಲ್ಲಿ ಸ್ಥಾನಗಳನ್ನು ನಿಗದಿ ಮಾಡಬೇಕು. ಆದರೆ ತಾವು ಹೇಳುತ್ತಾ ಇದ್ದೀರಿ, ಕಡಿಮೆಯಿದ್ದರೂ ಪರವಾಗಿಲ್ಲ ಅಂತ ತಮ್ಮ ಪ್ರಾವಿಜನ್ ಏನು ಹೇಳುತ್ತದೆ ? ನಾನು ಈಗಾಗಲೇ ಹೇಳಿದಹಾಗೆ ಗ್ರಾಮಪಂಚಾಯಿತಿ ಇರಬಹುದು ತಾಲ್ಲೂಕ್ ಪಂಚಾಯಿತಿ ಇರಬಹುದು ಜಿಲ್ಲಾಪರಿಷತ್ ಇರಬಹುದು, ಈ ಎಲ್ಲ ಪ್ರಕರಣಗಳಲ್ಲೂ ಸಹ ಒಂದೇ ವಿದವಾದಂತಹ ಪ್ರಾವಿಜನ್ ಅನ್ನು ಸೇರಿಸಿದ್ದಾರೆ. ಪರಂತು ಅಂತಹ ಮೀಸಲಾತಿಯು ಅನುಸೂಚಿತ ಜಾತಿಗಳ ಸಂದರ್ಭದಲ್ಲಿ ಗ್ರಾಮಪಂಚಾಯಿತಿ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಶೇಕಡ 15 ಕ್ಕಿಂತ ಕಡಿಮೆ ಇರತಕ್ಕದ್ದಲ್ಲ. ಮತ್ತು ಅನುಸೂಚಿತ ಪಂಗಡದ ಸಂದರ್ಭದಲ್ಲಿ ಶೇಕಡ 3ಕ್ಕಿಂತ ಕಡಿಮೆ ಇರತಕ್ಕದ್ದಲ್ಲ. ಇಂತಹ ಒಂದು ವಿಧಿಗಳನ್ನು ಸೇರಿಸುವುದರ ಮುಖಾಂತರ ಸಂವಿಧಾನಬಾಹಿರ ವಾಗಿರತಕ್ಕ ವಿಧಿಗಳನ್ನು ಸೇರಿಸುವ ಮುಖಾಂತರ ಈ ಕಾನೂನನ್ನು ತರಲಿಕ್ಕೆ ನಿಜವಾದಂಥ ಆಸಕ್ತಿ ಈ ಸರ್ಕಾರಕ್ಕೆ ಇದೆಯೇ ಎನ್ನುವುದನ್ನು ಇವತ್ತಿನ ದಿವಸ ಪ್ರಶ್ನೆ ಮಾಡಬೇಕಾಗಿದೆ. ಅದೇರೀತಿಯಲ್ಲಿ ಎರಡನೆಯ ಹಂತದಲ್ಲಿ ಮೀಸಲಾತಿಯನ್ನು ತಂದಿದ್ದಾರೆ. ಇದರ ಅರ್ಥ ನಾನಾಗಲೀ ನಮ್ಮ ಪಕ್ಷವಾಗಲೀ ವಿರೋಧವಾಗಿದೆ ಎನ್ನುವ ಅರ್ಥವಲ್ಲ. ನೀವು ಕಾರ್ಯ ಸಾಧ್ಯವಾಗದ ರೀತಿಯಲ್ಲಿ ವ್ಯವಹಾರಿಕವಲ್ಲದ ರೀತಿಯಲ್ಲಿ ಇವತ್ತು ವಿರೋಧಾಭಾಸದಿಂದ ಕೂಡಿದಂತಹ ರೀತಿಯಲ್ಲಿ ಈವೊಂದು ಮೀಸಲಾತಿಯನ್ನು ತಾವು ತಿಂದಿದ್ದೀರಿ. ನಾನೊಂದು ಪ್ರಶ್ನೆಯನ್ನು ಮಾನ್ಯಮಂತ್ರಿಗಳಿಗೆ ಕೇಳುತ್ತೇನೆ. ಉದಾಹರಣೆಗೆ ಹೇಳುತ್ತೇನೆ. ಇವತ್ತಿನ ದಿವಸ ಜಿಲ್ಲಾಪರಿಷತ್‌ನ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನ ಇರಬಹುದು. ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸ್ಥಾನ ಇರಬಹುದು. ಅಥವಾ ಗ್ರಾಮಪಂಚಾಯಿತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸ್ಥಾನವನ್ನು ತಾವು ಮೀಸಲಾತಿಗೆ ಒಳಪಡಿಸಿದ್ದೀರಿ. ಒಂದೇ ಒಂದು ಉದಾಹರಣೆಯನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ. ಚಿತ್ರದುರ್ಗದಲ್ಲಿ ತಾವು ಅಲ್ಲಿರುವ ಜನಸಂಖ್ಯೆಯನ್ನು ಅಥವಾ ಲಾಟರಿ ಹಾಕುವುದರ ಮುಖಾಂತರ ಯಾವುದೋ ಒಂದರ ಮುಖಾಂತರ ಉದಾಹರಣೆಗೆ ತೆಗೆದುಕೊಳ್ಳೋಣ. ಅಲ್ಲಿರುವಂತಹ ಜಿಲ್ಲಾಪರಿಷತ್‌ನ ಅಧ್ಯಕ್ಷರ ಸ್ಥಾನವನ್ನು ಪರಿಶಿಷ್ಟಜಾತಿ ಅಥವಾ ಪಂಗಡದವರಿಗೆ ಮೀಸಲಾಗಿಡುತ್ತೇನೆ ಎನ್ನುವ ಭಾವನೆ ತಮ್ಮದಾಗಿದ್ದರೆ, ಅದನ್ನು ಮಾಡೋಣ. ಅಲ್ಲಿ 45 ಜನ ಸದಸ್ಯರನ್ನು ತಾವು ನೇಮಕ ಮಾಡುತ್ತೀರಿ. 45 ಸಾವಿರ ಜನಸಂಖ್ಯೆಗೆ ಒಬ್ಬರಂತೆ ಎಂದು ಇಟ್ಟುಕೊಳ್ಳೋಣ. 40

ಸಾವಿರ ಜನಸಂಖ್ಯೆಗೆ ಒಬ್ಬರಂತೆ ತಾವು 40 ಜನರನ್ನು ಆಯ್ಕೆ ಮಾಡದಮೇಲೆ ಸುಮಾರು 13 ಜನ ಪರಿಶಿಷ್ಟಜಾತಿ ಮತ್ತು ಪಂಗಡದವರಿಗೆ ಮೀಸಲಾತಿಯನ್ನು ಮಾಡಿದ್ದೀರಿ ಅದು ಸರಿಯೋ ತಪ್ಪೋ ಗೊತ್ತಿಲ್ಲ. ಆದರೆ ಎಲ್ಲರೂ ಸಹ ಕಾಂಗ್ರೆಸ್ಸಿನಿಂದ ಚುನಾಯಿತರಾಗಿರುತ್ತಾರೆಂದು ಭಾವಿಸಿಕೊಳ್ಳಿ. ಅದು ಸರಿಯೋ ತಪ್ಪೊ ಗೊತ್ತಿಲ್ಲ. ಇನ್ನು ಸುಮಾರು 27 ಜನ ಏನಿದ್ದಾರೆ ಅವರು ಕಾಂಗ್ರೆಸಿಗೆ ವಿರೋಧವಾಗಿರುವ ಜನ ಅಥವಾ ಯಾವುದೇ ರಾಜಕೀಯ ಪಕ್ಷಕ್ಕೆ ವಿರೋಧವಾಗಿರತಕ್ಕ ಜನ ಪಂಚಾಯಿತಿಯಲ್ಲಿ ಚುನಾಯಿತರಾಗುತ್ತಾರೆ, ಆಗ ಅಧ್ಯಕ್ಷರು ಯಾರಾಗಬೇಕು ಸ್ವಾಮಿ? ಯಾವ ಒಂದು ಜಿಲ್ಲಾ ಪಂಚಾಯತಿಯಲ್ಲಿ ಅವರಿಗೆ ಬೆಂಬಲ ಇರುವುದಿಲ್ಲ, ಅಂಥವರು ಪೂರಾ ಮಂಡಲಕ್ಕೆ ಜನ ಒಂದು ಪಕ್ಷದಿಂದ ಆಯ್ಕೆಯಾಗಿ, ಅದಕ್ಕೆ ವಿರೋಧವಾದಂಥ ಜನ ಮತ್ತೊಂದು ಪಕ್ಷದಿಂದ ಆಯ್ಕೆ, ಯಾದಾಗ ತಾವು ಅಂತಹ ಆಯ್ಕೆಯನ್ನು ಹೇಗೆ ಮಾಡುತ್ತೀರಿ? ಇಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದಾಗ ತಾವು ಏನು ಮಾಡುತ್ತೀರಿ? ಇದಕ್ಕೆ ನನಗೆ ಉತ್ತರ ಬೇಕು. ಇದೆಲ್ಲವೂ ಸಹ ವ್ಯವಹಾರಿಕವಲ್ಲದ ರೀತಿಯಲ್ಲಿ ಆಗಿರುವಂಥಾದ್ದು. ಅದಕ್ಕೆ ಏನು ಮಾಡಬೇಕು ?

ಶ್ರೀ ಎಂ.ವೈ. ಗೋರ್ಪಡೆ : ಆ ಪರಿಸ್ಥಿತಿ ಉದ್ಭವವಾಗಲಿಕ್ಕಿಲ್ಲ. ಅದು ಥಿಯರಾಟಿಕಲ್ ಇದೆ. ಏಕೆಂದರೆ ಈ ಎಸ್‌ಸಿಎಸ್‌ಟಿ ಜನರಿಗೆ ಈಗ ಇರತಕ್ಕಂಥ ಕಾನೂನಿನಲ್ಲಿ ಕೂಡ 18 ಪರ್ಸೆಂಟ್ ಮಿನಿಮಮ್ ಅವರ ಪಾಪ್ಯುಲೇಶನ್‌ಗೆ ಪ್ರಪೋಶನೇಟ್ ಆಗಿ ಎರಡು ವಿಚಾರಗಳನ್ನು ಸೇರಿಸಿದ್ದೇವೆ. ಅದನ್ನು ನಾವು ವಜಾ ಮಾಡುತ್ತಿಲ್ಲ. ಅದನ್ನು ಉಳಿಸಿ ಕೊಳ್ಳುತ್ತೇವೆ. ಈಗ ಇರತಕ್ಕಂಥ ಕಾನೂನಿನಲ್ಲಿ ಅದು ಉದ್ಭವವಾಗಿಲ್ಲ. ಹೊಸದಾಗಿ ಪರಿಸ್ಥಿತಿ ಏಕೆ ಉದ್ಭವವಾಗಬೇಕು ? ಎಂಬುದು ನನ್ನ ಪ್ರಶ್ನೆ.

ಶ್ರೀ ಎಚ್. ಏಕಾಂತಯ್ಯ : ಪರಿಸ್ಥಿತಿ ಉದ್ಭವವಾಗುವುದಿಲ್ಲ ಎಂದರೆ ಅದನ್ನು ಒಪ್ಪುವುದಕ್ಕೆ ನಾನು ಸಿದ್ಧನಿಲ್ಲ. ನಾನು ಒಂದು ಉದಾಹರಣೆಗೆ ಹೇಳಿದೆ. ಮುಂದೆ ಹೇಗೆ ಆಗುತ್ತದೆ ಎಂದು ನನಗೆ ಗೊತ್ತಿಲ್ಲ. ನಿಮಗೂ ಗೊತ್ತಿಲ್ಲ. ಉದ್ಭವವಾಗಿಲ್ಲ ಎಂಬುದು ನಮಗೆ ಗೊತ್ತಿದೆ.

ಶ್ರೀ ಎಂ. ವೈ. ಘೋರ್ಪಡೆ : ಎಸ್‌ಸಿ : ಎಸ್‌ಟಿಗೆ 18 ಪರ್ಸೆಂಟ ಮಿನಿಮಮ್ ಮತ್ತು ಪ್ರಪೋಶನೇಟ್ ರೆಪ್ರೆಸಂಟೇಶನ್ ಬಗ್ಗೆ ತಾವು ಏನು ಹೇಳುತ್ತಿದ್ದೀರಿ, ಅದನ್ನು ಈಗಿನ ಕಾನೂನಿನಲ್ಲಿ ನಾನು ಅನುಭವಿಸಿಲ್ಲ. ಈಗ ಹೊಸದಾಗಿ ಥಿಯರಾಟಿಕಲ್ ಆಗಿ ಹೇಳುತ್ತಿದ್ದೀರಿ. ಹೊಸದಾಗಿ ಪ್ರಶ್ನೆ ಪರೀಕ್ಷೆ ಬರಬೇಕು? ಎಲ್ಲ ಕಡೆ ಕೆಲವರಾದರೂ ಇದ್ದೇ ಇರುತ್ತಾರೆ. 18 ಪರ್ಸೆಂಟ್ ಇರಬಹುದು, ಅದಕ್ಕಿಂತ ಸ್ವಲ್ಪ ಕಡಿಮೆ ಇರಬಹುದು. ಈಗ ಎಸ್‌ಸಿ ಎಸ್‌ಟಿ ಇಲ್ಲದೇ ಇರತಕ್ಕಂಥ ಒಂದು ಭಾಗ ಕರ್ನಾಟಕದಲ್ಲಿ ಇದೆ ಅಂತ ನಾನು ತಿಳಿದುಕೊಂಡಿಲ್ಲ.

ಶ್ರೀ ಎಚ್.ಏಕಾಂತಯ್ಯ : ಮೊದಲನೇ ಪ್ರಶ್ನೆಗೆ ತಾವು ಉತ್ತರ ಹೇಳಿದ್ದೀರಿ. 18 ಕ್ಕಿಂದ ಕಡಿಮೆ ಇದ್ದಾಗ ಆ ಒಂದು ವಿಷಯ ಏನಿದೆ, ಅನುಪಾತಕ್ಕೆ ಸಲುವಾಗಿ ತಾವು ರಿಸರ್ವೇಶನ್ ಮಾಡಬೇಕು. ಮಾಡದೇ ಇದ್ದರೆ ನನ್ನ ಭಯ ಏನೆಂದರೆ, ಅದು ಸಂವಿದಾನಬಾಹಿರವಾಗುತ್ತದೆ. ಏತಕ್ಕೆಂದರೆ 243 ಡಿ - "it should be, as far as possible, tested"..

ಶ್ರೀ ಎಂ. ವೈ. ಘೋರ್ಪಡೆ : ಇದು ಡೈರೆಕ್ಟ್ ಮತ್ತು ಇಂಡೈರೆಕ್ಟ್ ಎಲೆಕ್ಷನ್ ಅಂತ ಇದು ದೊಡ್ಡ ಪ್ರಶ್ನೆ. ಈಗ ನೀವು ಹೇಳುತ್ತಿದ್ದೀರಿ ಡೈರೆಕ್ಟ್ ಎಲೆಕ್ಷನ್ ಮಾಡಿ ಅಂತ ಆದರೆ ಚಂದ್ರೇಗೌಡರು ಹೇಳುತ್ತಿದ್ದರು ಡೈರೆಕ್ಟ್ ಎಲಕ್ಷನ್ ಸರಿಹೋಗುವುದಿಲ್ಲ, ಈಗ ಇರತಕ್ಕಂಥ ಇನ್‌ಡೈರೆಕ್ಟ್ ಎಲೆಕ್ಷನ್ ವ್ಯವಸ್ದೆಯನ್ನೇ ಮುಂದುವರಿಸಿ ಅಂತ ಹೇಳಿ. ಆದಕಾರಣ ಇದರ ಬಗ್ಗೆ ಎರಡು ಅಭಿಪ್ರಾಯ ಇದೆ. ಅದಕ್ಕೆ, ಮಾಸಲಾತಿಗೆ ಮಿನಿಮಮ್ ರಿಸರ್ವೇಶನ್‌ಗೆ ಸಂಬಂಧ ಕಲ್ಪಿಸಬೇಕಾದದ್ದು ಇಲ್ಲ.

ಶ್ರೀ ಎಚ್. ಏಕಾಂತಯ್ಯ : ಸ್ವಲ್ಪದಯವಿಟ್ಟು ಕೇಳಿ.

ಉಪಾಧ್ಯಕ್ಷರು : ತಾವು ರಿಪ್ಲೈ ಕೊಡುವಾಗ ಎಲ್ಲಾದಕ್ಕೂ ಒಟ್ಟಿಗೆ ಕೊಡಿ.ಇನ್ನು ಬಹಳ ಜನ ಇದ್ದಾರೆ.

ಶ್ರೀ ಎಚ್.ಏಕಾಂತಯ್ಯ : ಬಹಳ ಜನ ಇದ್ದಾರೆ ಎಂದರೆ ಅಧಿವೇಶನವನ್ನು ಐದು ದಿವಸ ಮುಂದುವರೆಸಿ. ನಮ್ಮದೇನೂ ತಕರಾರು ಇಲ್ಲ. ಇಂತಹ ಬಿಲ್ ಬಗ್ಗೆ ಚರ್ಚೆ ಮಾಡಿದೆ ಪಾಸ್ ಮಾಡುತ್ತೀರಾ ? ಮೊದಲನೇ ಪ್ರಶ್ನೆಗೆ ಉತ್ತರ ಕೊಟ್ಟರು. ನಾನು ಒಂದು ಸಲಹೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ನನ್ನದು ತಪ್ಪಾದರೆ ಹೇಳಿ. ನನ್ನದೇನೂ ತಕರಾರು ಇಲ್ಲ. ಏನು ನಮ್ಮ ಮುಂದೆ ರಿಸರ್ವೇಶನ್ 243 ಡಿ ನಲ್ಲಿ ಏನು ಹೇಳಿದ್ದಾರೆ ಅದನ್ನು ಪುನಃ ಹೇಳುತ್ತೇನೆ ಇದು ನಿರ್ಧಿಷ್ಟವಾದ ಪ್ರಮಾಣದಲ್ಲಿ ಇರಬೇಕೆಂದು ಸಂವಿಧಾನದಲ್ಲಿದೆ. ಅದಕ್ಕೆ ವಿರುದ್ಧವಾದ ರೀತಿಯಲ್ಲಿ ಮಾಸಲಾತಿ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ತಮಗೆ ಹೇಳಿದೆ. ಅದಕ್ಕಿಂತ ಒಂದು ಹೆಜ್ಜೆ ಮುಂದೆ ನಾನು ಹೋದೆ. ತಾವು ಮಾಸಲಾತಿಯನ್ನು ಪದಾಧಿಕಾರಿಗಳ ಸ್ಥಾನದಲ್ಲಿ ಮಾಡಿದ್ದೀರಿ. ನಾನು ಒಂದು ಉದಾಹರಣೆಯನ್ನು ಕೊಟ್ಟೆ. ಚಿತ್ರದುರ್ಗದಲ್ಲಿ 40 ಜನ ಸದಸ್ಯರನ್ನು ನೀವು ಜಿಲ್ಲಾ ಪರಿಷತ್ತಿಗೆ ಆಯ್ಕೆ ಮಾಡಬೇಕಾಗಿದೆ. ಸರಿಯೋ ತಪ್ಪೋ, 15 ಜನರಿಗೆ ಅಲ್ಲಿ ಮಾಸಲಾತಿಯಲ್ಲಿ ರಿಸರ್ವೇಶನ್ ಮಾಡಿರುತ್ತಾರೆ. ಎಸ್‌ಸಿ : ಎಸ್‌ಟಿ ಇರಬಹುದು, ಮಹಿಳೆಯರು ಇರಬಹುದು, ಮತ್ತೊಂದು ಇರಬಹುದು. ಆ 15 ಜನ ಸಹ ಒಂದೇ ಪಕ್ಷಕ್ಕೆ ಸೇರಿದ ಜನ ಆಯ್ಕೆಯಾಗುತ್ತಾರೆ ಎಂದು ಭಾವಿಸಿಕೊಳ್ಳಿ. ಅಂಥಾದ್ದು ಆದರೆ ಅಶ್ಚರ್ಯ ಪಡಬೇಡಿ. ಹಾಗೆ ಭಾವಿಸಿಕೊಂಡಂಥ ಸಂದರ್ಭದಲ್ಲಿ ಇದಕ್ಕೆ ವಿರುದ್ದವಾಗಿರತಕ್ಕಂಥ ಜನ ಇನ್ನೂ 25 ಜನ ಇರುತ್ತಾರೆ. ಆ 25 ಜನರ ಆಪ್‌ಶನ್ ಏನು ? ನಮ್ಮಲ್ಲಿ ಯಾರು ಉಳಿದವರು ಇದ್ಧಾರೆ, ಅವರು ನಮ್ಮಿಂದ ಆಯ್ಕೆಯಾಗಿರುವುದಿಲ್ಲ. ಅಂತಹ ಸಂದರ್ಭದಲ್ಲಿ ನಾವು ಏನು ಮಾಡಬೀಕು ಅಥವಾ ನಮ್ಮಪಕ್ಷದವರು ಏನು ಮಾಡಬೇಕು? ಇದಕ್ಕೆ ಪರಿಹಾರ ಏನು ಎಂದು ನಾನು ನಿಮ್ಮ ಮುಂದೆ ಇಟ್ಟೆ. ಅಂತಹ ಸಂದರ್ಭದಲ್ಲ ವಿರೋಧಾಭಾಸ ಆಗುತ್ತದೆ. ನಾವು ಜನತಂತ್ರ ವ್ಯವಸ್ಥೆಯಲ್ಲಿ ಈ ಮನೆಯಲ್ಲಾಗಲೀ ಅಥವಾ ಮತ್ತೊಂದು ಮನೆಯಲ್ಲಾಗಲೀ,ಬಹುಮತದಿಂದ ಜನತಂತ್ರ ಸಂಸ್ಥೆಗಳನ್ನು ನಡೆಸಬೇಕೆಂದು ತೀರ್ಮಾನ ಮಾಡಿದಾಗ ಯಾರು ಮಾಸಲಾತಿಯಲ್ಲಿ ಆಯ್ಕೆಯಾಗಿದ್ದಾರೆ, ಅದಕ್ಕೆ ವಿರುದ್ಧವಾಗಿ ಇದ್ದರೆ ನೀವು ಆಗ ಅಧ್ಯಕ್ಷರನ್ನು ಹೇಗೆ ಅಯ್ಕೆ ಮಾಡುವುದಕ್ಕೆ ಸಾಧ್ಯವಿದೆ ? ಇದಕ್ಕೆ ಪರಿಹಾರ ಇದರಲ್ಲಿ ಇಲ್ಲ. ಇಂತಹ ವಿರೋಧಾಭಾಸಗಳಿನಿದೆ, ಇದರ ಬಗ್ಗೆ ತಾವು ಆಲೋಚನೆ ಮಾಡಬೇಕು. ನಿಜ, ಇಂತಹ

ವಿರೋಧಾಭಾಸಗಳಿಗೆ ಕಾರಣವೇನೆಂದರೆ, ಸಂವಿಧಾನದಲ್ಲೂ ಸಹ ಅಂತಹ ವಿರೋಧಾಭಾಸಗಳು ಇರುವಂಥ ನಿಧಿ ಸೇರಿದೆ. ಅದನ್ನು ಒಪ್ಪಿಕೊಳ್ಳುತ್ತೇನೆ. ಅಂದರೆ ವ್ಯವಹಾರಿಕವಾಗಿ ಇಲ್ಲ ಎನ್ನುವುದರ ಬಗ್ಗೆ ನಾನು ತಮ್ಮ ಗಮನ ಸೆಳೆಧಿದ್ದೇನೆ, ಇದರಿಂದ ಒಂದು ವಿರೋಧಭಾಸ ನಮ್ಮಲ್ಲಿಉಂಟಾಗುತ್ತದೆ. ಕೆಲಸ ಮಾಡುವಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದಕ್ಕೆ ಒಂದು ಪರಿಹಾರವನ್ನು ತಾವುಕಂಡುಹಿಡಿಯಬೇಕು. ಚಂದ್ರೇಗೌಡರು ಒಂದು ಮಾತು ಹೇಳಿದರು, ನಾನು ಹೇಳಲಿಲ್ಲ. ನಾನು ನೇರ ಚುನಾವಣೆ ಮಾಡಬೇಕೆಂಬ ಮಾತನ್ನು ಈಗಲೂ ಹೇಳಿಲ್ಲ, ಮುಂದೆಯೂ ಹೇಳುವುದಿಲ್ಲ. ಏತಕ್ಕೆಂದರೆ, ಇಂತಹ ವಿರೋಧಾಭಾಸವನ್ನು ತಡೆಯವುದಕ್ಕೋಸ್ಕರ, ಅಕಸ್ಮಾತ್ ನೀವು ನೇರ ಚುನಾವಣೆ ಬಗ್ಗೆ ಗಮನ ಹರಿಸುವುದಾದರೆ, ಅದು ನಿಮಗೆ ಬಿಟ್ಟಿ ವಿಚಾರ ನಾನು ವೈಯಕ್ತಿಕವಾಗಿ, ನಾನಾಗಲೀ ಅಥವಾ ನಮ್ಮ ಪಕ್ಷವಾಗಲೀ, ಇದು ಅಪ್ರತ್ಯಕವಾದಂಥ ಚುನಾವಣೆಗಳಾಗಬೇಕೆಂಬ ಮಾತನ್ನು ಹೇಳುತ್ತದೆ ಮತ್ತು ಅದರಲ್ಲಿ ನಂಬಿಕೆ ಇದೆ. ಏತಕ್ಕೆಂದರೆ, ಜನಸಾಮಾನ್ಯರು ಚುನಾವಣೆಯಲ್ಲಿ ಗೆದ್ದುಬರುವುದಕ್ಕೆ ಸಾಧ್ಯವಾಗುತ್ತದೆ, ಮತ್ತು ಗೆದ್ದಂಥ ವ್ಯಕ್ತಿ ಯಾರು ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ, ಅವರಿಗೆ ಜವಾಬ್ದಾರಿ ಇಡುವುದಕ್ಕೆ ಸಾಧ್ಯವಾಗುತ್ತದೆ.ಇವತ್ತಿನದಿವಸ ಏನಾದರೂ ನೀವು ನೇರ ಚುನಾವಣೆ ಮಾಡಿದರೆ, ಅದರಲ್ಲಿಯೂ ಅನೇಕ ತೊಂದರೆಗಳಿವೆ. ಏನು ಈ ವಿರೊಧಾಭಾಸವನ್ನು ಹೇಳಿದೆ, ಅದೇರೀತಿಯಾಗಿ ನೇರವಾದಂಥ ಚುನಾವಣೆಯನ್ನು ಮಾಡಿದಾಗ, ಅವರನ್ನು ತೆಗೆಯುವಂಥ ಅಧಿಕಾರ ಯಾರಿಗಿದೆ ? ಅವರನ್ನು ತೆಗೆಯುವಂಥ ಅಧಿಕಾರ ಯಾರು ಆಯ್ಕೆ ಮಾಡಿದ್ದಾರೆ, ಆ ಜನರಿಗೆ ಇರಬೇಕೇ ಹೊರತಾಗಿ ಬೇರೆ ಸದಸ್ಯರಿಗೆ ಇರುವುದಕ್ಕೆ ಸಾಧ್ಯ ಇಲ್ಲ. ಯಾರಿಂದ ನಾವು ಚುನಾಯಿತರಾಗುತ್ತೇವೆ. ಆ ಜನರೇ ನಮ್ಮನ್ನು ಅಧಿಕಾರ ಸ್ಥಾನದಿಂದ ಇಳಿಸಬೇಕೇ ಹೊರತಾಗಿ, ಬೇರೆಯವರು ಅವರ ಪರವಾಗಿರುವುದಕ್ಕೆ ಸಾಧ್ಯವಿಲ್ಲ. ಇಂತಹ ಒಂದು ವಿರೋಧಾಭಾಸ ಈ ಮಸೂದೆಯಲ್ಲಿದೆ ಎಂಬ ಮಾತನ್ನುನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ ಅದೇ ರೀತಿಯಾಗಿ ನೇರ ಚುನಾವಣೆ ಮಾಡಿದರೆ ಏನಾಗುತ್ತದೆಂದರೆ ಮಂಡಲ್ ಪಂಚಾಯ್ತಿ ಮತ್ತು ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ನೋಡಿದ್ದೇವೆ, ಏನಾದರೂ ನೇರ ಚುನಾವಣೆ ಮಾಡಿದರೆ, ಜನರನ್ನು ಹೊತ್ತುಕೊಂಡು ಹೋಗುತ್ತಾರೆ ಎಂಬ ಮಾತನ್ನು ಮಾನ್ಯ ಸದಸ್ಯರೊಬ್ಬರು ಹೇಳುತ್ತಿದ್ದರು. ಅವರು ಅಲ್ಲಿಗೆ ಏಕೆ ಸೀಮಿತವಾದರೋ ಗೊತ್ತಿಲ್ಲ. ಅನೇಕ ಸಂದರ್ಭಗಳಲ್ಲಿ ಈ ರಾಷ್ಟ್ರದಲ್ಲಿರತಕ್ಕ ಶಾಸಕರೂ ಸಹ ಮಾರಾಟದ ವಸ್ತುಗಳಾಗಿದ್ದಾರೆ. ಅಂತಹ ಉದಾಹರಣೆಗಳು ನಮ್ಮಲ್ಲಿ ಇಲ್ಲವೆ? ಅದ್ದರಿಂದ ಈ ಮಾತು ಕೇವಲ ಗ್ರಾಮಪಂಚಾಯ್ತಿಯಲ್ಲಿ ಆಯ್ಕೆಯಾದಂಥ ಸದಸ್ಯರಿಗೆ ಅಥವಾ ತಾಲ್ಲೂಕು ಪಂಚಾಯ್ತಿಯ, ಜಿಲ್ಲಾಪರಿಷತ್ತಿಗೆ ಆಯ್ಕೆಯಾದಂಥ ಸದಸ್ಯರಿಗೆ ಹೇಳುವುದಾದರೆ, ಈ ವ್ಯವಸ್ಥೆ ಮಾಡಿದ್ದು ಒಂದು ರೀತಿ ಅಪಮಾನ. ಇದಕ್ಕೆ ಬದಲಾಗಿ, ಈ ರೀತಿ ಚುನಾಯಿತರಾದಂಥ ಸದಸ್ಯರು ಮಾರಾಟವಾಗದಂಥ ವಸ್ತುವಾಗಿ ನಾವು ಮಾಡುವುದಕ್ಕೆ ಪ್ರಯತ್ನ ಮಾಡಬೇಕಾಗಿದೆ. ಭೌತಿಕವಾಗಿ ಮತ್ತು ತಾತ್ವಿಕವಾಗಿ ಸೈದ್ಧಾಂತಿಕವಾಗಿ ನಾವು ಅವರನ್ನು ತಯಾರು ಮಾಡುವುದರ ಮುಖಾಂತರ, ಈ ಮಾರಾಟದ ವಸ್ತುವಾಗುವುದನ್ನು ತಡೆಯಬಹುದೇ ಹೊರತಾಗಿ, ಇವತ್ತಿನದಿವಸ ಬೇರೆ ವಿಧಾನಗಳು ಅನುಸರಿಸುವುದರಿಂದ, ಇದು ಸಾಧ್ಯವಿಲ್ಲ ಎನ್ನುವ ಮಾತನ್ನು ಅನೇಕ ಸಂದರ್ಭದಲ್ಲಿ, ಅನೇಕ ಜನ ಹೇಳಿದರು. ಇನ್ನು ಈ ಬ್ರಷ್ಟಾಚಾರದ ಬಗ್ಗೆ ತಾವೂ ಒಂದು ಮಾತನ್ನು ಹೇಳಿದಿರಿ. ನನಗೆ ಬಹಳ ನೋವಾಯಿತು. ಏನು ಹೇಳಿದಿರಿ, I am not going to interfere in the administration. I am not for decentralisation

of corruption.ಅಂತ

ಈ ಭ್ರಷ್ಟಾಚಾರ ಏನಿದೆ, ಇದು ಡೀಸೆಂಟ್ರಲೈಸ್ ಆಗಬಾರದು ಎಂಬ ಮಾತನ್ನು ತಾವು ಹೇಳಿದಿರಿ. ನಾನು ಅದನ್ನು ಒಪ್ಪುತ್ತೇನೆ.does it mean it should be centralised ? ಇದು ಭ್ರಷ್ಟಾಚಾರ ಕೇವಲ ವಿಧಾನ ಸೌಧಕ್ಕೆ ಅಥವಾ ಪಾರ್ಲಿಮೆಂಟಿಗೆ ಸೀಮಿತವಾಗಬೇಕೆಂದು ತಮ್ಮ ಆಸೆಯೇ, ಅಲ್ಲ, ಇದನ್ನು ನಾನು ಒಪ್ಪುವುದಿಲ್ಲ. ನಾನು ಹೇಳುತ್ತೇನೆ. ನಿಮ್ಮ ಅನಿಸಿಕೆ ಅದಲ್ಲ. ನೀವು ಯಾವ ಅರ್ಥದಲ್ಲಿ ಹೇಳಿದ್ದೀರಿ ಎಂದರೆ, ಈಗಿರುವಂಥ ಭ್ರಷ್ಟಾಚಾರ ಕೆಳಹಂತದವರೆಗೆ ಇಳಿಯಬಾರದು ಎಂಬ ಮಾತನ್ನು ಹೇಳಿದಿರಿ. ಅದು ಯಾವಾಗ ಸಾಧ್ಯ? ಮೇಲಿನಿಂದ ಭ್ರಷ್ಟಾಚಾರ ಇಲ್ಲದೇ ಇದ್ದರೆ, ಮತ್ತು ಕೆಳಗಿನವರು ಭ್ರಷ್ಟಾಚಾರ ಮಾಡಿದರೆ, ಭ್ರಷ್ಟಾಚಾರಕ್ಕೆ ಕಾರಣಕರ್ತರಾದವರ ಮೇಲೆ, ಉಗ್ರವಾದಂಥ, ಕಠಿಣವಾದಂಥ ಕ್ರಮವನ್ನು ನೀವು ತೆಗೆದುಕೊಳ್ಳುವುದರ ಮುಖಾಂತರ ಅದನ್ನು ಮಾಡಲಿಲ್ಲ. ತಾವು ಹೇಳಿದಿರಿ, ತಮ್ಮ ಪಕ್ಷದ ಅನೇಕ ಸದಸ್ಯರು ಹೇಳಿದರು.ನನಗೆ ಬಹಳ ನೋವಾಯಿತು. ಏನು ಹೇಳಿದರು. ಈ ಮಂಡಲ್ ಪಂಚಾಯ್ತಿ ಮತ್ತು ಜಿಲ್ಲಾಪರಿಷತ್ತುಗಳಲ್ಲಿ ವಿಪರೀತ ಲಂಚವಾಗಿಬಿಟ್ಟಿತು, ಮಾನ್ಯ ವೆಂಕಟಪ್ಪನವರು ಹೇಳಿದರು, ಯಾರೋ ಮೂರುವರೆ ಲಕ್ಷ ತೆಗೆದುಕೊಂಡು ರಾಜೀನಾಮೆ ಕೊಟ್ಟ ಎಂದು.

ಶ್ರೀ ಎಂ. ವೈ.ಘೋರ್ಪಡೆ : ಅಧ್ಯಕ್ಷರೆ, it doesn't mean ಮೇಲಿಂದ ಕೆಳಗೆ devolution of corruption-ಆಗಬಾರದು ಎಂದು ತಾವು ಅನ್ನುವುದಾದರೆ, ಅದಕ್ಕೆ ನನ್ನ ಸಹಮತ ಇದೆ.

ಶ್ರೀ ಹೆಚ್. ಏಕಾಂತಯ್ಯ : ನಾನು ಇನ್ನು ಒಂದು ಹೆಜ್ಜೆ ಮುಂದೆ ಹೋಗುತ್ತೇನೆ. ತಮಗೆ ಇರುವಂಥ ಕರಪ್ಷನ್ ಮತ್ತು ಏನು ಲೋಪದೋಷದಿಂದ ಕೂಡಿದಂಥ ತೀರ್ಮಾನ ತೆಗೆದುಕೊಂಡಂಥ ಜನ ರಾಜಕಾರಣಿಗಳು ಆಗಿ ಇರಬಹುದು. ಅವರ ಮೇಲೆ ಕ್ರಮ ತೆಗೆದುಕೊಳ್ಳುವಂಥ ಪ್ರವೃತ್ತಿ ಸರ್ಕಾರಕ್ಕೆ ಇರಬೇಕು. ನಾನು ನಿಮ್ಮನ್ನು ಕೇಳುತ್ತೇನೆ. ಏನು, ಈ ಭ್ರಷ್ಟಾಚಾರ ಮಂಡಲ್‌ಪಂಚಾಯ್ತಿಗಳಲ್ಲಿ ಆಯಿತು ಎಂದು ಹೇಳಿದಿರಲ್ಲ, ತಾವೇನು ಮಾಡುತ್ತಿದ್ದೀರಿ, ನಾವೇನು ಮಾಡುತ್ತಿದ್ದೆವು. ನಾವೆಲ್ಲರೂ ಸಹ ಕಣ್ಣುಮುಚ್ಚಿಕೊಂಡು, ಇದನ್ನು ನೋಡುತ್ತೇವೆ. ಏಕೆ ನೋಡುತ್ತಿದ್ದೇವೆ. ಅವರು ಭ್ರಷ್ಟಾಚಾರ ಎಂದು ಹೇಳಿದರೆ, ಅವರು ನನಗೆ ಎಲ್ಲಿ ಹೇಳುತ್ತಾರೋ, ಏನು ನೀನು ತಿಂದಿಲ್ಲವೇ ಎಂದು ನನಗೆ ಎಲ್ಲಿ ಹೇಳುತ್ತಾನೋ ಎಂದು ಹೇಳಿ, ಅನೇಕ ಸಂದರ್ಭಗಳಲ್ಲಿ...

ಶ್ರೀ ಎಂ.ವೈ.ಘೋರ್ಪಡೆ : ನೀವೇ ಜವಾಬ್ದಾರರು ಎಂದು ನಾನು ಹೇಳ ಲಿಲ್ಲ.ನಾವೆಲ್ಲರೂ ಜವಾಬ್ದಾರರು.

ಶ್ರೀ ಜಿ.ಎಸ್.ಶಿವನಂಜಪ್ಪ : ಹಿಂದಿನ ಆಕ್ಟ್‌ನಲ್ಲಿ ಅಂದರೆ ನೀವು ಪಾಸ್ ಮಾಡಿದ ಆಕ್ಟ್‌ನಲ್ಲಿ ಎಲ್ಲದರೂ, ಯಾರ ಮೇಲಾದರೂ ವಿಚಾರಣೆ ಮಾಡತಕ್ಕಂಥ ಅಕೌಂಟಬಿಲಿಟಿ ಇದೆಯಾ ? ಅದಿಲ್ಲದೆ, ನೀವು ಏನು ಆಕ್ಷನ್ ತೆಗೆದುಕೊಂಡಿರಿ ಎಂದು ಹೇಳಿದರೆ ಅದು ಹೇಗೆ ಸರಿಯಾಗುತ್ತದೆ.

ಶ್ರೀ ಎಚ್. ಏಕಾಂತಯ್ಯ : ನಾನು ಹಿಂದಿನ ಆಕ್ಟ್‌ನ್ನುತಂದಿದ್ದೇನೆ. ಮಾನ್ಯ ಶಿವನಂಜಪ್ಪನವರು ಹುಡುಕಿ ನೋಡಲಿ, ಇಲ್ಲದಿದ್ದರೆ ನಾನು ಆಮೇಲೆ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಸುಮ್ಮನೆ ಹೇಳಿದರೆ ಉಪಯೋಗ ಇಲ್ಲ. ನೀವು ಹುಡುಕಿ ನಾನು ಆಮೇಲೆ ಹೇಳುತ್ತೇನೆ. ನೊಡದೆ ಎಲ್ಲಿದೆ ಅಂತ ಕೇಳಿದರೆ ಇದು ಸರಿಯಲ್ಲ, ನಾವು ಇಲ್ಲಿ ಪಾಟಿ ಸವಾಲು ಮಾಡಲಿಕ್ಕೆ ಬಂದಿಲ್ಲ. ಪಾಟಿ ಸವಾಲು ಮಾಡುವುದಕ್ಕೆ ಬೇರೆ ಜಾಗ ಇದೆ ನಾವಿಬ್ಬರೂ ಅಲ್ಲಿದೆ ಹೋಗೋಣ.

ಶ್ರೀ ಜಿ .ಎಸ್ ಶಿವನಂಜಪ್ಪ : ಹಾಗಾದರೆ ನೀವು ಬರೀ ಬಾಷಣ ಮಾಡುವುದನ್ನು ನಾವು ಕೇಳಬೇಕು ? ಹಿಂದಿನ ಆಕ್ಟ್‌ನಲ್ಲಿ ಎಲ್ಲಿತ್ತು ಎನ್ನುವುದನ್ನು ಹೇಳ್ರಿ ಹೋಗಲಿ. 7 ವರ್ಷ ನೀವು ಅದರಿಂಥ ನಡೆಸಿದ್ದೀರಲ್ಲ, ಎಲ್ಲಿತ್ತು ಏನು ಮಾಡಿದಿರಿ ಹೇಳಿ.

ಶ್ರೀ ಆರ್.ವಿ. ದೇಶಪಾಂಡೆ : ಶಿವನಂಜಪ್ಪನವರೇ, ನಿಮಗೆ ಇದರಲ್ಲಿ ಒಳ್ಳೆಯ ಅವಕಾಶ ಮಾಡಿಕೊಟ್ಟಿದ್ದಾರೆ.

ಉಪಾಧ್ಯಕ್ಷರು : ತಾವು ಮುಂದುವರಿಸಿ.

ಶ್ರೀ ಜಿ.ಎಸ್. ಶಿವನಂಜಪ್ಪ : ಮಾನ್ಯ ಅಧ್ಯಕ್ಷರೇ, ನಾನು ಒಂದು ಮಂಡಲ್ ಪಂಚಾಯತ್‌ಗೆ ವಿಜಿಟ್ ಮಾಡಿದೆ. ಅಲ್ಲಿ ಮಂಡಲ್ ಪಂಚಾಯತಿ ಪ್ರಧಾನರೇ ಟ್ರಾಕ್ಟರ್‌ನಲ್ಲಿ ಗ್ರಾವಲ್ ಹೊಡೆಯಬೇಕಾಗಿತ್ತು. ಹೇಮಾವತಿಚಾನಲ್ ಏನು ತಗೆಯುತ್ತಿದ್ದಾರೆ ಅಲ್ಲಿ ಮಣ್ಣು ಬಹಳ ಚೆನ್ನಾಗಿ ಸಿಕ್ಕಿಬಿಟ್ಟಿತು, ಅದನ್ನು ಅವನ ಸ್ವಂತ ಟ್ರ್ಯಾಕ್ಟರ್‌ನಲ್ಲಿ ಹೊಡೆಸಿಬಿಟ್ಟ ನಾನು ಹೋಗಿ ಕೇಳಿದೆ ಇದು ಏನಪ್ಪ ಅಂತ. ನಾನು ಈ ಬಗ್ಗೆ ಬಿ ಡಿ ಒ ಗೆ ಕಂಪ್ಲೆಂಟ್ ಬರೆದುಕೊಟ್ಟರೆ ಅವರು ಹೇಳಿದರು, ಆ ನನಗೆ ಪವರ್ಸ್ ಇಲ್ಲ ಅಂತ ಆಗ ಜಿಲ್ಲಾಪರಿಷತ್ ಅಧ್ಯಕ್ಷರಿಗೆ ಬರೆದುಕೊಟ್ಟೆ ಮತ್ತು ಕಾರ್ಯದರ್ಶಿಗಳಿಗೆ ಕಂಪ್ಲೇಂಟ್ ಬರೆದು ಕೊಟ್ಟೆ ಅಮೇಲೆಮಂಡಲ್ ಪಂಚಾಯಿತಿ ಪ್ರಧಾನರಿಗೆ ಕಾಗದ ಬರೆದರೆ ಅವರು ಹೇಳುತ್ತಾರೆ, ಇವನು ಯಾರು ನನ್ನಕ್ಷೇತ್ರಕ್ಕೆ ಬರುವುದಕ್ಕೆ ನನ್ನ ಪರ್ಮೀಶನ್ ಇಲ್ಲದೆ ಅಂತ ಹೇಳುವಂಥ ಪರಿಸ್ಥಿತಿ ನಿರ್ಮಾಣ ಆಗಿತ್ತು. ಅದನ್ನು ನೀವು ಸರಿಪಡಿಸಲಿಲ್ಲ.

ಶ್ರೀ ಎಚ್ ಏಕಾಂತಯ್ಯ : ಮಾನ್ಯ ಅಧ್ಯಕ್ಷರೇ ಈಗ ಇರುವಂತಹ ವ್ಯವಸ್ಥೆಯಲ್ಲಿ ಏನೂ ಲೋಪದೋಷ ಇಲ್ಲ ಎನ್ನುವಂತಹ ಮಾತನ್ನು ನಾನು ಹೇಳಿಲ್ಲ. ಆದರೆ ನಾನು ಕೇಳುತ್ತಿದ್ದೇನೆ ಸರ್ಕಾರ ಆಗಲೀ ಸಂಬಂದಪಟ್ಟಂಥ ಅಧಿಕಾರಿಗಳು ಆಗಲೀ ಯಾರಿಗೆ ಈ ಸೂಪರ್‌ವೈಜರಿಪವರ್ ಇತ್ತು ಯಾರು ಈ ಹಣವನ್ನು ಕಾನೂನು ಪ್ರಕಾರ ಖರ್ಚುಮಾಡಬೇಕು ಎನ್ನುವ ನಿಯಮವಿತ್ತು, ಅದನ್ನು ಜಾರಿಗೆ ತಂದಿದ್ದೀರಾ ಎನ್ನುವ ಮಾತನ್ನು ನಾನು ಕೇಳಲಿಕ್ಕೆ ಇಚ್ಚೆಪಡುತ್ತೇನೆ. ಒಂದು ಮಾತು ಏನೆಂದರೆ ಮುಖ್ಯವಾಗಿ ಇವತ್ತಿನದಿವಸ ಇರುವಂತಹ ಈ ಭ್ರಷ್ಟ ವ್ಯವಸ್ಥೆ ಏನು ಇದೆ ಆ ಭ್ರಷ್ಟವ್ಯವಸ್ಥೆಯನ್ನು ಸರಿಪಡಿಸಬೇಕು ಅಂತ ತಾವು ಹೇಳಿದರೆ ಅದಕ್ಕೆ ನನ್ನದೇನೂ ಅಭ್ಯಂತರ ಇಲ್ಲ. ಇವತ್ತಿನ ಲೋಪದೋಷಗಳನ್ನು ತಿದ್ದಿಕೊಳ್ಳಬೇಕೆಂದರೆ ನನ್ನದೇನೂ ಇಲ್ಲ ಒಂದು ಉದಾಹರಣೆಯನ್ನು ನಾನು ಕೊಡುತ್ತೇನೆ. ಇದಕ್ಕೆ ಈ ಒಂದು ಕಾನೂನಿನ ಅಡಿಯಲ್ಲಿ ಜಿಲ್ಲಾಪರಿಷತ್ತಿನ

ನಿಮ್ಮ ಅಕೌಂಟ್ಸ್ ಆಫೀಸರ್ಸ್ ಏನು ಇದ್ದಾರೆ, ಅವರು ಕಾನೂನು ಬಾಹಿರವಾದ ಯಾವುದೇ ಬಿಲ್‌ಗಳನ್ನು ಪಾಸ್ ಮಾಡಬಾರದು ಅಂತ ಇದೆ. ಹಾಗಾದರೆ ನಾನು ಕೇಳುತ್ತಿದ್ದೇನೆ, ನಿಮ್ಮ ಗಮನಕ್ಕೆ ಬಂದ ಮೇಲೆ ಅಥವಾ ಸರ್ಕಾರದ ಗಮನಕ್ಕೆ ಬಂದ ಮೇಲೆ ಯಾವುದೇ ಸರ್ಕಾರ ಇರಬಹುದು, ಕಾನೂನುಬಾಹಿರವಾಗಿ ಏನು ಜಿಲ್ಲಾ ಪರಿಷತ್ತಿನವರು ಹಣವನ್ನು ಖರ್ಚುಮಾಡಿದ್ದಾರೆ ಅವರ ಮೇಲೆ ಯಾರಾದರೂ ಕ್ರಮ ತೆಗೆದುಕೊಂಡಿದ್ದಾರಾ? ಆಗಿನ ಸರ್ಕಾರ ಇದ್ದಾಗಲೂ ಸಹ ಅಂದ್ರೆ ನಮಗೆ ಎಲ್ಲಿ ಇಚ್ಛಾ ಶಕ್ತಿ ಇಲ್ಲ, ಅಲ್ಲಿ ಇವೆಲ್ಲಾ ಆಗುತ್ತವೆ. ಅದ್ದರಿಂದ ಮತ್ತೆಮತ್ತೆ ತಮಗೆ ಬೇಕಾಗಿರುವುದು ಒಂದು ದೃಡವಾದಂತಹ ನಿರ್ಧಾರ. ಎಲ್ಲಿ ಭ್ರಷ್ಟಾಚಾರ ಆಗಿದೆ, ಎಲ್ಲಿ ಅವ್ಯವಹಾರ ಆಗಿದೆ, ಅವರನ್ನು ದಂಡಿಸುವಂತಹ ಒಂದು ಪ್ರಾಮಾಣಿಕ ಪ್ರಯತ್ನ ತಮ್ಮದು ಆಗಬೇಕು. ಅದು ಆಗದೆ ಏನೂ ಆಗುವುದಿಲ್ಲ. ಏನೋ ನಮ್ಮ ಪಾರ್ಟಿಯವರು ಇದ್ದರು, ನಮ್ಮ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಇದ್ದರು, ಅವರೆಲ್ಲಾ ದುಡ್ಡುಹೊಡೆದುಕೊಂಡು ಹೋಗಿಬಿಟ್ಟರು ಎನ್ನುವ ಮಾತನ್ನು ತಾವು ಹೇಳ ಬಹುದು ಅಂತ ಇಟ್ಟುಕೊಳ್ಳಿ, ಏಕೆಂದರೆ ತಮಗೆ ಸಮಾಧಾನವಾಗಬೇಕಲ್ಲ, ಒಂದೂವರೆ ವರ್ಷದಿಂದ ತಮ್ಮ ಅತ್ಯಂತ ಪ್ರಾಮಾಣಿಕರಾಗಿರತಕ್ಕಂಥ ದಕ್ಷರಾಗಿರತಕ್ಕಂಥ ಅಧಿಕಾರಿಗಳು ಏನು ಇದ್ದಾರೆ ಆಡಳಿತಾಧಿಕಾರಿಗಳಾಗಿ ಅವರೇನೂ ಮಾಡುವುದಿಲ್ಲವೇ ಸ್ವಾಮಿ ? ಪರಿಸ್ಥಿತಿ ಏನಾದರೂ ಬದಲಾಗಿದೆಯೇ ಈಗ, ಪ್ರಾಮಾಣಿಕವಾಗಿ ಹೇಳಿ ಈಗ ಒಂದೂವರೆ ವರ್ಷದಿಂದ ನಮ್ಮಲ್ಲಿರತಕ್ಕಂಥ ಆಡಳಿತಾಧಿಕಾರಿಗಳ ಕಾಲದಲ್ಲಿ ಎಂದೂ ಭ್ರಷ್ಟಾಚಾರದ ಆರೋಪ ಇಲ್ಲ ಪ್ರತಿಯೊಂದು ವ್ಯವಹಾರವೂ ಚೆನ್ನಾಗಿ ನಡೆದಿದೆ ಎಂಬುದುತಮ್ಮ ಅನಿಸಿಕೆಯೇ? ಅದ್ದರಿಂದ ಇದನ್ನು ರಾಜಕಾರಣ ಮಾಡುವ ದೃಷ್ಟಿಯಿಂದ ಅಥವಾ ಪಕ್ಷದ ಕಾರಣಕ್ಕೋಸ್ಕರ ನಾನು ಈ ಮಾತನ್ನು ಹೇಳುತ್ತಿಲ್ಲ ಇವತ್ತಿನ ದಿವಸ ನಮ್ಮ ವ್ಯವಸ್ಥೆಯಲ್ಲಿರತಕ್ಕಂಥ ಲೋಪದೋಷಗಳನ್ನು ಸರಿಮಾಡಬೇಕಂದು ನಾನು ಹೇಳುತ್ತೇನೆ. ಆದರೆ ಇದು ಹೇಗೆಸಾಧ್ಯ? ಇದರಲ್ಲಿ ಸಾಧ್ಯ ಎರಡುತರಹ ಇದೆ. ನನಗೆ ಗೊತ್ತಿದೆ. ನಾನು ಈಗಾಗಲೇ ಹೇಳಿದ್ದೇನೆ. ಈ ಸಂದರ್ಭದಲ್ಲೂ ಹೇಳುತ್ತೇನೆ. ಎಲ್ಲಿಯವರಿಗೂ ಈ ದೇಶದ ಆಡಳಿತವನ್ನು ಮಾಡುವಂತೆ ಹೊಣೆಗಾರಿಕೆ ಇರುವಂಥ ಜನ ಈ ಭ್ರಷ್ಟಾಚಾರವನ್ನು ತಡೆಗಟ್ಟಲಿಕ್ಕೆ ಪ್ರಯತ್ನವನ್ನು ಮಾಡುವುದಿಲ್ಲ. ಅಲ್ಲಿಯವರೆಗೂ ಇದನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ನನಗೆ ಗೊತ್ತಿದೆ, ಅನೇಕ ಸಂದರ್ಭಗಳಲ್ಲಿ ನಾವು ಹೇಳುತ್ತೇವೆ. ಏನು ಜನ ಪ್ರತಿನಿಧಿಗಳು ಅಥವಾ ಜನರಿಂದ ಚುನಾಯಿತರಾಗಿರತಕ್ಕಂಥ ಸದಸ್ಯರುತಮ್ಮ ದುರ್ವ್ಯವಹಾರಗಳಿಂದಾಗಿ ದುರ್ನಡತೆಯಿಂದಾಗಿ ಏನಾದರೂ ತಪ್ಪು ಮಾಡಿದರೆ ಅವರನ್ನು ಶಿಕ್ಷಿಸಲು ನಮ್ಮ ದೇಶದಲ್ಲಿ ಏನಾದರೂ ಕಾನೂನು ಇದೆಯಾ ? ಹೋಗಲಿ, ಒಂದು ಪಕ್ಷ ಏನಾದರೂ ಅವಕಾಶ ಇದ್ದರೆ ನಾನು ಕೇಳಬೇಕು ಮಾನ್ಯ ಘೋರ್ಪಡೆಯವರನ್ನು ಸ್ವಾಮಿ ಇಂತಹ ಅಧಿಕಾರಿಮೇಲೆ ನಾನು ಕಾನೂನು ಪ್ರಕಾರ ಕ್ರಮ ಕೈಗೊಳ್ಳುತ್ತೇನೆ, ತಾವು ಪೂರ್ವಾನುಮತಿ ಕೊಡಬೇಕು ಅಂತ ನಾನು ಕೇಳಬೇಕು, ಯಾರು ಇದನ್ನು ಮಾಡಲಿಕ್ಕೆ ಸಾಧ್ಯ ಸ್ವಾಮಿ ಇವತ್ತಿನ ದಿವಸ ತಾವು ಯಾರು ಪಬ್ಲಿಕ್‌ಸರ್ವೆಂಟ್ ಅಂತ ಹೇಳುತ್ತಿದ್ದೀರಿ ಅವರು ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಿರಬಹುದು ಉಪಾಧ್ಯಕ್ಷರಾಗಿರಬಹುದು ಅಥವಾ ಬೇರೆ ಯಾವುದೇ ಚುನಾಯಿತಸ್ಥಾನ ಹೊಂದಿದಂತಹ ಜನ ಆಗಿರಬಹುದು ಅಥವಾ ಅಧಿಕಾರಮಾಡುವಂತಹ ಜನ ಆಗಿರಬಹುದು, ಅವರನ್ನು ಶಿಕ್ಷೆ ಮಾಡಲಿಕ್ಕೆ ಯಾರಾದರೂ ನಾಗರೀಕರು ಪ್ರಾಮಾಣಿಕವಾಗಿ ಪ್ರಯತ್ನ ಪಟ್ಟರೆ ಅವರಿಗೆ ಸಹಾಯವಾಗತಕ್ಕಂಥ ರೀತಿಯಲ್ಲಿ ಕಾನೂನುತರಲಿಕ್ಕೆ ತಾವು ಏತಕ್ಕೋಸ್ಕರ ಪ್ರಯತ್ನಮಾಡಬಾರದು ?

3.20 ಪಿ ಎಂ

ಶ್ರೀ ಎಂ.ವೈ.ಘೋರ್ಪಡೆ : ಗುಲಬರ್ಗದಲ್ಲಿ ಏನು ನಡೆಯಿತು ಎಂಬುದು ತಮಗೆ ಗೊತ್ತಿದೆ. ಅಕ್ರಮ ನಡೆಯಿತು ಎಂದು ಸಂಬಂಧಪಟ್ಟಂಥ ಅಧಿಕಾರಿಗೆ ಶಿಕ್ಷೆ ಕೊಡುವಂಥ ಪ್ರಯತ್ನವನ್ನು ಕೂಡ ಮಾಡಿದ್ದರು. ಅವರು ಅಧ್ಯಕ್ಷರ ಮೇಲೆ ತಪ್ಪು ಹಾಕಿದರು. ಯಾಕೆಂದರೆ ನಮ್ಮ ಕಾನೂನಿನಲ್ಲಿ ಆ ದೋಷ ಇದೆ. ಅಧಿಕಾರಸ್ಥರನ್ನು ನೇರವಾಗಿ, ಜವಾಬ್ದಾರಿಯನ್ನು ಅವರ ಮೇಲೆ ಹಾಕಿ, ಶಿಕ್ಷೆ ಕೊಡುವಂಥ ಅವಕಾಶ ವಿಚಾರದಲ್ಲಿ ಗೊಂದಲವಿದೆ. ಏನು ತಪ್ಪು ಮಾಡಿದರೂ ಕೂಡ ಅವರು ಅಧ್ಯಕ್ಷರ ಮೇಲೆ ಹಾಕಿದರೆ, ಅಧ್ಯಕ್ಷರಿಗೆ ನಾವು ಶಿಕ್ಷೆಯನ್ನು ಹೇಗೆ ಕೊಡಲು ಸಾಧ್ಯವಾಗುತ್ತದೆ ? ಆದಕಾರಣ ಆ ಒಂದು ದೋಷ ಏನಿತ್ತು ಅದನ್ನು ನಾವು ಸರಿಪಡಿಸಿದ್ದೇವೆ.

ಶ್ರೀ ಹೆಚ್ ಏಕಾಂತಯ್ಯ : ದೊಷವನ್ನು ಸರಿಪಡುಸುವುದರ ಮುಖಾಂತರ ಇದನ್ನು ಮಾಡಲು ಸಾಧ್ಯವಿಲ್ಲ. ದೊಷವನ್ನು ಕೇವಲ ಕಾನೂನು ಸರಿಪಡಿಸುವುದಿಲ್ಲ. ಸರಿಪಡಿಸಿದಂಥ ಕಾನೂನಿನ ಅಡಿಯಲ್ಲಿ ಕ್ರಮ ತೆಗೆದುಕೊಳ್ಳುವಂಥ ಪ್ರವೃತ್ತಿ ನಿಮಗೆ ಬೇಕು. ಅನೇಕ ಉದಾಹರಣೆಗಳನ್ನು ರಾಜ್ಯ ಸರಕಾರದ ಆಡಳಿತ ಬಗ್ಗೆ ಕೊಡಬಹುದು. ಯಾವ ಒಬ್ಬ ಅಧಿಕಾರಿ ನಾನು ಮಂತ್ರಿಯಾಗಿದ್ದಾಗ ಮಾಡಬಹುದು ಎಂದು ಬರೆಯುತ್ತಾನೋ ಅತನೇ ನಾನು ಅಧಿಕಾರದಿಂದ ಹೋದ ತತ್‌ಕ್ಷಣ ಇದು ಮಾಡಿದ್ದು ತಪ್ಪು ಎಂದು ಬರೆಯುವಂಥ ಅಧಿಕಾರಿಗಳು ನಮ್ಮ ದೇಶದಲ್ಲಿದ್ದಾರೆ ಎಂಬುದನ್ನು ತಾವು ಅರ್ಥವಾಡಿಕೊಳ್ಳಬೇಕು. ಆದ್ದರಿಂದ ಹೊಣೆಗಾರಿಕೆಯು ಇವೊತ್ತಿನ ದಿವಸ ಅದಿಕಾರಿಗಳಮೇಲೂ ಇದೆ. ಅದನ್ನು ಹೇಳಿ ನಾವು ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಗುಲಬರ್ಗ ಇರಬಹುದು, ಚಿತ್ರದುರ್ಗ ಇರಬಹುದ, ಅವ್ಯವಹಾರ ಮಾಡಿದರೆ, ಯಾವುದೇ ವ್ಯವಹಾರವನ್ನು ಕಾನೂನಿಗೆ ವಿರುದ್ಧವಾಗಿ ಮಾಡಿದ್ದರೆ, ಸಂಬಂಧಪಟ್ಟ ಅಧಿಕಾರಿಯ ಮೇಲೆ ತಾವುಗಳು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ? ಅದಕ್ಕೆ ತಮ್ಮಲ್ಲಿ ಅವಕಾಶ ಇರಲಿಲ್ಲವೇ ? ನಿಮ್ಮ ಅಕೌಂಟ್ಸ್ ಆಫೀಸರ್ ಸರಿಯಾದ ರೀತಿಯಲ್ಲಿ ಹಣವನ್ನು ಬಟವಾಡೆ ಮಾಡಿಲ್ಲವಾದರೆ ಕಾನೂನು ಬದ್ಧವಾಗಿ ಯಾವ ಒಂದು ಕಂಟ್ರಾಕ್ಟ್ ಆಗಬೇಕಾಗಿತ್ತು, ಅಥವಾ ಯಾವುದೋ ಒಂದು ಸಲಕರಣೆಯನ್ನು ಕೊಳ್ಳ ಬೇಕಾಗಿತ್ತು, ಹಾಗೆ ಕಾನೊನಿಗೆ ವಿರುದ್ಧವಾಗಿ ಕೊಂಡುಕೊಂಡಾಗಲೂ ಸಹ ನಿಮ್ಮ ಅಧಿಕಾರಿಗಳು ಇದನ್ನು ಪ್ರಮಾಣೀಕರಿಸಿ, ಹಣವನ್ನು ಕೂಡ ಪಾಪತಿ ಮಾಡಿದಾಗ ಅವರ ಮೇಲೆ ಯಾವ ಕ್ರಮ ತೆಗೆದುಕೊಂಡಿದ್ದೀರಿ ? ಅದ್ದರಿಂದ ಈ ಪ್ರವೃತ್ತಿ ಪ್ರಾರಂಭವಾಗ ಬೇಕಾದುದು ವಿಧಾನ ಸೌಧದಿಂದ. ಅದನ್ನು ತಾವುಗಳು ಗಮನದಲ್ಲಿ ಇಟ್ಟುಕೊಂಡರೆ ಮಾತ್ರ ಅದು ಕೆಳ ಹಂತಕ್ಕೆ ಹೋಗುತ್ತದೆ. ಇಲ್ಲಿ ಕೋಟ್ಯಾಂತರ ರೂಪಾಯಿಗಳ ಲಂಚ ಹೊಡೆದು ಕೋಟ್ಯಾಂತರ ರೂಪಾಯಿಗಳ ಭ್ರಷ್ಟಾಚಾರ ಮಾಡಿದಾಗಲೂ ಅವರ ಮೇಲೆ ಕ್ರಮ ತೆಗೆದುಕೊಳ್ಳದ ಸರಕಾರ ಕೇವಲ ಪಂಚಾಯತಿ ಮಟ್ಟದಲ್ಲಿ ಲಕ್ಷ ರೂಪಾಯಿಗಳ ಅವ್ಯವಹಾರ ನಡೆದರೆ ಸಾವಿರ ರೂಪಾಯಿಗಳ ಅಕ್ರಮ ನಡೆದರೆ ಪ್ರಶ್ನೆ ಮಾಡುತ್ತೀರಲ್ಲ? ನಿಮಗೆ ಯಾವ ರೀತಿಯ ನೈತಿಕ ಹಕ್ಕು ಇದೆ ? ಇವೊತ್ತಿನ ದಿವಸ ಭ್ರಷ್ಟಾಚಾರವನ್ನು ತೆಗೆದುಹಾಕ ಬೇಕು, ಅದರೆ ಅದನ್ನು ತೆಗೆದು ಹಾಕಲು ಅಧಿಕಾರದಲ್ಲಿರುವ ತಾವುಗಳು ಮೊದಲು ಇಲ್ಲಿ ಪ್ರಯತ್ನ ಮಾಡಬೇಕು. ಪ್ರಾಮಾಣಿಕವಾದಂಥ ಜನ ನಾವಾಗಿರ ಬೇಕು. ಅದನ್ನು ಹೊರತುಪಡಿಸಿ ಇಲ್ಲಿ ಕೋಟಿಗಟ್ಟಲೆ ತೆಗೆದುಕೊಂಡಾಗ ಅವನು ಏನು

ಮಾಡುತ್ತಾನೆ? ಅವನಿಗೂ ಗೊತ್ತು? ಯಾವಾಗ ಕೋಟಿಗಟ್ಟಲೆ ಹೊಡೆಯುತ್ತಾರೆ ಹಾಗೆ ಹೊಡೆದುದರಲ್ಲಿ ಒಂದು ಭಾಗವನ್ನು ನಿಮಗೂ ತಂದು ಕೊಡುತ್ತಾನೆ. ಅವನಿಗೆ ನಮ್ಮ ಹಣೆಬರಹ ಏನು ಎಂಬುದು ಗೊತ್ತು. ಅಂಥ ಒಂದು ಪರಿಸ್ಥಿತಿಯು ನಿರ್ಮಾಣವಾಗಿರುವುದರಿಂದ ಈ ಭ್ರಷ್ಟಾಚಾರದ ಆರೋಪವು ಕೇವಲ ನಮ್ಮ ಆಡಳಿತ ಇದ್ದಾಗ ಮಾತ್ರ ಇತ್ತು, ಈಗ ಎಲ್ಲಾ ಸರಿಯಾಗಿದೆ ಎಂಬ ಮಾತನ್ನು ತಾವಾಗಲೀ ತಮ್ಮ ಪಕ್ಷದ ಸದಸ್ಯರಾಗಲೀ ಹೇಳಿದರೆ, ಅದು ರಾಜಕೀಯ ಕಾರಣಕ್ಕೋಸ್ಕರವಾಗಿ ಹೇಳುವ ಮಾತಾಗುತ್ತದೆಯೋ ಹೊರತಾಗಿ ಬೇರೂನು ಅಲ್ಲ. ಇವೊತ್ತಿನ ದಿವಸ ಕೆಲವು ಅಧಿಕಾರಗಳನ್ನು ತಾವು ಕೊಟ್ಟಿದ್ದೀರಿ. ಇದು ಬಹಳ ಅತ್ಯುತ್ತಮವಾದಂಥ ವ್ಯವಸ್ಥೆ ಎಂಬ ಮಾತನ್ನು ಕೂಡ ಹೇಳಿದ್ದಾರೆ. ಮೂಲಭೂತವಾಗಿ ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕಲ್ಪನೆ ಏನಿತ್ತು ಅಂದರೆ, ಒಂದು ಪ್ರದೇಶದ ಅಭಿವೃದ್ಧಿಗೆ ಬೇಕಾದಂಥ ಯೋಜನೋಯನ್ನು ಮಾಡಲಿಕ್ಕೆ ಅದನ್ನು ಅನುಷ್ಠಾನ ಮಾಡಲಿಕ್ಕೆ, ಅದಕ್ಕೆ ಬೇಕಾದರಥ ಹಣವನ್ನು ಖರ್ಚು ಮಾಡಿಲಿಕ್ಕೆ, ಅಧಿಕಾರವನ್ನು ಕೆಳಹಂತದ ವರೆಗೆ ವರ್ಗಾವಣೆ ಮಾಡುವುದೇ, ಒಂದು ಮೂಲ ಉದ್ದೇಶ ಎಂಬುದನ್ನು ತಾವುಗಳು ಹೇಳುತ್ತೀರಿ. ಇವೋತ್ತಿನ ದಿವಸ ಈ ಕಾನೂನಿನ ಅಡಿಯಲ್ಲಿ ಗುರುತರವಾದಂಥ ಒಂದು ಬದಲಾವಣೆಯನ್ನು ಮಾಡುವಂಥ ಪ್ರಯತ್ನವನ್ನು ಈ ಸರಕಾರವು ಮಾಡಿದೆ. ಸಿಬ್ಬಂದಿ ವಿಚಾರದಲ್ಲಿ ಏನು ಮಾಡಿದ್ದೀರಿ ? ಈ ಒಂದು ವ್ಯವಸ್ಥೆಯಲ್ಲಿ ಸರಕಾರಿ ನೌಕರರೇ ಕೆಲಸ ಮಾಡಬೇಕೆಂಬುದನ್ನು ಹೇಳುತ್ತೀರಿ? ವಿಶೇಷ ಸಂದರ್ಭಗಳಲ್ಲಿ ಮಾತ್ರ ನಿಯೋಜನೆ ಮೂಲಕ ಕೊಂತ್ರ ಸರಕಾರದಿಂದ ಅಥವಾ ಬೇರೆ ವ್ಯವಸ್ಥೆಯಿಂದ ತಾವು ನೇಮಕ ಮಾಡಿಕೊಳ್ಳಬಹುದು. ಸರಿಯಾದ ಆಡಳಿತವನ್ನು ಮಾಡಬೇಕಾದರೆ ಸಿಬ್ಬಂದಿ ನಿಮ್ಮ ಸಿಬ್ಬಂದಿಯಾಗಿರ ಬೇಕೆಂಬುವುದನ್ನು ಒಪ್ಪುತ್ತೀರೋ ಇಲ್ಲವೋ ? ಅದೇ ರೀತಿಯಾಗಿ ಗ್ರಾಮಪಂಚಾಯತಿ, ತಾಲ್ಲೂಕು ಪಂಚಾಯತಿ, ಜಿಲ್ಲಾಪಂಚಾಯತಿಯಲ್ಲಿರುವ ಸಿಬ್ಬಂದಿಯು ಒಟ್ಟು ಜಿಲ್ಲಾ ಪಂಚಾಯತ್ ಏನಿದೆ, ಅದರ ಸಿಬ್ಬಂದಿಯು ಏಕೆ ಆಗಬಾರದು ಸ್ವಾಮಿ ? ಗ್ರಾಮ ಪಂಚಾಯತಿ ನೌಕರ, ಸೆಕ್ರೆಟರಿ ಸರಕಾರಿ ನೌಕರನಾಗಿರ ಬೇಕು, ಬೇರೆ ಸಿಬ್ಬಂದಿಯು ಗ್ರಾಮ ಪಂಚಾಯತಿ ನೌಕರನಾಗಿರ ಬೇಕು ? ಇದು ಏಕೆ ? ಅವನು ಕೂಡ ಸರಕಾರಿ ನೌಕರನಾಗಲಿ ?

ಶ್ರೀ ಎಂ.ವೈ.ಘೋರ್ಪಡೆ : ಪಂಚಾಯತಿಗೆ ಹೆಚ್ಚು ಭಾರ ಬೀಳ ಬಾರದು, ಈ ದೃಷ್ಟಿಯಿಂದ ಅವರಿಗೆ ನಾವು ಸಂಬಳ ಕೊಡುತ್ತಾ ಇದ್ದೇವೆ. ಸಂಬಳ ಯಾರಾದರೂ ಕೊಡಬೇಕಲ್ಲ ?

ಶ್ರೀ ಹೆಚ್. ಏಕಾಂತಯ್ಯ : ಇಲ್ಲಿ ಮೂಲಭೂತವಾಗಿ ನೋಡ ಬೇಕಾಗಿರುವುದು, ಅಂದರೆ ನಮ್ಮ ಕೈಕೆಳಗಿನ ಸಿಬ್ಬಂದಿಯು ಒಂದು ತಪ್ಪು ಮಾಡಿದರೆ, ಅವನನ್ನು ಶಿಕ್ಷೆ ಮಾಡುವಂಥ ಅಧಿಕಾರವು ಆಯಾಯ ಅಂತಸ್ತಿನ ರಾಜಕಾರಣೆಗೆ ಇರಬೇಕೇ ಹೊರತಾಗಿ, ಅಧಿಕಾರವನ್ನು ಕಿತ್ತು ಕೊಂಡು, ತಮ್ಮ ಹತ್ತಿರ ಇಟ್ಟುಕೊಂಡು, ಅವರನ್ನು ಕೆಲಸ ಮಾಡಿ ಎಂದರೆ ಯಾರಿಂದ ಸಾಧ್ಯವಾದೀತು ? ಇಲ್ಲಿ ಸರಕಾರದಲ್ಲಿ ಒಬ್ಬ ಅಧಿಕಾರಿಯ ವರ್ಗಾವಣೆಯಾಗುತ್ತದೆ, ಉದಾಹರಣೆಗೆ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯಲ್ಲಿ ಎಂದು ಇಟ್ಟುಕೊಳ್ಳಿ. ಅಲ್ಲಿಯ ಡಿಹೆಚ್‌ಒಗೆ ಆ ಅಧಿಕಾರ ಇಲ್ಲ. ಅಕಸ್ಮಾತ್ತಾಗಿ ಹಾಗೇನಾದರೂ ಮಾಡಿದರೆ ವರ್ಗಾವಣೆ ಯಾದವನು ಬೆಂಗಳೂರಿಗೆ ಬಂದು ಅದನ್ನು ಬದಲಾವಣೆ ಮಾಡಿಕೊಳ್ಳುತ್ತಾನೆ. ಇದರಿಂದ ಪರಿಸ್ಥಿತಿಯು ಏನಾಗುತ್ತದೆ ? ಅಂದರೆ ಯಾವ ವ್ಯಕ್ತಿ ಶಿಸ್ತನ್ನು ಪಾಲಿಸ ಬೇಕಾಗಿದೆ, ಅದಕ್ಕೆ ಬೇಕಾದ ಆಡಳಿತ ಕೊಡುವುದಕ್ಕೆ

ನೀವು ಹೊಣೆಗಾರರನ್ನಾಗಿ ಮಾಡುತ್ತೀರಿ, ಕೆಲವು ಅಧಿಕಾರಗಳನ್ನು ಅವರಿಗೆ ಕೊಡದಿದ್ದರೆ, ಎಷ್ಟರಮಟ್ಟಿಗೆ ಆಡಳಿತದಲ್ಲಿ ನೀವು ಶಿಸ್ತನ್ನು ಜಾರಿಗೆ ತರಲು ಸಾಧ್ಯವಾಗುತ್ತದೆ? ಆದ್ದರಿಂದ ನನ್ನ ಪ್ರಶ್ನೆ ಏನೆಂದರೆ, ಇವೊತ್ತಿನ ದಿವಸ ಜಿಲ್ಲಾಪರಿಷತ್ತಿಗೆ ಸಂಬಂಧಪಟ್ಟಂತೆ ಆಗಿರಬಹುದು, ತಾಲ್ಲೂಕು ಪಂಚಾಯತಿಗೆ ಸಂಭಂದಪಟ್ಟಂತೆ ಆಗಿರಬಹುದು, ನೀವು ಈ ಸಿಬ್ಬಂದಿಯನ್ನು ಬೇರೆ ಇಲಾಖೆಗಳಿಂದ ನಿಯೋಜನೆ ಮಾಡುತ್ತೀರಿ. ಆ ನಿಯೋಜನೆ ಮಾಡಿದಂಥ ಅಧಿಕಾರಗಳ ಮೇಲೆ ತಮಗೆ ಯಾವ ಅಧಿಕಾರ ಇದೆ? ಹಾಗಾದರೆ ಜಿಲ್ಲಾಪರಿಷತ್ತಿನಲ್ಲಿ ಕೆಲಸ ಮಾಡುವಂಥ ಒಬ್ಬ ನೌಕರ ಕೆಲಸ ಮಾಡುವಂಥ ಸಂದರ್ಭದಲ್ಲಿ ತಪ್ಪು ಮಾಡಿದಾಗ ಶಿಕ್ಷೆ ಮಾಡುವಂಥ ಅಧಿಕಾರ ಯಾರಿಗೆ ಇದೆ? ನಾವು ನಿಮಗೆ ಬರೆಯಬೇಕು, ನೀವು ಕ್ರಮ ತೆಗೆದುಕೊಳ್ಳಬೇಕು, ಒಂದು ವೇಳೆ ಕ್ರಮ ತೆಗೆದುಕೊಳ್ಳದಿದ್ದರೆ ಏನು ಮಾಡಬೇಕು ? ಇಂಥ ಪರಿಸ್ಥಿತಿಯು ಇರುವುದರಿಂದ ಎಷ್ಟರಮಟ್ಟಿಗೆ ಆ ನೌಕರ ನಾವು ಹೇಳಿದಂಥ ಕೆಲಸವನ್ನು ಮಾಡುಮದಕ್ಕೆ ಸಾಧ್ಯ? ಇದರ ಬಗ್ಗೆ ತಾವು ಯೊಚನೆ ಮಾಡಬೇಕು. ಈಗ ಇರುವಂಥ ಕಾನೂನಿನ ಅಡಿಯಲ್ಲಿ ಅವರೆಲ್ಲರೂ ಜಿಲ್ಲಾಪರಿಷತ್ತಿನ ನೌಕರರಾಗುತ್ತಾರೆ. ಇವೊತ್ತು ನಾವು ನೇರವಾಗಿ ಮಾಡಿಲ್ಲದೆ ಇರಬಹುದು, ಸದ್ಯಕ್ಕೆ ನಿಯೋಜನೆಯ ಮೇಲೆ ಅವರನ್ನು ತೆಗೆದುಕೊಂಡಿರ ಬಹುದು. ಇಲ್ಲವೆಂದು ನಾನು ಹೇಳುತ್ತಿಲ್ಲ. ಈ ಪರಿಕಲ್ಪನೆಯ ಕಲ್ಪನೆ ಏನೆಂದರೆ ಇವತ್ತಲ್ಲಾ ನಾಳೆ ನೀವು ಅವರನ್ನು ಜಿಲ್ಲಾಪರಿಷತ್ತಿನ ನೌಕರರೆಂದು ಬಾವಿಸಬೇಕು. ಆ ಒಂದು ವರ್ಗವನ್ನು ತಯಾರಿ ಮಾಡಬೇಕು ಮತ್ತು ನೆಮಕ ಮಾಡಿಕೊಳ್ಳಬೇಕೆಂಬ ಒಂದು ಪರಿಕಲ್ಪನೆ ಹಳೆಯ ಕಾನೂನಿನಲ್ಲಿ ಇತ್ತು. ಸದ್ಯಕ್ಕೆ ಇಲ್ಲಿಂದ ಅಲ್ಲಿಯವರೆಗೂ ಸಹ ಎರವಲು ಆಧಾರದಮೇಲೆ ಅವರಿಂದ ಕೆಲಸವನ್ನು ಮಾಡಿಸಿಕೊಳ್ಳ ಬೇಕೆಂಬ ಪ್ರಯತ್ನವನ್ನು ಮಾಡಿದ್ದೀರಿ. ಇವತ್ತಿನ ದಿವಸ ಅದನ್ನು ಪೂರ್ಣವಾಗಿ ತೆಗೆದು ಹೇಕಿದ್ದೀರಿ. ಕೇವಲ ಗ್ರಾಮಪಂಚಾಯತಿಯ ಕಾರ್ಯದರ್ಶಿಯನ್ನು ಉಳಿದು, ಗ್ರಾಮಪಂಚಾಯತಿಯ ಕೆಲವು ನೌಕರರನ್ನು ಪೂರ್ವನುಮತಿಯಿಂದ ತೆಗೆದುಕೊಂಡಂಥ ಸಂದರ್ಭವನ್ನು ಹೊರತುಪಡಿಸಿದ್ದಾರೆ, ಬೇರೆ ಎಲ್ಲರೂ ಸರ್ಕಾರದ ಸೇವೆಯಿಂದ ಬೇರೆ ಬೇರೆ ಇಲಾಖೆಯಿಂದ ನಿಯೋಜನೆಯ ಆಧಾರದ ಮೇಲೆ ಬಂದಂಥ ಅಧಿಕಾರಿಗಳಾಗಿದ್ದರೆ. ಇವರ ಮೇಲೆ ಏನು ಅಧಿಕಾರ ಇದೆ ? ತಾವುಗಳು ಬಹಳ ಬುದ್ಧಿವಂತಿಕೆಯಿಂದ ಬದಲಾವಣೆ ಮಾಡಿದ್ದೇವೆ ಎಂಬ ಮಾತನ್ನು ಹೇಳಿದ್ದೀರಿ. ಗ್ರಾಮಪಂಚಾಯತಿಯ ಸಂಬಂಧದಲ್ಲಿ ಅದರ ಅಧ್ಯಕ್ಷನಿಗೆ, ಸೂಪರ್‌ವಿಶನ್ ಮತ್ತು ಕಂಟ್ರೋಲ್ ಮಾಡುವ ಅಧಿಕಾರ ಇದೆ ? ಹೌದಲ್ಲವೆ ? ಅದೇ ರೀತಿಯ ಸೂಪರ್‌ವಿಶನ್ ಮತ್ತು ಕಂಟ್ರೋಲ್ ತಾಲ್ಲೂಕು ಪಂಚಾಯತಿಯ ಅಧ್ಯಕ್ಷರಿಗಾಗಲೀ, ಜಿಲ್ಲಾ ಪಂಚಾಯತಿಯ ಅಧ್ಯಕ್ಷರಿಗಾಗಲೀ ಇದೆಯೇ ? ಹಾಗಾದರೆ ಗ್ರಾಮಪಂಚಾಯತಿಯ ಅಧ್ಯಕ್ಷರಿಗೆ ಅಧಿಕಾರವನ್ನು ಕೊಡುವುದಾದರೆ ಸಮಿತಿಗೂ ಸಹ ನೀವು ಸೂಪರ್ ವಿಶನ್ ಪವರ್ಸ್ ಕೊಟ್ಟಿದ್ದೀರೇ ಹೊರತಾಗಿ ಕಂಟ್ರೋಲ್ ಎಂಬ ಪದವನ್ನು ಇವರಲ್ಲಿ ಉಪಯೋಗಿಸಿಲ್ಲ.

ಶ್ರೀ ಎಂ.ವೈ. ಘೋರ್ಪಡೆ : ಸೆಕ್ಷನ್ 152, 193, 162 ಇದರಲ್ಲಿ 62 ಗ್ರಾಮಪಂಚಾಯತಿಗೆ ಸಂಬಂಧಪಟ್ಟಿದ್ದು. 193 ಜಿಲ್ಲಾ ಪಂಚಾಯತಿಗೆ ಸಂಬಂಧಪಟ್ಟಿದ್ದು.

ಶ್ರೀ ಹೆಚ್. ಏಕಾಂತಯ್ಯ : ಅಧ್ಯಕ್ಷರೇ, ಪ್ರಕಾರ್ಯಗಳು ಮತ್ತು ಅಧಿಕಾರಗಳು ಎಂದು ತಾವೇನು ಮಾಡಿದ್ದೀರಿ ?62 ಸಿ ಯನ್ನು ನೋಡಿ, ಅದರಲ್ಲಿ ಗ್ರಾಮಪಂಚಾಯತಿ ಅಧಿಕಾರಗಳ ಮತ್ತು ನೌಕರರ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ಹೊಂದಿರತಕ್ಕಂಥಾದ್ದು.

ಅದೇ ರೀತಿಯಲ್ಲಿ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾಪಂಚಾಯತಿ ಅಧ್ಯಕ್ಷಮತ್ತು ಉಪಾಧ್ಯಕ್ಷರಗಳು ನಿಯಂತ್ರಣವನ್ನು ಹೊಂದಿರತಕ್ಕದ್ದು ಎಂಬ ಪದ ಇವರಲ್ಲಿ ಏನಿದೆಯೋ ಅದನ್ನು ಹೇಳಿ. ಅಧ್ಯಕ್ಷರು ನಿಯಂತ್ರಣವನ್ನು ಹೊಂದಿರಕ್ಕಂಥದ್ದು ಅಂತ ನಾನು ಏನು ಹೇಳಿದೆ, ಆ ಪದ ಎಲ್ಲಿಯಾದರೂ ಇದ್ದರೆ ಹೇಳಿ. ನಾನು ಓದಿದ್ದೇನೆ, ನಾನು ಓದದೆ ಏನನ್ನೂ ಹೇಳಿಲ್ಲ.

ಶ್ರೀ ಎಂ.ಘೋರ್ಪಡೆ : ಇಂಗ್ಲೀಷ್‌ನಲ್ಲಿ ಸೂಪರ್ ವಿಶನ್ ಎನ್ನುವುದು ಇದೆ.

ಶ್ರೀ ಹೆಚ್.ಏಕಾಂತಯ್ಯ : ಕಂಟ್ರೋಲ್ ಅನ್ನುವುದು ಇಲ್ಲ. ಓದಿ, ನಾನೇನು ವಾದ ಮಾದಬೇಕೆಂದು ವಾದಮಾಡುತ್ತಿಲ್ಲ. ನಿಮ್ಮ ಅಧಿಕಾರಗಳ ಚಾಕಚಕ್ಯತೆಯಿಂದ ಕಂಟ್ರೋಲ್ ಎಂಬ ಪದ ಏಕೆ ತಪ್ಪಿದೆ ಅಂದರೆ ......

Sri D.R.Patil : I will read rule 152(c). "Exercise Supervision and control over the Executive Officer for securing implementation of resolutions or decisions of the Taluk Panchayats or of the standing committees which are not inconsistent with the provisions of this Act. or in general or specific directions issued under this Act."

ಶ್ರೀ ಹೆಚ್.ಏಕಾಂತಯ್ಯ :ಮಾನ್ಯ ಪಟೇಲರೇ, ಇನ್ನೊಂದು ಸಾರಿ ಓದಿ. ಅದೇ ಬೇರೆ ಅರ್ಥ,ಇದೇ ಬೆರೆ ಅರ್ಥ. ಅದು ಬೇರೆ ಸಂಬಂಧದಲ್ಲಿ ಉಪಯೋಗಿಸುವುದು, ಗ್ರಾಮಪಂಚಾಯತಿ ಅಧಿಕಾರಿಗಳ ಮತ್ತು ನೌಕರರ ಮೇಲೆ ಮೇಲ್ವಿಚಾರಣೆಯನ್ನು ನಡಿಸತಕ್ಕದ್ದು ಮತ್ತು ನಿಯಂತ್ರಣವನ್ನು ಹೊಂದಿರತಕ್ಕದ್ದು ಎಂಬ ಮಾತು ಏನಿದೆ ಆ ಸಂಬಂಧದಲ್ಲಿ ಅಧ್ಯಕ್ಷರಿಗೆ ಇರುವಂಥ ಅಧಿಕಾರ ತಾಲ್ಲೂಕ್ ಪಂಚಾಯತಿಯ ಅಧ್ಯಕ್ಷರಿಗಾಗಲಿ, ಜಿಲ್ಲಾಪರಿಷತ್ತಿನ ಅಧ್ಯಕ್ಷರಿಗಾಗಲಿ ಇಲ್ಲ, ಬೇರೆ ವಿಚಾರದಲ್ಲಿ ಕಂಟ್ರೋಲ್ ಬಂದಿದೆ, ಇದರಿಂದ ಇಲ್ಲ, ಏತಕ್ಕೋಸ್ಕರ ? ಅದರ ಅರ್ಥ ಏನು ಅಂದರೆ ಇಲ್ಲಿರುವಂತಹ ಮುಖ್ಯ ನಿರ್ವಹಣಾಕಾರಿ ಕ್ಲಾಸ್ (ಎ) ಆಗಿರಬೇಕು, ಇಲ್ಲಿರುವಂತಹ ಕಾರ್ಯನಿರ್ವಹಣಾಧಿಕಾರಿ ಕ್ಲಾಸ್ (ಎ) ಆಗಿರಬೇಕು, ಮತ್ತು ಕಾರ್ಯನಿರ್ವಹಣಾಧಿಕಾರಿ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಜಿಲ್ಲಾಪರಿಷತ್ತು ಅಂತ ಏನು ಕರೆಯುತ್ತಿರಿ, ಅವರು ಡೆಪ್ಯುಟಿ ಕಮಿಷನರ್ ಆಗಿರಬೇಕು, ಇವರ ಮೇಲೆ ಯಾವುದೇ ವಿಧವಾದಂತಹ ನಿಯಂತ್ರಣವನ್ನು ನೀವು ಚುನಾಯಿತ ನಾದಂತಹ ಪ್ರತಿನಿಧಿಗೆ ಕೊಡಲಿಕ್ಕೆ ತಯಾರಾಗಿಲ್ಲ

ಶ್ರೀ ಎಂ.ಘೋರ್ಪಡೆ : ಅಧಿನಿಯಮ 152(ಸಿ)(ಡಿ) ಓದಿ.

ಶ್ರೀ ಡಿ.ಆರ್.ಪಾಟೀಲ್ : ಈ ಅಧಿನಿಯಮದ ಉಪಬಂಧಗಳಿಗೆ ಸರ್ಕಾರ ಅಥವಾ ಕಮಿಷನರ್‌ರವರು ಹೊರಡಿಸಿದ ಯಾವುದೇ ಸಾಮಾನ್ಯ ಅಥವಾ ನಿರ್ಧಿಷ್ಟ ನಿರ್ದೇಶನಗಳಿಗೆ ಆಸರಗತವಾಗಿರದ ತಾಲ್ಲೂಕ್ ಪಂಚಾಯತಿಯ ಅಥವಾ ಸ್ಥಾಯಿ ಸಮಿತಿಗಳ

ನಿರ್ಣಯಗಳನ್ನು ಅಥವಾ ತೀರ್ಮಾನಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಕಾರ್ಯನಿರ್ವಾಹಕ ಅಧಿಕಾರಿಯ ಮೇಲೆ ಮೇಲ್ವಿಚಾರಣೆ ಮಾಡತಕ್ಕದ್ದು ಮತ್ತು ಅವನ ಮೇಲೆ ನಿಯಂತ್ರಣ ಅಧಿಕಾರವನ್ನು ಚಲಾಯಿಸತಕ್ಕದ್ದು. ಎಂದಿದೆ.

ಶ್ರೀ ಹೆಚ್.ಏಕಾಂತಯ್ಯ : ನನ್ನದು ಏನು ತಕರಾರು ಇಲ್ಲ, ನೀವು ಇನ್ನೊಂದು ಸಾರಿ ಬೇಕಾದರೆ ಓದಿ, ನಾನು ಓದಿದ್ದೇನೆ. ಓದದೆ ನಾನು ಹೇಳುತ್ತಿಲ್ಲ. ಇಲ್ಲಿ ನೇರವಾದಂತಹ ಗ್ರಾಮಪಂಚಾಯತಿ ಅಧಿಕಾರಿಗಳ ಮತ್ತು ನೌಕರರುಗಳ ಮೇಲೆ ಮೇಲ್ವಿಚಾರಣೆಯನ್ನು ನಡೆಸ ತಕ್ಕದ್ದು ಮತ್ತು ನಿಯಂತ್ರಣವನ್ನು ಹೊಂದಿರತಕ್ಕದ್ದು. ಯಾವ ವಿಚಾರದ ಮೇಲೆ ನಿಯಂತ್ರಣ ಇದೆ ? ಪಂಚಾಯತಿ ಅಧಿಕಾರಿಗಳ ಮತ್ತು ನೌಕರರುಗಳ ಮೇಲೆ ಇದೆಯಾ ? ಸೆಕ್ಷನ್ 152 (ಸಿ) ನಲ್ಲಿ ಜಿಲ್ಲಾಪಂಚಾಯತಿ ಅಧಿಕಾರಿಗಳ ಮತ್ತು ನೌಕರರುಗಳ ಮೇಲೆ ಇದೆಯಾ ? ಯಾವುದಕ್ಕೂ ಆಗುವಂಥ ನಿಯಂತ್ರಣವನ್ನು ಇದಕ್ಕೆ ಆಗುವಂತೆ ಮಾಡಿದರೆ ಹೇಗೆ ?

ಉಪಾಧ್ಯಕ್ಷರು : ನೀವು ಆಂಬಿಗ್ಯುಟಿ ರಿಮೊಡ್‌ಮಾಡಿ ಅಂತ ಕೇಳುತ್ತಿದ್ದೀರಿ. ಅದರ ಮೇಲೆ ಏನು ಸಜೆಶನ್ ಕೊಡುತ್ತೀರೋ ಅದನ್ನು ಕೊಡಿ. ನಾವು ಮಸೂದೆಯನ್ನು ತಂದಿರುವುದು ಯಾವುದರ ಮೇಲೆ ಹೇಳಿ

ಶ್ರೀ ಎಂ.ವೈ.ಘೋರ್ಪಡೆ : ನಾವು ಅದೇ ಐಡೆಂಟಿಕಲ್ ಪದವನ್ನು ಉಪಯೊಗಿಸಬೇಕೆಂದು ಏನಿಲ್ಲ, ಅರ್ಥ ಒಂದೇ ಇದ್ದರೆ, ಶಬ್ದಕೂಡ ಒಂದೇ ಆಗಿರುತ್ತದೆ.

ಉಪಾಧ್ಯಕ್ಷರು : ಮಾನ್ಯ ಹಿರಿಯ ಸದಸ್ಯರಾದಂಥ ಏಕಾಂತಯ್ಯನವರೆ ಅಂಬಿಗ್ಯುಟಿ ಇದ್ದರೆ ಅಂಬಿಗ್ಯುಟಿಯನ್ನು ರಿಮೂವ್ ಮಾಡಿ. ಆ ಅಮೆಂಡ್‌ಮೆಂಟ್ ಬಿಲ್ ತಂದಿರುವುದು ಯಾವುದರ ಬಗ್ಗೆ ಹೇಳಿ . ತಾವು ವಾದವನ್ನು ಮಂದಿಸುತ್ತಿರುವುದು ಯಾವುದರ ಬಗ್ಗೆ ಹೇಳಿ. ಜಿಲ್ಲಾಪರಿಷತ್ತು ಮತ್ತು ಮಂಡಲ್ ಪಂಚಾಯತಿಯ ಬಗ್ಗೆ. ಅದು ಕ್ಲಿಯರಾಗಿ ಬಂದಿಲ್ಲ ಅಂತ ಹೇಳುತ್ತಿದ್ದೀರಿ ಅಂಬಿಗ್ಯುಟ್ ಇದೆ ಅಂತ ಹೇಳುತ್ತಿದ್ದೀರಿ.

ಶ್ರೀ ಹೆಚ್. ಏಕಾಂತಯ್ಯ : ನಾನು ಆಂಬಿಗ್ಯುಟಟಿ ಇದೆ ಅಂತ ಹೇಳುತ್ತಿಲ್ಲ.

ಉಪಾಧ್ಯಕ್ಷರು : ಅದರ ಬಗ್ಗೆ ಏನಾದರೂ ಸಜೆಶನ್ ಕೊಡುವುದಾದರೆ ಕೊಡಿ.ಇನ್ನು ಬಹಳ ಜನ ಮಾತನಾಡುವವವರು ಇದ್ದಾರೆ.

ಶ್ರೀ ಹೆಚ್. ಏಕಾಂತಯ್ಯ : ನನ್ನ ಕೆಲಸವನ್ನು ನಾನು ಮಾಡುತ್ತೇನೆ. I want to make it clear to the Government and the concerned, ಇಲ್ಲಿ ಏನು ಮಾಡಿದ್ದಾರೆ ಅಂತ ಹೇಳಿದರೆ, ಅಧಿಕಾರಿಗಳ ಮೇಲೆ ನೌಕರರುಗಳ ಮೇಲೆ ಗ್ರಾಮ ಪಂಚಾಯತಿಯ ಅಧ್ಯಕ್ಷನಿಗೆ ತನ್ನ ಅಧಿಕಾರಿಗಳ ಮೇಲೆ ನೌಕರರುಗಳ ಮೇಲೆ ಹಿಡಿತವಿದೆ. ಅಂತಹ ನಿಯಂತ್ರಣವನ್ನು, ಅಂತಹ ಅಧಿಕಾರವನ್ನು ನೀವು ಜಿಲ್ಲಾಪರಿಷತ್ತಿಗೆ ಮತ್ತು ತಾಲ್ಲೂಕ್ ಪಂಚಾಯತಿಗೆ ಕೊಟ್ಟಿಲ್ಲದಿರುವಂತಹ

ಪ್ರಯತ್ನ ಏನಿದೆ, ಇದು ಅಧಿಕಾರಿಶಾಹಿಗಳ ಕೆಲಸವಾಗಿದೆ. ಇದು ಜನತಂತ್ರ ವ್ಯವಸ್ಥೆಯಲ್ಲಿ ಅಧಿಕಾರಿಗಳು ನಾವೇನು ಚುನಾಯಿತರಾಗುತ್ತೇವೆ. ಚುನಾಯಿತ ಅಧಿಕಾರಿಗಳಿಗೆ ನೀವು ಅಧಿಕಾರವನ್ನು ಕೊಡುವಂಥ ರೀತಿಯಲ್ಲಿ ತಾವು ಮಾಡುತ್ತಿದ್ದೀರಿ.

ಉಪಾಧ್ಯಕ್ಷರು : ಅದು ಏನು ಮಾಡಬೇಕೆಂಬುದರ ಬಗ್ಗೆ ಸಲಹೆಯನ್ನು ಕೊಡಿ. ಅದನ್ನೇ ಎಷ್ಟು ಹೊತ್ತು ವಾದ ಮಾಡುತ್ತೀರಿ ?

ಶ್ರೀ ಹೆಚ್. ಏಕಾಂತಯ್ಯ : ಚುನಾಯಿತರಾದಂತಹ ಜನರಿಗೆ ಹೆಚ್ಚು ಹೆಚ್ಚು ಅಧಿಕಾರವನ್ನು ಕೊಡುವಂಥ ಮಾತನ್ನು ಒಂದು ಕಡೆ ಹೇಳುತ್ತಾ ಮತ್ತೊಂದು ಕಡೆ ಇರುವಂಥ ಅಧಿಕಾರ ಏನಿದೆ, ಅದನ್ನು ಕಸಿದುಕೊಳ್ಳುವಂತಹ ಪ್ರಯತ್ನ ಈ ಹೊಸ ಮಾಸೂದೆಯಲ್ಲಿ ತಾವು ಮಾಡಿದ್ದೀರಿ. ಆದ್ದರಿಂದ ಹೆಚ್ಚು ಅಧಿಕಾರವನ್ನು ಬ್ಯುರೊಕಾನಿಗೆ ಕೊಟ್ಟು ಇವತ್ತಿನ ದಿವಸ ಅವರ ಮೇಲೆ ಯಾವ ಹಿಡಿತವಿಲ್ಲದೆ ಇರುವಂತಹ ಪರಿಸ್ಥಿತಿಯನ್ನು ನಿರ್ಮಾಣಮಾಡಿ ಈ ಜಿಲ್ಲಾಪರಿಷತ್ತುಗಳು ಬಹಳವಾಗಿದೆ ಅಂತ ಹೇಳಿದರೆ ಅದನ್ನು ತಾವು ಇಲ್ಲಿಂದ ಆ ಅಧಿಕಾರಗಳನ್ನು ಹಿಡಿತದಲ್ಲಿಟ್ಟು ಕೊಳ್ಳುವಂತಹ ಪ್ರಯತ್ನವಾಗಿದೆ, ಇದು ನಿಜವಾಗಿಯೂ ಅಧಿಕಾರದ ವಿಕೇಂದ್ರೀಕರಣ ಅಲ್ಲ, ಅದಕ್ಕೆ ಬದಲಾಗಿ decentralisation of power ಯಾವ ಅಧಿಕಾರವನ್ನು ನೀವು ಜಿಲ್ಲಾಪರಿಷತ್ತಿಗೆ, ಅಥವಾ ಜಿಲ್ಲಾಪಂಚಾಯತಿಗೆ ಕೊಡಬೇಕೆಂಬ ಮಾತನ್ನು ಹೇಳುತ್ತಿದ್ದೀರಿ, ಅದಕ್ಕೆ ವಿರುದ್ಧವಾದ ರೀತಿಯಲ್ಲಿ ಈ ಕಾರ್ಯವನ್ನು ಮಾಡಿದ್ದಾರೆಂಬ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮುಖ್ಯವಾಗಿ ಯೋಜನಾ ಮಂಡಲಿಯನ್ನು ಅವರು ನೇಮಕಮಾಡಿದ್ದಾರೆ. ಇದು ಬಹಳ ಚೆನ್ನಾಗಿದೆ. ನಗರ ಪಾಲಿಕೆ ತಿದ್ದುಪಡಿಯಲ್ಲಿ ಈ ಮಾತನ್ನು ಹೇಳಿದ್ದಾರೆ. ಅದು ನಮಗೆ ಅನ್ವಯಿಸುತ್ತದೆ. ಅದರ ಪ್ರಕಾರ Section 243(ZD)

"There shall be constituted in every State at the Discrict level, a district planning Committee to consolidate the plans prepared by the panchayats and the Minicipalities in the Discrict and to prepare a Draft Development plan for the District as a whole."

ಯಾರ್ಯಾರಿಂದ ಕೊಡಬೇಕೆಂಬ ಮಾತನ್ನು ಹೇಳಿದ್ದಾರೆ. ಅದಕ್ಕೆ ಸರ್ಕಾರಕ್ಕೆ ಅವರು ಒಂದು ಕರೆಯನ್ನು ಕೊಟ್ಟಿದ್ದಾರೆ ಮಾನ್ಯ ಘೋರ್ಪಡೆ ಮಂತ್ರಿಯವರು ಬಹಳ ಉದಾರಿಗಳು ಇಡೀ ದೇಶದಲ್ಲಿರುವಂತಹ ಜನರನ್ನೆಲ್ಲ ಇದರಲ್ಲಿ ತಂದು ಹಾಕಿದ್ದಾರೆ. ಹೀಗೆ ಹೇಳಿದರೆ ಅವರಿಗೆ ಸ್ವಲ್ಪ ನೋವಾಗಬಹುದು, ಒಂದು ಜಿಲ್ಲಾ ಮಟ್ಟದ ಯೋಜನಾ ಸಮಿತಿ ಏನಿದೆ ಅದಕ್ಕೆ ಎಷ್ಟು ಜನ ಅಧ್ಯಕ್ಷರು ಇರಬೇಕು. ಇವತ್ತಿನ ಈ ಕಾನೂನಿನಡಿಯಲ್ಲಿ ಏನು ಮಾಡಿದ್ದೀರಿ ಅಂದರೆ ಈ ದೇಶದಲ್ಲಿ ಇರುವವರನ್ನೆಲ್ಲ ತಂದು ಇವರಲ್ಲಿ ಹಾಕಿದ್ದೀರಿ. ಉದಾಹರಣೆಗೆ ಹೇಳುವುದಾದರೆ ಈ ಯೋಜನೆಯಲ್ಲಿ, ಜಿಲ್ಲಾ ಯೋಜನಾ ಸಮಿತಿಯು ಇಡೀ ಜಿಲ್ಲೆಯ ಅಥವಾ ಅದರ ಭಾಗವನ್ನು ಪ್ರತಿನಿಧಿಸುವ ಲೋಕಸಭಾ ಸದಸ್ಯರುಗಳು ಉಧಾಹರಣೆಗೆ ನಮ್ಮ ಜಿಲ್ಲೆಯಲ್ಲಿ ಇಬ್ಬರು ಇದ್ದಾರೆ. ಜಿಲ್ಲೆಯಲ್ಲಿ ಮತದಾರದಿಂದ ನೋಂದಾಯಿಸಲಾದ ರಾಜ್ಯ ಸಭೆಯ ಸದಸ್ಯರು, ಅವರು

ಇಬ್ಬರು ಇದ್ದಾರೆ, ಒಟ್ಟು ನಾಲ್ಕು ಆಯಿತು, ಜಿಲ್ಲಾ ಪಂಚಾಯತಿಯ ಅಧ್ಯಕ್ಷರು ಐದು, ಇದಾದ ಮೇಲೆ ಇಡಿ ಜಿಲ್ಲೆಯಲ್ಲಿ ಚುನಾಯಿತರಾದಂತಹ ಎಂ.ಎಲ್.ಎಗಳನ್ನು ತಂದು ಹಾಕಿದ್ದೀರಿ. ಅವರು 11 ಜನ ಇದ್ದಾರೆ. ಅದರ ಮೇಲೆ ಎಂ.ಎಲ್.ಸಿ ಗಳು ಇದ್ದಾರೆ, ಅದರ ಮೇಲೆ ಜಿಲ್ಲಾಧಿಕಾರಿಗಳು ಇದ್ದಾರೆ. ಅದರ ಮೇಲೆ ಚೀಫ್ ಎಕ್ಸಿಕ್ಯುಟಿವ್ ಇದ್ದಾರೆ. ಇವರೆಲ್ಲರ ಜೊತೆಗೆ ಒಟ್ಟು ಸಂಖ್ಯೆಯ 5ರಲ್ಲಿ 4ನೇ ಭಾಗ ಅಂದರೆ 20 ಜನ ಇದ್ದರೆ 16 ಜನರು ಚುನಾಯಿತರಾಗಬೇಕು. ಯಾರಿಂದ ಚುನಾಯಿತರಾಗಬೇಕು, ಮಂಡಲ್ ಪ್ರಧಾನರಿಂದ, ನಗರ ಪಾಲಿಕೆಯ ಅಧ್ಯಕ್ಷರಿಂದ ಆಯಾ ಪ್ರಮಾಣದಲ್ಲಿ ಆಗಬೇಕು. ಒಟ್ಟು ಸುಮಾರು ಅವರ ಯೋಜನೆಯ ಪ್ರಕಾರ ಚಿತ್ರದುರ್ಗ ಜಿಲ್ಲಾ ಯೋಜನಾ ಸಮಿತಿಗೆ ಈ ಕಾನೂನಿನಡಿಯಲ್ಲಿ ಆಹ್ವಾನಿತರನ್ನು ಮತ್ತು ಸದ್ಯರನ್ನು ಸೇರಿಸಿದರೆ 87 ಜನ ಆಗುತ್ತಾರೆ. ಈ ದೇಶದಲ್ಲಿ ಏನಾದರೂ 87 ಜನ ನಮ್ಮ ಜಿಲ್ಲೆಗೆ ಸಂಬಂಧಪಟ್ಟಂಥ ಯೋಜನೆಗಳನ್ನು ಚರ್ಚೆ ಮಾಡಿ ಜಾರಿಗೆ ತರಲಿಕ್ಕೆ ಏನಾದರೂ ಸಾಧ್ಯವಾಗುತ್ತದಾ? ಇದಕ್ಕೊಂದು ಇತಿಮಿತಿ ಇರಬೇಕು. ಈ ದೇಶದಲ್ಲಿರುವಂಥ ಶಾಸಕರುಗಳನ್ನೆಲ್ಲರನ್ನು ತೃಪ್ತಿ ಪಡಿಸಬೇಕಾ? ಈ ದೇಶದಲ್ಲಿರುವಂಥ ರಾಜ್ಯ ಸಭಾ, ಮತ್ತು ಲೋಕಸಭಾ ಸದಸ್ಯರನ್ನು ತೃಪ್ತಿಪಡಿಸಲಿಕ್ಕೆ ಈ ಜಿಲ್ಲಾಪರಿಷತ್ತುಗಳನ್ನು ಮಾಡಿದ್ದೀರಾ? ನಮ್ಮ ಹೊಣೆಗಾರಿಕೆ ಬೇರೆ ಇದೆ, ನಾವು ರಾಜ್ಯದಲ್ಲಿ ಯೋಜನೆಗಳನ್ನು ಮಾಡಲಿಕ್ಕೆ ರಾಷ್ಟ್ರದಲ್ಲಿ ಯೋಜನೆಗಳನ್ನು ಮಾಡಲಿಕ್ಕೆ ನಮಗೆ ಅಧಿಕಾರವನ್ನು ಜನರು ಕೊಟ್ಟಿದ್ದಾರೆ ಜಿಲ್ಲೆಯಲ್ಲಿ ಮತ್ತು ತಾಲ್ಲೂಕ್ ಪಂಚಾಯತಿಯಲ್ಲಿ, ಮಂಡಲ್ ಪಂಚಾಯತಿಯಲ್ಲಿ ಯೋಜನೆಯನ್ನು ತಯಾರು ಮಾಡುವಂತಹ ಅಧಿಕಾರವನ್ನು ನಾವು ಇವತ್ತಿನ ದಿವಸ ಹಸ್ತಾಂತರ ಮಾಡಬೇಕೆಂಬ ಮಾತನ್ನು ಹೇಳುತ್ತೇನೆ ಅಧಿಕಾರವನ್ನು ವಿಕೇಂದ್ರಿಕರಣ ಮಾಡಬೇಕೆಂಬ ಮಾತನ್ನು ಹೇಳುತ್ತೇವೆ. ಆದರೆ ಅದರ ಹೆಸರಿನಲ್ಲಿ ಅವರಿಗೆ ಅಧಿಕಾರವನ್ನು ಕೊಡದೆ ಆ ಸಮಿತಿಗ 87 ಜನರನ್ನು ಹಾಕಿ ಒಂದು ಜಿಲ್ಲಾ ಸಮಿತಿಯನ್ನು ಮಾಡಿದ್ದೀರಿ, ಇದು ಎಷ್ಟರಮಟ್ಟಿಗೆ ಸರಿ ಎಂಬ ಮಾತನ್ನು ನಾನು ನಿಮ್ಮನ್ನು ಕೇಳಲಿಕ್ಕೆ ಬಯಸುತ್ತೇನೆ. ಇದು ಸರಿಯಲ್ಲ, ಇದನ್ನು ನೀವು ಯಾವ ಹಂತದ ಜನರಿಗೆ ಯೋಜನೆಯನ್ನು ರೂಪು ಮಾಡುವಂತಹ ಅಧಿಕಾರವನ್ನು ಕೊಡಬೇಕೆಂದು ತಮ್ಮ ಮನಸ್ಸು ಇದೆ. ಯಾವ ಹಂತದ ಜನರಿಗೆ ಇದನ್ನು ಕಾರ್ಯರೂಪಕ್ಕೆ ತರುವಂತ ಅಧಿಕಾರವನ್ನು ಕೊಡಬೇಕೆಂದು ನಿಮಗೆ ಇಷ್ಟ ಇದೆ, ಅವರಿಗೆ ಪೂರ್ಣವಾದಂತಹ ಸಂಪೂರ್ಣವಾದಂಥಹ ಅಧಿಕಾರವನ್ನು ಕೊಡುವಂತಹ ಒಂದು ಪ್ರಯತ್ನವನ್ನು ನೀವು ಮಾಡಬೇಕಾಗಿದೆ. ಇವತ್ತಿನ ದಿವಸ ಈ ಯೋಜನಾ ಸಮಿತಿಯು ಏನಿದೆ ಇದು ಸರಿಯಾದಂತಹ ರೀತಿಯಲ್ಲಿ ಆಗಬೇಕಾಗಿದೆ. ಜಿಲ್ಲಾಪರಿಷತ್ತಿನ ಅಧ್ಯಕ್ಷರನ್ನು ಆಯ್ಕೆ ಮಾಡುತ್ತೀರಿ, ಅದಷ್ಟು ಬೇಗನೆ ಆಯ್ಕೆ ಮಾಡುತ್ತೀರಿ, ಅಂದರೆ ನಿಮಗೆ ಅನುಕೂಲವಾದಂತಹ ರೀತಿಯಲ್ಲಿ ಆಗಬೇಕಾ? Why can't you specify a specific date as early as possible. ಅಂತ ಏತಕ್ಕೆ ಹೇಳುತ್ತೀರಿ? 15 ದಿವಸದಲ್ಲಿ ಸಭೆಯನ್ನು ಕರೆಯಬೇಕೆಂದು ಹೇಳಲಿಕ್ಕೆ ಆಗುವುದಿಲ್ಲವಾ ? ಅಥವಾ ಒಂದು ತಿಂಗಳಲ್ಲಿ ಸಭೆಯನ್ನು ಕರೆಯಬೇಕೆಂದು ಹೇಳಲಿಕ್ಕೆ ಆಗುವುದಿಲ್ಲವಾ? ಗೆಜಿಟ್‌ನಲ್ಲಿ ನೋಟಿಫಿಕೇಶನ್ ಆದ 15 ದಿವಸದೊಳಗಾಗಿ ಕರೆಯಬೇಕೆಂದು ಹೇಳಲಿಕ್ಕೆ ಸಾಧ್ಯವಿಲ್ಲವಾ? ಒಂದು ನಿರ್ದಿಷ್ಟವಾಗಿ ಹೇಳಬೇಕಾಗುತ್ತದೆ. ಮೊದಲ ಸಭೆಯನ್ನು ಯಾರು ಕರೆಯಬೇಕು, ಯಾರು ಅಧ್ಯಕ್ಷತೆಯನ್ನು ವಹಿಸಬೆಕು ಎಂಬುದನ್ನು ಸಹ ನಿರ್ದಿಷ್ಟವಾಗಿ ಹೇಳಬೇಕಾಗುತ್ತದೆ. ನಿರ್ದಿಷ್ಟವಾದಂತಹ ರೀತಿಯಲ್ಲಿ ಇವತ್ತಿನ ದಿವಸ ತಾವು ತಿದ್ದುಪಡಿಯನ್ನು ತರುವುದಕ್ಕೆ ಪ್ರಯತ್ನ ಬೇಕಾಗುತ್ತದೆ. ಹೀಗೆ ಈ ಬಿಲ್ಲಿನಲ್ಲಿ ಅನೇಕ ಸಣ್ಣಪುಟ್ಟ ಲೋಪದೋಷಗಳಿವೆ. ಅವೆಲ್ಲವನ್ನೂ ಹೇಳುವುದಕ್ಕೆ ಸಮಯದ ಅವಕಾಶವಿಲ್ಲ. ಇವತ್ತಿನ ದಿವಸ ತಾವು ಏನು

ವಿಧೇಯಕವನ್ನು ತಂದಿದ್ದೀರಿ, ಇದರ ಮುಖ್ಯವಾದಂತಹ ಉದ್ದೇಶವೇನೆಂದು ನನಗನ್ನಿಸಿದೆ. ಇವತ್ತಿನ ದಿವಸ ಸುಪ್ರಿಂ ಕೋರ್ಟಿನಿಂದ ಸರ್ಕಾರಕ್ಕೆ ಒಂದು ಆದೇಶ ಬಂದಿದೆ. ಏನೆಂದರೆ ಚುನಾವಣೆಗಳನ್ನು ಜೂನ್ ಒಳಗೆ ಮಾಡಬೇಕೆಂದು ಬಂದಿದೆ. ಚುವಾವಣೆಯನ್ನು ಜೂನ್ ಒಳಗೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬ ನೆಪವನ್ನು ಮಾಡಿಕೊಂಡು ಚುನಾವಣೆಯನ್ನು ಮುಂದಕ್ಕೆ ಹಾಕುವುದಕ್ಕೆ ಆತುರಾತುರವಾಗಿ ಯಾವುದನ್ನು ಪರಿಶೀಲನೆ ಮಾಡದೆ, ಇದನ್ನು ನೆಪವಾಗಿ ಉಪಯೋಗಿಸಿಕೊಳ್ಳುವುದಕ್ಕೆ ಅವಸರವಸರವಾಗಿ ತಾವು ಈ ಒಂದು ಮಸೂದೆಯನ್ನು ತಂದಿದ್ದೀರಿ. ಉಪಾಧ್ಯಕ್ಷರೆ, ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ರೀತಿಯಾಗಿ ಅವಸರವರಸರವಾಗಿ ಈ ಕಾನೂನುನನ್ನು ತಾವು ಅಂಗೀಕಾರ ಮಾಡುವುದು ಸರಿಯಲ್ಲ. ಇವತ್ತಿನ ದಿವಸ ಇದನ್ನು ಕೆಲವಲ ಒಂದು ನೆಪವನ್ನಾಗಿ ತಂದಿದ್ದಾರೆ. ಇದರ ಬಗ್ಗೆ ಪೂರ್ಣವಾದಂತಹ ಚರ್ಚೆ ಯಾಗಬೇಕಾಗಿದೆ, ಮಾನ್ಯ ಉಪಾಧ್ಯಕ್ಷರೇ, ಈ ಬಿಲ್ಲನ್ನು ಅನೇಕ ಕಾರಣಗಳಿಂದ ವಿರೋಧ ಮಾಡಬೇಕಾಗುತ್ತದೆ. ಅದರ ಅರ್ಥ ನಾವು ಯಾರು ಸಹ ಈ ಒಂದು ಕೆಳಹಂತದಲ್ಲಿ ಅಧಿಕಾರ ವಿಕೇಂದ್ರೀಕರಣ ಮಾಡುವುದಂಥೆ ಪ್ರಯತ್ನಕ್ಕೆ ವಿರೋಧವೆಂದಲ್ಲ. ನಿಮ್ಮೆಲ್ಲರಿಗಿಂತಲೂ ಹೆಚ್ಚಾಗಿ ಅಧಿಕಾರವನ್ನು ವಿಕೇಂದ್ರೀಕರಣ ಮಾಡಬೇಕೆಂಬ ಆಸೆ ಇದೆ. ಆದರೆ ನೀವು ಏನೋ ಒಂದು ನೆಪವನ್ನು ಇಟ್ಟುಕೊಂಡು ದೋಷಪೂರಿತವಾದಂತಹ ರೀತಿಯಲ್ಲಿ ಇದನ್ನು ತಂದಿದ್ದೀರಿ, ಸಂವಿಧಾನಬಾಹಿರವಾದಂತಹ ರೀತಿಯಲ್ಲಿ ತಂದಿದ್ದೀರಿ, ವ್ಯವಹಾರಿಕ ವಲ್ಲದ ರೀತಿಯಲ್ಲಿ ತಂದಿದ್ದೀರಿ ವಿರೋಧಭಾಸದಿಂದ ಕೂಡಿದಂತಹ ರೀತಿಯಲ್ಲಿ ತಂದಿದ್ದೀರಿ. ಈ ಎಲ್ಲಾ ಕಾರಣದಿಂದಾಗಿ ತಮಗೂ ಗೊತ್ತಿದೆ. ನಾನು ಆಗಲೇ ಹೇಳಿದೆ ಒಂದು ಪಕ್ಷ ಸಂವಿಧಾನಬಾಹಿರ ಎಂದು ನಿಗದಿಯಾಗುವುದಾದರೆ ತಾವು ಹೇಳಿ, ಇವತ್ತಿನ ದಿವಸ ಅಡ್ವೋಕೇಟ್ ಜನರಲ್ ಇದ್ದಾರೆ. ನಾನು ಹೇಳಿದಂತಹ ಎರಡು ವಿಚಾರಗಳು ಸಂವಿಧಾನ ಬಾಹಿರವೆಂದು ಅವರು ಹೇಳಿದರೆ ಅದನ್ನು ಈ ಮನೆಯ ಮುಂದೆ ಹೇಳಲಿ. ಈ ಎಲ್ಲಾ ವಿಚಾರಗಳನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಈ ಸರ್ಕಾರಕ್ಕೆ ಇದರಲ್ಲಿ ನಿಜವಾದಂತಹ ಕಾಳಜಿ ಇಲ್ಲ. ನಿಜವಾದಂತಹ ಅಧಿಕಾರ ವಿಕೇಂದ್ರೀಕರಣ ಆಗಬೇಕೆಂಬ ಕಾಲಜಿ ಇಲ್ಲ. ಅದಕ್ಕೆ ಬದಲಾಗಿ ಏನಾದರೂ ಒಂದು ನೆಪವನ್ನಾಗಿ ಮಾಡಿಕೊಂಡು ಈ ಮಸೂದೆಂಯನ್ನು ಪಾಸ್ ಮಾಡಿಕೊಳ್ಳಬೇಕೆಂದಿದ್ದೀರಿ.

ಉಪಾಧ್ಯಕ್ಷರು : ತಾವು ಮುಗಿಸಿ, ಅದನ್ನೇ ಪುನರಾವರ್ತನ ಮಾಡಬೇಡಿ, ಈಗ ಒಂದೂವರೆ ಘಂಟೆ ಕಾಲ ಮಾತನಾಡಿದ್ದೀರಿ. ಇನ್ನು ಬಹಳ ಸದಸ್ಯರು ಮಾತನಾಡುವವರಿದ್ದಾರೆ. ಇದು ಸಾಯಂಕಾಲದ ಒಳಗೆ ಮುಗಿಯಬೇಕು.

ಶ್ರೀ ಹೆಚ್. ಏಕಾಂತಯ್ಯ : ತಾವು ಏಕೆ ಇಷ್ಟು ಇವಸರ ಮಾಡುತ್ತಿರಾ, ನಾವು ಏಕೆ ಇಲ್ಲಿಗೆ ಬಂದಿದ್ದೇವೆ? ಸರ್ಕಾರದ ಜೊತೆಗೆ ಶಾಮಿಲಾಗಿ ಕೆಲಸ ಮಾಡುವುದಕ್ಕೆ ಬಂದಿದ್ದವಾ? ನಾಲ್ಕು ಕೆ.ಜಿ.ಸಕ್ಕರೆ ಕಳ್ಳತನವಾದರೆ ಒಂದೂವರೆ ಘಂಟೆಗಳ ಕಾಲ ಮಾತನಾಡುತ್ತಾರೆ. ನಾವು ಏಕೆ ಮಾತನಾಡಬಾರದು?

ಶ್ರೀ ಆರ್.ವಿ.ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಬಹಳ ಕ್ಲಿಯರಾಗಿದೆ. ಏನೆಂದರೆ ಈ ಮಸೂದೆ ಇಲ್ಲಿ ಪಾಸ್ ಆಗಬಾರದೆಂದು ನಮ್ಮ ಇಚ್ಛೆ ಏನು ಇಲ್ಲ. ಅದು ಬೇರೆ ಪ್ರಶ್ನೆ, ಅದು ಯಾವ ಸಮಯದಲ್ಲಿ ಆಗಬೇಕೋ ಆಗ ಆಗುತ್ತದೆ. ಆದರೆ ಇಲ್ಲಿ ಯಾವ ಯಾವ ಸದಸ್ಯರು ಮಾತನಾಡಬೇಕೋ ಅವರಿಗೆಲ್ಲಾ ಅವಕಾಶ ಕೊಡಬೇಕಾಗುತ್ತದೆ. ಮಾತನಾಡಬಾರದೆಂದರೆ

ಅವರ ಅವಶ್ಯಕತೆಯೇ ಇರುವುದಿಲ್ಲ. ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇವೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಬಹಳ ಕ್ಲಿಯರಾಗಿದೆ. ಯಾವ ಸದಸ್ಯರಿಗೆ ಎಷ್ಟು ಹೊತ್ತು ಮಾತನಾಡಬೇಕೆಂದು ಸಮಯನಿಗದಿ ಆಗಿದೆಯೋ ಅಷ್ಟು ಹೊತ್ತು ಮಾತನಾಡಲಿ, ಅದ್ದರಿಂದ ದಯಮಾಡಿ ತಾವು ಸಹಕರಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಏಕಾಂತಯ್ಯನವರು ಹಿರಿಯ ಸದಸ್ಯರು. ಆದರೆ ಸಭಾಧ್ಯಕ್ಷರ ಮೇಲೆ ಸಿಟ್ಟು ಮಾಡಿಕೊಂಡು ಮಾತನಾಡುವುದು ಸರಿಯಲ್ಲ.

ಶ್ರೀ ಹೆಚ್.ಏಕಾಂತಯ್ಯ : ನಾವು ಸಭಾಧ್ಯಕ್ಷರಿಗೆ ಅಗೌರವ ಕೊಡುತ್ತೇವೆಂದಲ್ಲ ಅವರು ಆ ರೀತಿ ಪದೇ ಪದೇ ಹೇಳುವುದರಲ್ಲಿ ಅರ್ಥವಿಲ್ಲ. ನಾವು ಇಲ್ಲಿ ಪ್ರತಿಯೊಬ್ಬರಿಗೂ ಗೌರವವನ್ನು ಕೊಡುತ್ತೇವೆ. ನೀವು ಸಹ ಗೌರವ ಕೊಡುವುದನ್ನು ಕಲಿಯಬೇಕಾಗುತ್ತದೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಈ ಸಭೆಯಲ್ಲಿ ನಾವು ನೀವೇ ಗೌರವ ಕೊಡದೆ ಹೋದರೆ ನಮಗೆ ನಾವೇ ಗೌರವ ಕಳೆದುಕೊಂಡ ಹಾಗೆ ಆಗುತ್ತದೆ. ನಾವು ಈಗಾಗಲೇ ವಿವರಗಳನ್ನು ತಿಳಿಸಿದ್ದೇವೆ. ಮಾನ್ಯ ಅಧ್ಯಕ್ಷರು, ಈ ದಿವಸ ಈ ಕಾರ್ಯಕ್ರಮವನ್ನು ಮುಗಿಸಬೇಕೆಂಬ ಉದ್ದೇಶದಿಂದ ಹೇಳುತ್ತಿದ್ದಾರೆ. ಎಷ್ಟು ಜನ ಇದ್ದರೂ ಮಾತನಾಡಬಹುದು. ಆದರೆ ಪ್ರತಿಯೊಬ್ಬರೂ ಗಂಟೆಗಟ್ಟಲೆ ಮಾತಿನಾಡಿದರೆ ತೊಂದರೆಯಾಗುತ್ತದೆ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಹಿರಿಯ ಸಚಿವರಾದಂತಹ ರಾಮಸ್ವಾಮಿಯವರು ನಾನು ಹೇಳಿದ ಮಾತುಗಳನ್ನು ಒಪ್ಪದಿದ್ದರೆ ನನ್ನದೇನು ತಕರಾರು ಇಲ್ಲ. ಈ ದೇಶದಲ್ಲಿ ವಿರೋಧಪಕ್ಷದ ಸದಸ್ಯರಾಗಿ ಬಂದಿರುವುದು ಲೋಪದೋಷಗಳನ್ನು ಪತ್ತೆಮಾಡಿ ತಮ್ಮ ಗಮನಕ್ಕೆ ತರುವುದಕ್ಕಾಗಿ ಆ ಕೆಲಸ ಮಾಡಬೇಡಿ, ಬೇರೆ ಯಾವುದೋ ಕೆಲಸವನ್ನು ಮಾಡಿ ಎಂದರೆ ಅದನ್ನು ಮಾಡುವುದಕ್ಕೆ ನಾನು ತಯಾರಾಗಿಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಅದನ್ನು ನೀವು ಮಾಡಬಹುದು. ಆದರೆ ತಾವು ಕಾಲ ಮಿತಿಯನ್ನು ನೋಡಿಕೊಂಡು ಮಾಡಬೇಕು.

ಪ್ರೊ. ಎಂ.ಡಿ.ನಂಜುಂಡ ಸ್ವಾಮಿ : ಮಾನ್ಯ ಏಕಾಂತಯ್ಯನವರೇ, ತಮ್ಮ ಮೂಲಕ ನಾನು ಕಾನೂನು ಮಂತ್ರಿಗಳಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ, if you are trying to have a democracy without discussion. ಅಂತ ಹೇಳುವುದಾದರೆ ಅದನ್ನು ನಾವು ಒಪ್ಪಿಕೊಳ್ಳುವುದಕ್ಕೆ ತಯಾರು ಇದ್ದೇವೆ. ಏನು ಮಾಡುತ್ತಿದ್ದಾರೆ ಏಕಾಂತಯ್ಯನವರು ಈಗ? ಇದರಲ್ಲಿ ಏನು ದೋಷಗಳು ಇದೆ. ಅದನ್ನು ನಿಮಗೆ ತಿಳಿಸಿಕೊಡುತ್ತಿದ್ದಾರೆ. ಅದು ಪಾರ್ಲಿಮೆಂಟ್ ಎನ್ನುವ ಪದದಲ್ಲೇ ಇದೆ. Parliament is to discuss, which means discussion. But they want to run a Government without discussion. ಇಲ್ಲಿ ನಾವು ಏನು ಮಾಡುತ್ತಿದ್ದೇವೆ, ಇಲ್ಲಿಗೆ ನಾವು ಏಕೆ ಬರುತ್ತಿದ್ದೇವೆ? We are trying to contribute something so that

you can do certain things meaningfully. ಆ ಕಾರಣ ಇಂತಹ ಮುಖ್ಯವಾದ ವಿಷಯದಲ್ಲಿ, ನಾವು ಏನು ಪಂಚಾಯತ್ ಅಂತ ಸ್ತಂಬ ಕಟ್ಟುತ್ತೇವೆ ಏನು ಚರ್ಚೆ ನಡೆಯುತ್ತಿದೆ, ಅದು ಎಲ್ಲಿ ಇದೆ ಎಂದು ನಾನು 5-6 ದಿವಸಗಳಿಂದ ಹುಡುಕುತ್ತಿದ್ದೇನೆ. ನಾವು ಎಷ್ಟು ಸ್ಥಂಬದ ಮೇಲೆ ನಿಂತಿದ್ದೇವೆ ಎಂದು ಮುಂದೆ ನಾನು ಮಾತನಾಡುವಾಗ ಹೇಳುತ್ತೇನೆ. ಆ ಕಾರಣ ನಾವು ತಪ್ಪು ಮಾಡುತ್ತಿದ್ದೇವೆ. ಆ ತಪ್ಪನ್ನು ಏನು ತೋರಿಸುತ್ತಿದ್ದಾರೆ, ಅದು ಬೇಡ ಎಂದರೆ ಹೇಗೆ ?

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಒಂದು ಮಾತನ್ನು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. 72ನೇ ಸಂವಿಧಾನದ ತಿದ್ದುಪಡಿ ವಿಧೇಯಕ ಜಾಯಿಂಟ್ ಸೆಲೆಕ್ಷನ್ ಕಮಿಟಿಗೆ ಹೋಗೀಬಂದ ಮೇಲೆ, ದಹಲಿಯಲ್ಲಿ ಬೃಹದಾಕಾರವಾದಂತಹ ಗಲಭೆ ಇದ್ದ ಸಮಯದಲ್ಲಿ ಇಡೀ ಲೋಕಸಭೆ ಯಾವುದೇ ಚರ್ಚೆಯಲ್ಲಿದೆ ಸರ್ವಾನು ಮತದಿಂದ ಅಧ್ಯಕ್ಷರಿಗೆ ನೀವು ಪಾಸ್ ಮಾಡಿ ಎಂದು ಅನುಮತಿ ಕೊಟ್ಟರು. ಇದು ರಾಜ್ಯಸಬೆಯಲ್ಲೂ ಇದೇ ರೀತಿ ಎಲ್ಲಾ ಪಕ್ಷದವರೂ ಸೇರಿ ಅನುಮತಿ ಕೊಟ್ಟಿದ್ದರಿಂದ ಅದು ಸರ್ವಾನುಮತದಿಂದ ಪಾಸ್ ಆಯಿತು. ಹೀಗೆ ಇಡೀ ರಾಷ್ಟ್ರದ ಎಲ್ಲಾ ಪಕ್ಷಗಳು ಎಲ್ಲಾ ವಿಧದ ಶಕ್ತಿಗಳು ಸೇರಿ ಸರ್ವಾನುಮತದಿಂದ ಪಾಸ್ ಆಗಿರತಕ್ಕಂತಹ ಅನೇಕ ಅಂಶಗಳನ್ನು ಎಬಿಸಿಡಿ ಎಂದು ಮಾಡಿ ನಾವು ಇಲ್ಲಿ ಗಂಟೆಗಟ್ಟಲೆ ಚರ್ಚೆ ಮಾಡುವುದು ಬೇಡ ಎಂದು ಅರಿಕೆ ಮಾಡಿಕೊಂಡೆ, ಇದರ ಬಗ್ಗೆ ತಮ್ಮ ಸಲಹೆ ಕೇಳುವುದಕ್ಕೆ ನಾವು ಸದಾ ಸಿದ್ಧರಿದ್ದೇವೆ.

(ಗೊಂದಲ)

ಪ್ರೊ.ಎಂ.ಡಿ.ನಂಜುಂಡ ಸ್ವಾಮಿ : ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಕಾನೂನು ಮಂತ್ರಿಗಳು ಸರ್ವಾನುಮತದಿಂದ ಎಲ್ಲಾ ಪಕ್ಷಗಳು ಸೇರಿ ಅದನ್ನು ಇಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ ಎಂದು ಹೇಳಿದರು. ಆದ ಅಷ್ಟೇ ಕಾರಣಕ್ಕಾಗಿ ಇಷ್ಟು ದೋಷ ಪೂರಿತವಾಗಿರುವುದ್ದು. They have not applied their mind, that is the reason. ಅದು ಅಷ್ಟೊಂದು ದೋಷಪೂರಿತವಾಗಿ ಇದೆ. ಅವರು ಅಷ್ಟು ಸುಲಲಿತವಾಗಿ ಅದನ್ನು ಇಲ್ಲಿಗೆ ಕಳುಹಿಸಿಕೊಟ್ಟರಲ್ಲ, ಆದುದರಿಂದಲೇ ತಾಪತ್ರಯ ಬಂದಿರುವುದು.

ಶ್ರೀ ಹೆಚ್. ಏಕಾಂತಯ್ಯ : ನೀವು ಸಂವಿಧಾನದ ತಿದ್ದುಪಡಿಯನ್ನು ಸರ್ವಾನುಮತದಿಂದ ಇಲ್ಲಿ ಅಂಗೀಕಾರ ಮಾಡಿ ಎಂದು ಕೇಳಿದರೆ ಆ ಪ್ರಶ್ನೆ ಬೇರೆ. ಅದರಲ್ಲಿ ಲೋಪದೋಷಗಳು ಇದ್ದರೂ ಸಹ ಇವತ್ತಿನ ದಿವಸ ಸಂವಿಧಾನದ ತಿದ್ದುಪಡಿಗೆ ನಮ್ಮ ವಿರೋಧ ಇಲ್ಲ ಎನ್ನುವಂತಹ ಮಾತನ್ನು ಹೇಳಿದ್ದೇನೆ. ಇವತ್ತಿನ ದಿವಸ ಅಂತಹ ಲೋಪದೋಷಗಳು ಇದ್ದರೂ ಕೂಡ ನಾವು ಅದನ್ನು ಸರಿಪಡಿಸಿಕೊಳ್ಳಬಹುದು. ಆದರೆ ಆ ಸಂವಿಧಾನದ ತಿದ್ದುಪಡಿಗೆ ಅನುಗುಣವಾಗಿ ನೀವು ಕಾನೂನು ತಂದಿಲ್ಲ ಎಂದು ಹೇಳಿದರೂ ಸಹ ಅದನ್ನು ನೀವು ಹೇಳಬೇಡಿ ಎಂದು ಮಾನ್ಯ ರಾಮಸ್ವಾಮಿಯವರು ಹೇಳಿದರೆ ಅದಕ್ಕೆ ನನ್ನದೇನೂ ತಕರಾರು ಇಲ್ಲ. ಹಾಗೇ ಹೇಳಿದ್ದಾರೆ ತಾನೇ, ನಾನು ಇಲ್ಲಿಯವರೆಗೂ ಮಾಡಿದ್ದು ಅದೇ ಕೆಲಸವನ್ನೇ, ತಾವು ಇಲ್ಲಿ ಇದ್ದಿದ್ದರೆ ಗೊತ್ತಾಗುತ್ತಿತ್ತು. ಹೇಗೆ ಸಂವಿಧಾನದಲ್ಲಿ ಇರುವಂತಹ ವಿಧೇಯಕಕ್ಕೆ ವಿರುದ್ಧವಾಗಿ ನೀವು ಈ ಕಾನೂನನ್ನು ತಂದಿದ್ದೀರಿ ಎನ್ನುವುದಕ್ಕೆ 2-3 ಉದಾಹರಣೆಗಳನ್ನು ನಾನು ಕೊಟ್ಟಿದ್ದೇನೆ. ಅದಾದಮೇಲೆ

ನಾನು ಹೆಚ್ಚು ಪ್ರಸ್ತಾಪವನ್ನು ಮಾಡುವುದಕ್ಕೆ ಹೋಗುವುದಿಲ್ಲ. ಈವತ್ತಿನ ದಿವಸ ಏನು ಈ ಕಾನೂನು ಇದೆ ಈ ಕಾನೂನನನ್ನು ಹೇಗೆ ಅವಸರವಾಗಿ ಮಾಡಿದ್ದಾರೆ ಎನ್ನುವುದಕ್ಕೆ ಒಂದು ಕಾರಣ ಹೇಳಬೇಕಲ್ಲ. ಇದಕ್ಕೆ ಏನಾದರೂ ಇರಬೇಕು. ಏಕೆ ಅವಸರವಾಗಿ ಮಾಡಿದಿರಿ. ಅಥವಾ ನಿಮ್ಮ ಅಧಿಕಾರಿಗಳಾಗಲಿ, ನಿಮ್ಮ ಕಾನೂನು ಇಲಾಖೆಯಾಗಲಿ ನೋಡಿಲ್ಲ ಎಂಬ ಕಾರಣಕ್ಕಾಗಿ ನಾನು ಅನೇಕ ವಿಚಾರಗಳನ್ನು ಹೇಳಿದೆ. ಈಗ ಇನ್ನೊಂದು ತಮ್ಮ ಗಮನಕ್ಕೆ ತರುತ್ತೇನೆ. ಈಗ ಸೆಕ್ಷನ್ 131ರಲ್ಲಿ ಮತ ನೀಡುವ ವಿಧಾನ ಮತ್ತು ಚುನಾವಣೆ ಬಗ್ಗೆ ಇದೆ. ಉದಾಹರಣೆಗೆ ಹೇಳುವುದಾದರೆ, ಪ್ರತಿಯೊಬ್ಬ ಮತದಾರನು ಎಷ್ಟು ಸದಸ್ಯರು ಚುನಾಯಿತರಾಗಿರಬೇಕಾಗಿತ್ತೊ ಅಷ್ಟು ಮತಗಳನ್ನು ಹೊಂದಿರತಕ್ಕದ್ದು. ಯಾವುದೇ ಮತದಾರನು ಯಾವುದೇ ಒಬ್ಬ ವ್ಯಕ್ತಿಗೆ ಒಂದಕ್ಕಿಂತ ಹೆಚ್ಚು ಮತಗಳನ್ನು ಕೊಡತಕ್ಕದ್ದು ಅಲ್ಲ. ಇದು ಯಾವಾಗ ಬರುತ್ತದೆ ಸ್ವಾಮಿ? ಇದು ಸಿಂಗಲ್ ಮೆಂಬರ್ ಕಾನ್ಸ್‌ಟಿಟ್ಯೂಯನ್ಸಿಯಲ್ಲಿ ಬರುತ್ತದೆಯೇ? ಇದನ್ನು ನೀವು ಏಕೆ ರಿಪಿಟ್ ಮಾಡಿದಿರಿ ಎಂದರೆ ಯಾವುದನ್ನು ಮಂಡಲ ಪಂಚಾಯಿತಿಗೆ ಅಥವಾ ಗ್ರಾಮ ಪಂಚಾಯಿತಿಗೆ ಈ ಒಂದು ವಿಧೇಯಕವನ್ನು ಸೇರಿಸಬೇಕಾಗಿತ್ತೋ ಅಂತಹ ವಿಧೇಯಕವನ್ನು ಸಿಂಗಲ್ ಮೆಂಬರ್ ಕಾನ್ಸ್‌ಟಿಟ್ಯೂಯನ್ಸಿಯಲ್ಲಿ ಏನೋ ತಾಲ್ಲೂಕು ಸಮಿತಿ ಎಂದು ಮಾಡಿ ಅದಕ್ಕೊ ಇದನ್ನು ಸೇರಿಸಿದಿರಿ. ಇದನ್ನು ಏಕೆ ಸೇರಿಸಿದಿರಿ ಸ್ವಾಮಿ? ಇದನ್ನು ಏನಾದರೂ ಯೋಚನೆ ಮಾಡಿದ್ದೀರಾ? ಅಲ್ಲಿ ಒಂದಕ್ಕಿಂತ ಹೆಚ್ಚು ಮತ ಕೊಡತಕ್ಕದು ಅಲ್ಲ ಎಂದಿದೆ, ಆದರೆ ಅಲ್ಲಿ ಎಲೆಕ್ಟ್ ಮಾಡಬೇಕಾಗಿರುವುದು ಒಬ್ಬರನ್ನೇ. ಇದನ್ನು ನಾನು ಉದಾಹರಣೆಗೆ ಹೇಳಿದೆ ಅಷ್ಟೇ, ಇಂತಹ ಅವ್ಯವಹಾರಿಕವಾದಂತಹ ಲೋಪದೋಷಗಳಿಂದ ಕೂಡಿದೆ ಎಂಬ ಮಾತನ್ನು ನಿಮ್ಮ ಗಮನಕ್ಕೆ ತರುವಂತಹ ಪ್ರಯತ್ನವನ್ನು ಮಾಡುತ್ತಿರುವಾಗ ನೀವು ಇಲ್ಲ ಇಲ್ಲಾ, .ನಮ್ಮದೆಲ್ಲಾ ಸರಿಯಾಗಿದೆ ಎಂದು ಹೇಳುವುದಾದರೆ,ನಮಗೆ ಅನುಮತಿ ಕೊಟ್ಟಿಲ್ಲವೆಂದರೆ ಅದಕ್ಕೆ ನಾವು ಏನು ಸ್ವಾಮಿಮಾಡಬೇಕು? ನೀವು ಇದನ್ನು ಸಹ ಹೇಳಬಾರದು ಎಂದರೆ ಇನ್ನು ಯಾವುದನ್ನು ಹೇಳಬೇಕು. ಕೇವಲ ನಿಮಗೆ ಪ್ರಿಯವಾದಂತವಸ್ತುಗಳನ್ನೇ ಹೇಳಬೇಕೇ? ಅಪ್ರಿಯವಾದಂತಹ ಯಾವ ವಿಷಯಗಳನ್ನೂ ಹೇಳಬಾರದೇ? ಅದು ನಮ್ಮ ಕೆಲಸವೇ ಅಲ್ಲ. ನಾನು ಏನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಸನ್ಮಾನ್ಯ ಉಪಾಧ್ಯಕ್ಷರೇ, ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಅಂದರೆ ನಾವು ನಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡುವುದಕ್ಕೆ ನೀವು ರಕ್ಷಣೆಗೆ ಬರಬೇಕಾಗುತ್ತದೆ. ನೀವು ಬೇಕಾದರೆ ಆ ಕಡೆಯ ಸದಸ್ಯರಿಗೆ ಹೇಳಬಹುದು. ಏಕೆಂದರೆ ಅವರು ತಮ್ಮತಮ್ಮ ಶಾಸಕಾಂಗ ಪಕ್ಷದ ಸಭೆಯಲ್ಲಿ ಹೇಳಿರುತ್ತಾರೆ. ಅಲ್ಲಿ ಅವರಿಗೆ ಹೆಚ್ಚು ಅವಕಾಶ ಇರುತ್ತದೆ. ನೀವು ಇಲ್ಲಿ ಅವರಿಗೆ ಕಡಿಮೆ ಅವಕಾಶವನ್ನು ಕೊಡುವುದರ ಮುಖಾಂತರ, ತಾವು ಏನಾದರೂ ಪ್ರಯತ್ನ ಮಾಡಿದರೆ ನನ್ನದೇನೂ ಅಭ್ಯಂತರವಿಲ್ಲ. ಇವತ್ತಿನ ದಿವಸ ನಾನೇನು ನಿಮ್ಮ ಮೇಲೆ ಆರೋಪ ಮಾಡುತ್ತಿಲ್ಲ. ಆದರೆ ಇವತ್ತಿನ ದಿವಸ ನಿಮ್ಮ ರಕ್ಷಣೆ ನಮಗೆ ಹೆಚ್ಚು ಅವಶ್ಯಕತೆ ಇದೆ. ವಿರೋಧ ಪಕ್ಷದ ಸದಸ್ಯರಾಗಿ ನಾವು ನಮ್ಮ ಕೆಲಸವನ್ನು ಮಾಡುವಾಗ ತಾವು ನಮಗೆ ಹೆಚ್ಚಿನ ಅನುಕಂಪ ತೋರಿಸಬೇಕಾಗಿದೆ, ಮತ್ತು ಹೆಚ್ಚಿನ ರಕ್ಷಣೆಯನ್ನು ಕೊಡಬೇಕಾಗಿದೆ. ಆ ದೆಸೆಯಿಂದ ಈ ಮಾತನ್ನು ಹೇಳಿದ್ದೇನೆ ಹೊರತು ಮತ್ತೇನು ಇಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಈಗ ಹೇಳಿರತಕ್ಕಂಥ ಎಲ್ಲಾ ವಿಚಾರಗಳನ್ನು ತಾವು ಗಮನಿಸಿದರೆ ಈ ಒಂದು ಕಾನೂನು ಏನು ಇದೆ, ಇದು ಸಂವಿದಾನ ಬಾಹಿರವಾದಂಥ ಕಾನೂನಾಗಿದೆ. ವ್ಯವಹಾರಿಕವಲ್ಲದಂಥ ರೀತಿಯಲ್ಲಿ ಕೂಡಿದೆ. ವಿರೋಧಾಭಾಸಗಳಿಂದ ಕೂಡಿದೆ. ಅನೇಕ ಲೋಪದೋಷಗಳಿಂದ ಕೂಡಿದೆ. ಕೇವಲ ಒಂದು ನೆಪಕ್ಕಾಗಿ ನೀವು ಈ ಕಾನೂನನ್ನು ತಂದಿದ್ದೀರಿ. ಏನು

ನೆಪ ಎಂದರೆ ಈ ಒಂದು ಕಾನೂನು ಪಾಸಾಗಿದೆ ಎಂಬ ಒಂದೇ ಒಂದು ಅಂಶವನ್ನು ನೀವು ಸುಪ್ರಿಂ ಕೋರ್ಟಿನ ಅಥವಾ ರಾಜ್ಯಹೈಕೋರ್ಟಿನ ಮುಂದೆ ಇಟ್ಟು ಚುನಾವಣೆಯನ್ನು ಮುಂದಕ್ಕೆ ಹಾಕಬೇಕು ಎನ್ನತಕ್ಕಂಥ ಪ್ರಯತ್ನವಾಗಿದೆಯೇ ಹೊರತಾಗಿ ಇಂಥ ಲೋಪದೋಷ ಪೂರಿತವಾದಂಥ ಮಸೂದೆಯನ್ನು ತಂದು ಚುನಾವಣೆ ಮಾಡಲಾರದ ಹಾಗೆ ಒಂದುಪರಿಸ್ಥಿತಿಯನ್ನು ನಿರ್ಮಾಣ ಮಾಡುವುದೇ ನಿಮ್ಮ ಉದ್ದೇಶವಾಗಿದೆ ಎಂಬ ಮಾತನ್ನು ಹೇಳಿ ಈ ಒಂದು ಮಸೂದೆಯನ್ನು ಪೂರ್ಣವಾಗಿ ವಿರೋಧಿಸಿ ನನ್ನ ಮಾತನ್ನು ಪೂರೈಸುತ್ತೇನೆ.

*ಶ್ರೀ ಬಿ.ಹೆಚ್.ಬನ್ನಿಕೋಡ್ : (ಹಿರೆಕೆರೂರ್) : ಮಾನ್ಯ ಅಧ್ಯಕ್ಷರೇ ಈ ಒಂದು ಕರ್ನಾಟಕ ರಾಜ್ಯದ ಪಂಚಾಯತ್ ವಿಧೇಯಕ 1993 ಏನಿದೆ ಇದರಿಂದ ಅಧಿಕಾರ ವಿಕೇಂದ್ರೀಕರಣವನ್ನು ಮಾಡುತ್ತಿದ್ದೇವೆ. ಇದು ಕ್ರಾಂತಿಕಾರಿ ಎಂದು ಏನು ಪಂಚಾಯತ್ ಸಚಿವರು ಹೇಳಿದ್ದಾರೆ, ಇದನ್ನು ನೋಡಿದರೆ ಅಧಿಕಾರ ವಿಕೇಂದ್ರೀಕರಣವೆಂಬ ಹೆಸರಿನಲ್ಲಿ ಹಾಗೂ ಈ ಒಂದು ಸಂವಿಧಾನ ತಿದ್ದುಪಡಿಯ ಆಧಾರದ ಮೇಲೆ ಅನಿವಾರ್ಯವಾಗಿ ಈ ಒಂದು ವಿಧೀಯಕವನ್ನು ತಂದು ರಾಜ್ಯಸರ್ಕಾರ ಸ್ಥಳೀಯ ಸಂಸ್ಥೆಗಳ ಮೇಲೂ ಸಹಿತ ಪಂಚಾಯತ್ ರಾಜ್ಯ ಸಂಸ್ಥೆಗಳ ಮೇಲೂ ಸಹಿತ ತನ್ನದೇ ಆದ ನಿಯಂತ್ರಣವನ್ನು ಇಟ್ಟುಕೊಳ್ಳುವುದಕ್ಕೆ ನೇರವಾಗಿ ತಂದಿರತಕ್ಕಂಥ ಹಾಗೂ ತನ್ನ ನಿಯಂತ್ರಣಕ್ಕೆ ಅನುಕೂಲವಾಗಲಿ ಎಂದು ರಾಜ್ಯಸರ್ಕಾರ ಇದನ್ನು ತಂದಿರತಕ್ಕಂಥದ್ದು ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಏಕೆಂದರೆ ಇಲ್ಲಿ ಇರತಕ್ಕಂಥ ಗ್ರಾಮಪಂಚಾಯಿತಿ ಆಗಲೀ ತಾಲ್ಲೂಕು ಪಂಚಾಯಿತಿ ಆಗಲೀ ಜಿಲ್ಲಾ ಪಂಚಾಯಿತಿ ಆಗಲೀ, ಇದರ ಸಾರಾಂಶ ಹೇಳಬೇಕೆಂದರೆ ಈ ಬಿಲ್ಲಿನಲ್ಲಿರತಕ್ಕಂಥದ್ದು ಹೇಳಬೇಕೆಂದರೆ ಗ್ರಾಮ ಮಟ್ಟದ, ತಾಲ್ಲೂಕು ಮಟ್ಟದ, ಜಿಲ್ಲಾ ಮಟ್ಟದ ಸಲಹಾ ಸಮಿತಿಗಳಾಗಿವೆಯೇ ವಿನಃ ಅಲ್ಲಿ ಇರತಕ್ಕಂಥ ಕರ್ತವ್ಯಗಳನ್ನು ಕಾರ್ಯರೂಪದಲ್ಲಿ ತರುವುದಕ್ಕೆ ಅವರಿಗೆ ಯಾವುದೇ ನಿಯಂತ್ರಣ ಅಲ್ಲಿರತಕ್ಕಂಥ ಸಿಬ್ಬಂದಿಯ ಮೇಲೆ ಇಲ್ಲದೇ ಹೋಗಿರುವುದರಿಂದ ಆ ಕಾರ್ಯ ಮಾಡುವುದಕ್ಕೆ ಅವರಿಗೆ ಸಾಧ್ಯವಾಗುವುದಿಲ್ಲ. ಏಕೆಂದರೆ ಇವತ್ತು ಮಂಡಲಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತನ್ನು ತರುವ ಉದ್ದೇಶ ಸ್ಪಷ್ಟವಾಗಿ ಸಂವಿಧಾನದ ತಿದ್ದುಪಡಿಯಡಿಯಲ್ಲಿರತಕ್ಕಂಥ ಒಂದು ನಿಜವಾದ ನೀತಿ ತತ್ವ ಎಂದರೆ ಲೋಕಸಭೆಯ ಸದಸ್ಯರಾಗಲಿ, ಈ ಒಂದು ವಿಧಾಸಭೆಗೆ ಆಯ್ಕೆಯಾದಂಥ ಶಾಸಕರಾಗಲಿ, ಇವರ ಕರ್ತವ್ಯ ಶಾಸನವನ್ನು ಮಾಡತಕ್ಕಂಥ ನೀತಿನಿಯಮಗಳನ್ನು ರೂಪಿಸತಕ್ಕಂಥ ಕರ್ತವ್ಯವೇ ವಿನಃ ಕಾರ್ಯಾಚರಣೆ ಇವರ ಕೆಲಸವಲ್ಲ ಎನ್ನುವುದನ್ನು ಇಲ್ಲಿ ನಾವು ತಿಳಿದುಕೊಳ್ಳಬೇಕಾಗಿದೆ. ಇವತ್ತು ಏನಾಗಿದೆ ಎಂದರೆ ನಾವು ಎಂ.ಪಿ.ಯಾಗಿ ಏನು ಮಾಡಬೇಕು. ಎಂ.ಎಲ್.ಎ. ಆಗಿ ನನ್ನ ಕ್ಷೇತ್ರದಲ್ಲಿ ಏನೆಲ್ಲಾ ನಡೆದಿದೆ, ಅದು ನನ್ನ ಕಣ್ಣೆದುರು ನಡೆಯಬೇಕು, ನನ್ನ ಅಧೀನದಲ್ಲಿ ನಡೆಯಬೇಕು ಅನ್ನುವುದು ನಿಜವಾದ ಪ್ರಜಾಪ್ರಭುತ್ವ ಉದ್ದೇಶವಲ್ಲ, ಅಧಿಕಾರ ವಿಕೇಂದ್ರೀಕರಣದ ನೀತಿಯೂ ಅಲ್ಲ . ಪಾರ್ಲಿಮೆಂಟ್ ಹಾಗೂ ವಿಧಾನಸಭೆಗೆ ಆಯ್ಕೆಯಾಗಿರತಕ್ಕಂಥ ನಾವು ಶಾಸನಗಳನ್ನು ರಚನೆ ಮಾಡುವಲ್ಲಿ ಹೆಚ್ಚಿನ ಸಮಯವನ್ನು ಕಳೆಯಬೇಕು ಹಾಗೂ ಚರ್ಚೆ ಮಾಡುವಲ್ಲಿ ಹೆಚ್ಚಿನ ಸಮಯವನ್ನುಕಳೆಯಬೇಕಾಗುತ್ತದೆ. ರಾಜ್ಯಸರ್ಕಾರ ಕೇಂದ್ರ ಸರ್ಕಾರಗಳು ರಾಷ್ಟ್ರದ ರಾಜ್ಯದ ನೀತಿಯನ್ನು ಹಾಗೂ ಕಾರ್ಯಕ್ರಮಗಳನ್ನು ಹಾಕಿಕೊಡಬೇಕಾಗುತ್ತದೆ. ಅವುಗಳನ್ನು ಕಾರ್ಯಾಚರಣೆಯಲ್ಲಿ ತರುವುದಕ್ಕೆ ಜಿಲ್ಲಾಮಟ್ಟದಲ್ಲಿ, ತಾಲ್ಲೂಕುಮಟ್ಟದಲ್ಲಿ ಮತ್ತು ಗ್ರಾಮ ಮಟ್ಟದಲ್ಲಿ ಇವತ್ತು ಗ್ರಾಮಪಂಚಾಯಿತಿಗಳನ್ನು ಅಥವಾ ತಾಲ್ಲೂಕು ಪಂಚಾಯಿತಿಗಳನ್ನು, ಅಥವಾ ಜಿಲ್ಲಾ ಪರಿಷತ್ತುಗಳನ್ನು ತರುವುದು ಮೂಲ ಉದ್ದೇಶವೇ ವಿನಃ ಕೇವಲ ಈ ರೀತಿ ಸಲಹಾ

ಸಮಿತಿಗಳ ರೀತಿಯಲ್ಲಿ ತಂದರೆ ಇದರ ಉದ್ದೇಶ ಸಫಲವಾಗುವುದಿಲ್ಲ. ಏಕೆಂದರೆ ನಾವು ಏನು ಇವತ್ತು ಶಾಸಕರುಗಳು ಶಾಸನವನ್ನು ಮಾಡುತ್ತಿದ್ದೇವೆ, ಏನು ಇವತ್ತು ಸರ್ಕಾರ ಇದೆ, ಅಥವಾ ಮತ್ತು ಶಾಸಸಭೆಯಲ್ಲಿ ಇರತಕ್ಕಂಥವರಿಗೆ ಇನ್ನೂ ಅಧಿಕಾರದ ವ್ಯಾಮೋಹ ಹೋಗಿಲ್ಲ. ಸಂಪೂರ್ಣವಾಗಿ ನಮ್ಮ ಹಿಡಿತದಲ್ಲಿ ಹಳ್ಳಿಯಿಂದ ಹಿಡಿದು ಡಿಲ್ಲಿಯವರೆಗೆ ಅಧಿಕಾರ ನಮ್ಮ ನಿಯಂತ್ರಣದಲ್ಲಿರಬೇಕೆನ್ನುವ ಒಂದು. ವೆಸ್ಟೆಡ್ ಇಂಟರೆಸ್ಟ್. ಎಂದು ಏನು ಹೇಳಬಹುದೋ ಅದರಿಂದಾಗಿ ಇಲ್ಲಿ ಕಾನೂನಿನಲ್ಲಿ ಸ್ಪಷ್ಟವಾಗಿ ಅಧಿಕಾರವನ್ನು ಗ್ರಾಮಮಟ್ಟಕ್ಕೆ ಕೊಡುವುದಕ್ಕೆ ಇನ್ನೂ ಸಿದ್ದರಾಗಿಲ್ಲ ಎಂದು ಸ್ಪಷ್ಟವಾಗಿ ಕಾಣುತ್ತಿದೆ. ಅದಕ್ಕಾಗಿ ಅನಿವಾರ್ಯವಾಗಿ ಇದನ್ನು ವಿರೋಧ ಮಾಡಬೇಕಾಗುತ್ತದೆ. ಆ ನಂತರ ಈ ಮಂಡಲ ಪಂಚಾಯಿತಿಗಳನ್ನು ಇಲ್ಲಿ ಯಾವ ರೀತಿ ಅವುಗಳನ್ನು ಯಾವ ಜನಸಂಖ್ಯೆ ಆಧಾರದ ಮೇಲೆ ಮಾಡಬೇಕು ಏನು ಎಂದು ನೋಡಿದರೆ 5 ರಿಂದ ಏಳು ಸಾವಿರವೆಂದು ಒಂದು ಕಡೆ ಹೇಳಿದರು.

3.50 ಪಿ.ಎಂ

ಅದೇ ಮಲೆನಾಡು ಪ್ರದೇಶಕ್ಕೆ 2500 ಜನಸಂಖ್ಯೆಗೆ ಒಂದು ಪಂಚಾಯತಿ ಎಂದು ಹೇಳುತ್ತಿದ್ದಾರೆ, ಇನ್ನೊಂದು ಕಡೆ ಇದು ಕಡಿಮೆ ಮಾಡಬಹುದು ಎಂದು ಹೇಳುತ್ತಿದ್ದಾರೆ. ಅಂದರೆ ಇದರಲ್ಲಿ ಕಾನೂನು ಸ್ಪಷ್ಟವಾಗಿ ಇರಬೇಕು, ಕಾನೂನು ನಿರ್ದಿಷ್ಟವಾಗಿ ಇರಬೇಕು. ಅಧಿಕಾರಿಗಳ ಕೈಯಲ್ಲಿ ಕಾನೂನನ್ನು ಕೊಟ್ಟು ಜನರನ್ನು ಸಾರ್ವಜನಿಕರನ್ನು ಇವತ್ತು ಅವರ ಕೈಗೊಂಬೆಯಾಗಿ ಕುಣಿಯಲಿಕ್ಕೆ ಮಾಡತಕ್ಕ ಕಾನೂನು ಎಲ್ಲಿ ಇದೆ? ನಿರ್ದಿಷ್ಟವಾಗಿ ಹೇಳಿ. ಎಲ್ಲಿ ಇವತ್ತು ವಿರಳವಾಗಿ ಜನಸಂಖ್ಯೆ ಇದೆ, ಅಲ್ಲಿ ನಿರ್ದಿಷ್ಟವಾಗಿ ಎರಡು ಸಾವಿರವೋ ಎರಡೂವರೆ ಸಾವಿರವೋ ಮೂರು ಸಾವಿರವೋ ಇರಬೇಕು, ಇಂತಹ ಜಿಲ್ಲೆಯಲ್ಲಿ, ತಾಲ್ಲೂಕಿನಲ್ಲಿ ಎಂದು ಹೇಳಬಹುದಿತ್ತು. ಎಲ್ಲಿ ಜನಸಂಖ್ಯೆ ಹೆಚ್ಚು ಇದೆ ಅಂತಹ ಗ್ರಾಮಗಳಲ್ಲಿ ಇಂತಿಷ್ಟು ಜನಸಂಖ್ಯೆಗೆ, ನಾಲ್ಕು ಸಾವಿರ, ಐದು ಸಾವಿರ ಎಂದು ನಿರ್ದಿಷ್ಟವಾಗಿ ಹೇಳಬಹುದಿತ್ತು. ಇವತ್ತು ಹೇಳುತ್ತಿದ್ದಾರೆ ಬೆಳಗಾಂ ಧಾರವಾದ ಜಿಲ್ಲೆ ಉಳಿದು ಎಲ್ಲಾ ಕಡೆ ಸಹಿತ ಅಲ್ಲಿ ಐದರಿಂದ ಏಳು ಸಾವಿರ ಇರಬಹುದು ಅಥವಾ ಇನ್ನೂ ಕಡಿಮೆ ಇರಬಹುದು ಎಂದು. ಅದಕ್ಕೆ ಸರ್ಕಾದಿಂದ ಪೂರ್ವಾನುಮತಿ ತೆಗೆದುಕೊಳ್ಳಬೇಕು. ಅಂದರೆ ಒಂದು ಕಡೆ ಏಳು ಸಾವಿರಕ್ಕೆ ಒಂದು ಗ್ರಾಮ ಪಂಚಾಯತಿ ಮಾಡುತ್ತಿದ್ದಾರೆ, ಅದೇ ಪಕ್ಕದಲ್ಲಿ ಏಕೆ ಎರಡೂ ವರೆ ಸಾವಿರಕ್ಕಿಂತ ಕಡಿಮೆ ಇರತಕ್ಕ ಜನಸಂಖ್ಯೆಗೆ ಒಂದು ಪಂಚಾಯತಿ ಎಂದು ಮಾಡುತ್ತಿದ್ದಾರೆ. ಈ ಒಂದು ಅನುಕೂಲತೆ ಅಥವಾ ತಾರತಮ್ಯ ಈ ಮಸೂದೆಯಲ್ಲಿದೆ. ಇದನ್ನು ಏಕೆ ತಂದರೋ ನನಗೆ ಗೊತ್ತಿಲ್ಲ. ಇದನ್ನು ತರಲಿಕ್ಕೆ ಏಕೆ ಯೋಚನೆ ಮಾಡಿದರೋ ಗೊತ್ತಾಗಲಿಲ್ಲ. ಮಲೆನಾಡಿನಲ್ಲಿ ಜನಸಂಖ್ಯೆ ವಿರಳ ಇದ್ದರೆ ಹೇಳಿ. ಅಲ್ಲಿ ಎರಡೂವರೆ ಸಾವಿರ ಜನರಿಗೆ ಒಂದು ಗ್ರಾಮ ಪಂಚಾಯತಿ ಇರಬಹುದು ಎಂದು ಹೇಳಬಹುದಿತ್ತು. ಇಲ್ಲಿ ಆ ಪ್ರಶ್ನೆ ಇಲ್ಲ, ಜನಸಂಖ್ಯೆ ಹೆಚ್ಚು ನಿರ್ದಿಷ್ಟವಾಗಿ ನೀವು ಹೇಳಬಹುದಿತ್ತು. ಅಥವಾ ಎಷ್ಟು ಕ್ಷೇತ್ರ ಇರಬೇಕು ಎಂದು ಹೇಳಬಹುದಿತ್ತು. ಯಾವುದೇ ನಿರ್ದಿಷ್ಟವಾದಂತಹ ಸ್ಪಷ್ಟವಾದಂತಹ ಕಾನೂನನ್ನು ತಂದಿಲ್ಲ. ಇದರಿಂದ ಗ್ರಾಮಗಳಲ್ಲಿ ಮತ್ತು ತಾಲ್ಲೂಕುಗಳಲ್ಲಿ ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ ತಾರತಮ್ಯವನ್ನು ಮಾಡಲಿಕ್ಕೆ ಅವಕಾಶ ಆಗುತ್ತದೆ. ಅಷ್ಟೆ, ಅಧಿಕಾರಿಗಳ ಮುಖಾಂತರ ಸರ್ಕಾರ ರಾಜಕೀಯ ಮಾಡಲಿಕ್ಕೆ ತನ್ನ ಹಸ್ತಕ್ಷೇಪವನ್ನು ಮಾಡಲಿಕ್ಕೆ ಸರ್ಕಾರ ಇಲ್ಲಿ ಅವಕಾಶವನ್ನು ಮಾಡಿಕೊಂಡಿದೆ ಎಂದು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಈಗಲಾದರೂ ಮಾನ್ಯ ಸಚಿವರು ಇದನ್ನು ಸರಿಪಡಿಸುವುದಕ್ಕೆ ಪ್ರಯತ್ನಮಾಡಲಿ. ಎರಡೂವರೆ ಸಾವಿರಕ್ಕಿಂತ ಕಡಿಮೆ ಇದ್ದರೂ ಮಾಡಬಹುದು, ಹೆಚ್ಚಿಗೆ ಇದ್ದರೂ ಮಾಡಬಹುದು ಎಂದು

ಇರುವುದು ಬೇಡ. ಹೇಳಿ, ಎಲ್ಲಿ ಜನಸಂಖ್ಯೆ ಕಡಿಮೆ ಇದೆ, ಅಲ್ಲಿ ಎರಡು ಸಾವಿರ ಎನ್ನಿ, ಎರಡೂವರೆ ಸಾವಿರ ಎನ್ನಿ, ನಿರ್ದಿಷ್ಟವಾಗಿ ಹೇಳಿ, ಯಾವ ಜಿಲ್ಲೆ ಯಾವ ತಾಲ್ಲೂಕು ಎಂದು. ಎಲ್ಲಿ ಜನಸಂಖ್ಯೆ ದಟ್ಟವಾಗಿದೆ, ಹೆಚ್ಚಿಗೆ ಇದೆ ಅಲ್ಲಿ ಐದು ಸಾವಿರ ಅಥವಾ ಏಳು ಎಂದು ಹೇಳಿ. ಸಂಪೂರ್ಣವಾಗಿ ಅಧಿಕಾರಗಳಿಗೆ ಅಧಿಕಾರ ಕೊಟ್ಟನಂತರ ಸರ್ಕಾರ ಏನು ಹೇಳುತ್ತದೆ ಅದೇ ಒಂದು ಪಂಚಾಯತಿ ಎಂದರೆ ಹೇಗೆ ಇದು? ಇದು ಸರಿಯಲ್ಲ ಇದನ್ನು ಸರಿಪಡಿಸಬೇಕು ಎಂದು ಮಾನ್ಯ ಉಪಾಧ್ಯಕ್ಷರ ಮೂಲಕ ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ. ಇದನ್ನು ಏನಾದರೂ ಸರಿಪಡಿಸುತ್ತೀರಾ? ಅಥವಾ ಜಿಲ್ಲಾಧಿಕಾರಿಗಳು ಹೇಳಿದ್ದೇ ಆಗಬೇಕು ಎಂದು ಹೇಳುತ್ತೀರಾ ಅದನ್ನು ತಾವು ದಯವಿಟ್ಟು ಹೇಳಿ.

ಶ್ರೀ ಎಂ. ವೈ ಘೋರ್ಪಡೆ : ಐದು ಸಾವಿರ ಐದು ಸಾವಿರದಿಂದ ಏಳು ಸಾವಿರ ಎಂದು ಹೇಳಿದ್ದೇವೆ. ಇದನ್ನು ಸ್ವಲ್ಪ ಹೆಚ್ಚು ಕಡಿಮೆ ಮಾಡುವುದಕ್ಕೆ ಡಿಸಿ ಅವರಿಗೆ ಅಧಿಕಾರ ಕೊಟ್ಟಿದೆ. ಅವರು ನೇರವಾಗಿ ಕೇಳಿದಾಗ ನಾವು ಉತ್ತರ ಹೇಳಬೇಕಾಗುತ್ತದೆ. ಏಕೆಂದರೆ ಒಂದು ಹಳ್ಳಿ ಏನು ಇದೆ ಅದನ್ನು ವಿಭಜನೆ ಮಾಡಬಾರದು ಎಂಬ ವಿಚಾರ ಕೂಡ ಇದೆ. ಅಕಸ್ಮಾತ್ ಒಂದು ಹಳ್ಳಿಯಲ್ಲಿ ಜನಸಂಖ್ಯೆ 4500 ಇದ್ದರೆ ಅಥವಾ ಏಳು ಸಾವಿರ ಇದ್ದರೆ ಅಲ್ಲಿ ಸ್ವಲ್ಪ ನಾವು ಅದನ್ನು ವಿಭಜನೆ ಮಾಡುವಂತೆ ಜನಸಂಖ್ಯೆಯಲ್ಲಿ ಸ್ವಲ್ಪ ಜಾಸ್ತಿ ಮಾಡಿಕೊಳ್ಳುವುದಕ್ಕೆ ಅವಕಾಶ ಇರಬೇಕು. ಬಹಳ ರಿಜಿಡ್ ಆಗಿದ್ದರೆ ನಿಮಗೇ ತೊಂದರೆ ಆಗುತ್ತದೆ. ಸಾಮಾನ್ಯವಾಗಿ ಐದು ಸಾವಿರದಿಂದ ಏಳು ಸಾವಿರ ಇರಬೇಕು. ಅಕಸ್ಮಾತ್ ಒಂದು ಹಳ್ಳಿಯಲ್ಲಿ 7500 ಇದ್ದರೆ ಅಷ್ಟಕ್ಕೋಸ್ಕರ ನಾವು 500 ಅನ್ನು ಪ್ರತ್ಯೇಕಪಡಿಸುವುದು ಬಹಳ ಕಷ್ಟ ಆಗುತ್ತದೆ. ಆದ ಕಾರಣ ಅಂತಹ ಸಂದರ್ಭದಲ್ಲಿ ಡಿಸಿಗೆ ಸ್ವಲ್ಪ ಅಧಿಕಾರ ಇರಬೇಕಾಗುತ್ತದೆ. ಇದು ನಮ್ಮ ಉದ್ದೇಶವೇ ಹೊರತು ಬೇರೆ ಉದ್ದೇಶ ಏನೂ ಇಲ್ಲ. ರಾಜಕೀಯವಾಗಿ ನಾವು ಹೇಳಿದಂತೆ ಮಾಡಬೇಕು ಎಂದು ಅಧಿಕಾರ ಕೊಟ್ಟಿಲ್ಲ. ಯಾವುದೇ ಕಾನೂನು ಮಾಡಿದರೂ ಸ್ವಲ್ಪ ಫ್ಲೆಕ್ಸಿಬಿಲಿಟಿ ಇರಬೇಕು.

ಶ್ರೀ ಬಿ.ಹೆಚ್. ಬನ್ನಿಕೋಡ್ : ನಾನು ಹೇಳುವುದು ಏನೆಂದರೆ ಕನಿಷ್ಟ ಎಷ್ಟು ಹೆಚ್ಚು ಇರಬೇಕು ಅಥವಾ ಕಡಿಮೆ ಇರಬೇಕು, ಫ್ರಾಕ್ಷನ್ ಎಂದರೆ ಅದನ್ನು ಒಂದು ಎಂದು ತೆಗೆದುಕೊಳ್ಳಬೇಕು ಎಂದು ಕಾನೂನಿನಲ್ಲಿ ಹೇಳಬಹುದಿತ್ತು. ಏಕೆಂದರೆ ಎಲ್ಲವೂ ಅಧಿಕಾರಿಗಳ ಮರ್ಜಿ, 'ಸರ್ಕಾರದ ಹಂಗಿನಲ್ಲಿರತಕ್ಕ ಕೆಲಸ ಕಾನೂನಿನಲ್ಲಿ ಆಗಬಾರದು. ಸ್ಪಷ್ಟವಾಗಿ ಒಂದು ನಿರ್ದಿಷ್ಟವಾದ ವಿಚಾರ ಅಲ್ಲಿರಬೇಕು ಎಂದು ಉಪಾಧ್ಯಕ್ಷರ ಮೂಲಕ ಮಾನ್ಯ ಸಚಿವರನ್ನು ಕೇಳುತ್ತೇನೆ. ಅನಂತರ ಈ ಮಂಡಲ್ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಜಿಲ್ಲಾ ಪರಿಷತ್ತಿನಲ್ಲಿರತಕ್ಕ ಸೆಕ್ರೆಟರಿ ಅಥವಾ ಕಾರ್ಯ ನಿರ್ವಾಹಕ ಸಿಬ್ಬಂದಿಯವರು ನೇರವಾಗಿ ಸರ್ಕಾರದ ನಿಯಂತ್ರಣದಲ್ಲಿ ಇಲ್ಲ. ಇವತ್ತು ತಮ್ಮ ಕಛೇರಿಯಲ್ಲಿ ಕೆಲಸ ಮಾಡತಕ್ಕ ಒಬ್ಬ ನೌಕರನ ಮೇಲೆ ನಿಯಂತ್ರಣ ಇಲ್ಲದೇ ಹೋದರೆ ಏನು ಪರಿಸ್ಥಿತಿ ಆಗುತ್ತದೆ? ಶಿಸ್ತಿನ ಕ್ರಮ ತೆಗೆದುಕೊಳ್ಳುವುದಕ್ಕೆ ಅಧಿಕಾರ ಇಲ್ಲ. ಸೂಪರ್‌ವಿಶನ್ ಎಂದು ಹೇಳುತ್ತೀರಿ. ಅಲ್ಲಿ ಅಧಿಕಾರಿಗಳ ಮೇಲೆ ನೌಕರರ ಮೇಲೆ ನೇರವಾಗಿ ನಿಯಂತ್ರಣ ಇಲ್ಲದೇ ಹೋದರೆ ಇವರು ಹೇಳಿರತಕ್ಕ ಸೂಪರ್‌ವಿಶನ್ ಎನ್ನುವ ಮಾತಿಗೆ ಅಲ್ಲಿ ಏನು ಅರ್ಥ ಇದೆ? ಕೇವಲ ಬೂಟಾಟಿಕೆ ಆಗುತ್ತದೆ. ಯಾವುದೇ ಅಧಿಕಾರಿ ಇವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳತಕ್ಕ, ಅವರನ್ನು ಅಮಾನತ್ತಿನಲ್ಲಿಡತಕ್ಕ,

ಇವರ ಮೇಲೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳುವಂತಹ ಅಧಿಕಾರವನ್ನು ಇವರು ಯಾರಿಗೂ ಕೊಟ್ಟಿಲ್ಲ. ನೇರವಾಗಿ ಸರ್ಕಾರ ಅಧಿಕಾರವನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡು ಗ್ರಾಮ ಮಟ್ಟದಿಂದ ರಾಜ್ಯಮಟ್ಟದ ವರೆಗೂ ಅಧಿಕಾರಿಗಳ ಮುಖಾಂತರ ತನ್ನದೇ ಆದಂತಹ ಒಂದು ವಿಚಾರಗಳನ್ನು ಈ ಗ್ರಾಮ ಮ್ಟದಲ್ಲಿ ಹೇರಬೇಕು ಎನ್ನುವ ಉದ್ದೇಶ ಇದರಲ್ಲಿ ಅಡಕಾಗಿದೆ ಎಂದು ಸ್ಪಷ್ಟವಾಗಿ ಕಾಣುತ್ತದೆ. ಇಲ್ಲದಿದ್ದರೆ ಆಯಾಮಟ್ಟಗಳಲ್ಲಿ ನೀವು ಏನು ಅಲ್ಲಿಯು ಕಾರ್ಯದರ್ಶಿಯವರಿಗೆ ಸಂಬಳವನ್ನು ಕೊಡುತ್ತೀರಿ ಅದನ್ನೆಲ್ಲಾ ಆ ಪಂಚಾಯಿತಿಗೆ ಕೊಡಿ. ಆ ಅಧಿಕಾರಿಯನ್ನು ಅವರ ನಿಯಂತ್ರಣಕ್ಕೆ ಕೋಡಿ. ನೀವೇ ಸಂಬಳವನ್ನು ಕೊಟ್ಟರೂ ಕೂಡ ತಾಲ್ಲೂಕು ಪಂಚಾಯಿತಿಗಳಿಗೆ ನೀವು ಈ ಹಣವನ್ನೆಲ್ಲಾ ಕೊಡಿ. ಅದೇ ರೀತಿ ಜಿಲ್ಲಾ ಪಂಚಾಯತಿಗಳಲ್ಲೂ ಮಾಡಿ ಅಧಿಕಾರಿಗಳು ಅವರ ನಿಯಂತ್ರಣದಲ್ಲಿ ಬರುವಂತೆ ಮಾಡಿದರೆ ತಾವು ಏನು ಹೇಳುತ್ತಿದ್ದೀರಿ ಅದು ಅರ್ಥಪೂರ್ಣವಾಗಿ ಕೆಲಸ ನಡೆಯಬಹುದೇ ಹೊರತು ಇಲ್ಲದಿದ್ದರೆ ಇಲ್ಲ. ನಾನು ಹೇಳುತ್ತಿರುವ ಮಾತನ್ನು ಮಾನ್ಯ ಮಂತ್ರಿಗಳು ವೈಯುಕ್ತಿಕವಾಗಿ ಒಪ್ಪಬಹುದೆಂದು ನಾನು ಭಾವಿಸುತ್ತೇನೆ. ಇಲ್ಲಿರತಕ್ಕ ನಿಯಮದ ಪ್ರಕಾರ 2 ತಿಂಗಳಿಗೊಮ್ಮೆ ಸಭೆಯನ್ನು ಕರೆಯಬೇಕೆಂದಿದೆ. ವರ್ಷದಲ್ಲಿ 6 ಸಾರಿ ಮಾತ್ರ ಸಭೆ ಸೇರಬೇಕೆಂದು ಹೇಳುತ್ತಿದ್ದೀರಿ. ಆದರೆ ಅವರು ಪ್ರತಿತಿಂಗಳೂ ಸಭೆ ಸೇರಿ ಏನು ಕಾರ್ಯಕ್ರಮವನ್ನು ಮಾಡಬೇಕು, ಈಗ ಏನು ಮಾಡುತ್ತಿದ್ದಾರೆಂಬುದನ್ನು ಹೇಳಬೇಕಾಗುತ್ತದೆ. ಗಾಮ ಮಟ್ಟದಲ್ಲಾಗಲಿ, ತಾಲ್ಲೂಕು ಅಥವಾ ಜಿಲ್ಲಾ ಮಟ್ಟದಲ್ಲಿ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು, ಒಂದು ತಿಂಗಳಲ್ಲಿ ಏನು ಪ್ರಗತಿಯಾಗಿದೆ ಎಂಬುದನ್ನು ನೋಡಬೇಕಾಗುತ್ತದೆ. ಅದ್ದರಿಂದ ತಿಂಗಳಿಗೊಮ್ಮೆ ಸಭೆಯನ್ನು ಕರೆಯಬೇಕು, ಅವಶ್ಯಕತೆ ಇದ್ದಾರೆ ಅನಂತರ ಕರೆಯಬಹುದು, ಕನಿಷ್ಠ ತಿಂಗಳಿಗೊಮ್ಮೆ ಯಾದರೂ ಸಭೆಯನ್ನು ಕರೆಯುವಂತೆ ಒಂದು ತಿದ್ದುಪಡಿಯನ್ನು ತರಬೇಕೆಂದು ಸೂಚಿಸಬಯಸುತ್ತೇನೆ.

ಅಧ್ಯಕ್ಷರು (ಶ್ರೀ ವಿ. ಎಸ್. ಕೌಜಲಗಿಯವರು) ಅಧ್ಯಕ್ಷ ಪೀಠಕ್ಕೆ ಬಂದರು)

ಶ್ರೀ ಬಿ. ಹೆಚ್. ಬನ್ನಿಕೋಡ್ : ರಿಸರ್ವೇಷನ್ 18 ಪರ್ಸೆಂಟ್ ಕೊಡಬೇಕೆಂದು ಸಂವಿಧಾನದಲ್ಲಿ ಏನಿದೆ ಅದರ ಪ್ರಕಾರ ಕೊಡಿ. ಅದಕ್ಕೆ ನಮ್ಮ ವಿರೋಧ ಇಲ್ಲ. ಎಲ್ಲಿ ಜನ ಇದ್ದಾರೆ ಅಲ್ಲಿ ಕೊಡಿ. ಆದರೆಎಲ್ಲಿ ಇಲ್ಲ ಅಂದರೆ ಒಬ್ಬಬ್ಬರು ಇದ್ದಾರೆ ಅಲ್ಲ ನೀವು ಇದನ್ನು ಜಾರಿಗೆ ತಂದರೆ ಏನು ಪ್ರಯೋಜನ? ನನ್ನ ಅನುಭವದಿಂದ ಹೇಳುವುದಾದರೆ, ನನ್ನ ಕ್ಷೇತ್ರದಲ್ಲಿ ಒಂದು ಮಂಡಲ ಪಂಚಾಯಿತಿ ಚುನಾವಣೆಯಲ್ಲಿ ರಿಸರ್ವೇಷನ್ನು ಕೊಟ್ಟಿದ್ದಾರೆ. ಅಲ್ಲಿ ಪರಿಶಿಷ್ಟ ಜಾತಿಗೆ ಸೇರಿದಂಥ ಒಂದೇ ಒಂದು ಮನೆ ಇದೆ. ಬೇರೆ ಒಳಗುಂಪಿನ ಜನ ಯಾರೂ ಇಲ್ಲ. ಆ ಒಂದೇ ಮನೆಯ ತಂದೆ, ತಾಯಿ ಮತ್ತು ಮಗನನ್ನು ಸದಸ್ಯರನ್ನಾಗಿ ಸೇರಿಸಬೇಕಾಯಿದು. ಇದು ತಮ್ಮ ಸದಭಿಪ್ರಾಯವೆ ಎಂಬುದು ಹೇಳಿ. ಎಲ್ಲಿ ಹೆಚ್ಚಿಗೆ ಜನ ಇದ್ದಾರೆ ಅಲ್ಲಿ ಅವರು ಪ್ರತಿನಿಧಿಸುವುದಕ್ಕೆ ಅನುಕೂಲ ಆಗುವಂತೆ ಕೊಡಿ.

ಶ್ರೀ ಬಿ. ಆರ್. ಪಾಟೀಲ್ : ನಿಮ್ಮ ಅಧಿಕಾರ ಇದ್ದಾಗ ನೀವು ಆ ರೀತಿ ಡೀಲಿಮಿಟೇಷನ್ ಮಾಡುತ್ತಿದ್ದೀರಿ. ರಿಸರ್ವೇಷನನ್ನು ಹಾಗೇ ಮಾಡುತ್ತಿದ್ದೀರಿ. ನಿಮಗೆ ಬೇಡವಾದವರನ್ನು ಅಲ್ಲಿ ನಿಲ್ಲಿಸಬಾರದೆಂದು ಒಂದೇ ಮನೆಯವರಲ್ಲೇ 3 ಜನ ಆರಿಸಿ ಬರುವಂತೆ ನೀವು ಮಾಡಿದಿರಿ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಇದು ರಿಸರ್ವೇಷನ್ ಮತಕ್ಷೇತ್ರವಲ್ಲ. ತಾವು ನಾನು ಹೇಳಿದ್ದನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ. ಇಡೀ ಮಂಡಲ ಪಂಚಾಯಿತಿಯ

ವಾಯಪ್ತಿಯಲ್ಲಿನ ವಿಚಾರವನ್ನು ನಾನು ಹೇಳುತ್ತಿದ್ದೇನೆ. ಒಂದು ಕ್ಷೇತ್ರ ಅಥವಾ ಒಂದು ವಾರ್ಡ್‌ನಲ್ಲಿ ಎಂದು ಅಲ್ಲ. ಇಡೀ ಕ್ಷೇತ್ರದಲ್ಲೇ ಒಂದೇ ಮನೆಯ ತಂದೆ, ತಾಯಿ ಮತ್ತು ಮಗನನ್ನು ಸದಸ್ಯರನ್ನಾಗಿ ಮಾಡೋಣವೆಂದರೆ ಅವರು ಇದು ನಮಗೆ ಬೇಡ ಎಂದು ಹೇಳುತ್ತಿದ್ದರು. ಆದ್ದರಿಂದ ಎಲ್ಲಿ ಇವರ ಜನಸಂಖ್ಯೆ ಇಲ್ಲ ಅಲ್ಲಿ ಇದನ್ನು ಕಡ್ಡಾಯ ಮಾಡಬೇಡಿ, ಆದರೆ ಎಲ್ಲಿ ಇವರ ಜನಸಂಖ್ಯೆ ಹೆಚ್ಚಿಗೆ ಇದೆ ಅಲ್ಲಿ ಇದೇ ಪರ್ಸೆಂಟೇಜನ್ನು ಹೆಚ್ಚು ಕೊಡಿ ಎನ್ನತಕ್ಕ ಮಾತನ್ನು ಹೇಳಬಯಸುತ್ತೇನೆ. ಇನ್ನು ಮಂಡಲ ಪಂಚಾಯಿತ್ ತಾಲೂಕು ಪಂಚಾಯಿತ್ ಮತ್ತು ಜಿಲ್ಲಾಪರಿಷತ್ತಿಗೆ ಅಧ್ಯಕ್ಷರು, ಉಪಾಧ್ಯಕ್ಷರನ್ನು ರಿಸರ್ವೇಷನ್ ಮೂಲಕ ಆಯ್ಕೆ ಮಾಡಬೇಕೆಂದು ಹೇಳುತ್ತಿದ್ದೀರಿ. ಇದು ವ್ಯಾವಹಾರಿಕವಾಗಿ ಎಷ್ಟರಮಟ್ಟಿಗೆ ಸಾಧುವಾಗುತ್ತಿದೆ. ಇದು ನೋಡುವುದಕ್ಕೆ, ಕೇಳುವುದಕ್ಕೆ ಒಳ್ಳೆಯದೆನಿಸುತ್ತದೆ. ಇದನ್ನು ತಾವು ಯೋಚನೆ ಮಾಡಬೇಕು. ಸದಸ್ಯರಾಗುವುದಕ್ಕೆ ಏನು ರಿಸರ್ವೇಷನ್ ಇದೆ, ಇದು ಸಂವಿಧಾನ ಬಾಹಿವಾದುದು. ಏಕೆಂದರೆ ರಿಸರ್ವೇಷನ್ 50 ಪರ್ಸೆಂಟ್‌ಗೆ ಮೀರಬಾರದೆಂದು ಸಂವಿಧಾನದಲ್ಲಿ ಇದೆ. ಅದಲ್ಲದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರಿಗೆ ಸಂವಿಧಾನಬದ್ಧವಾಗಿ ಏನು ಕೊಡಬೇಕೋ ಅದನ್ನು ಕೊಟ್ಟು ಉಳಿದವರಿಗೆ ಸಾಮಾನ್ಯ ಮೀಸಲಾತಿಯನ್ನು ಕೊಟ್ಟಿಲ್ಲ, ಚುನಾವಣೆಯಲ್ಲಿ ಭಾಗವಹಿಸದೆ ಆರಿಸಿ ಬರುತ್ತಾರೆ. ಅವರು ತುಳಿತಕ್ಕೆ ಒಳಪಟ್ಟ ಜನರು, ಅದ್ದರಿಂದ ಪರಿಶಿಷ್ಟ ಜಾತಿಯ ಜನರಿಗೆ ಮಾತ್ರ ಮೀಸಲಾತಿಯನ್ನು ಕೊಟ್ಟು ಬೇರೆಯವರಿಗೆ ಮೀಸಲಾತಿಯನ್ನು ಕೊಡದೇ ಇರುವುದರಿಂದ ಇಲ್ಲಿ ಮತ್ತಷ್ಟು ಜಾತಿಯ ದ್ವೇಷಗಳನ್ನು ಹುಟ್ಟಿಸಿದಂತಾಗುತ್ತದೆ. ಆದುದರಿಂದ ಬೇರೆಯವರಿಗೆ ಮೀಸಲಾತಿಯನ್ನು ಕೊಡುವುದರ ಬದಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮಾತ್ರ ಮೀಸಲಾತಿಯನ್ನು ಕೊಟ್ಟು ಉಳಿದವರಿಗೆ ಸಾಮಾನ್ಯ ಸೀಟ್‌ನಲ್ಲಿ ಚುನಾವಣೆಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟರೆ ಹೆಚ್ಚಿನ ಸೌಹಾರ್ದತೆ, ಸಹಕಾರ ಮಾಡುತ್ತದೆ. ಆ ರೀತಿಯಲ್ಲಿಸಂಸ್ಥೆಗಳು ನಡೆಯುತ್ತದೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಇನ್ನು ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾಮಟ್ಟದಲ್ಲಿ ಜಿಲ್ಲಾಪರಿಷತ್‌ಗಳಿಗೆ ಮೊದಲು ಏನು ಕಾನೂನು ಇತ್ತೋ ಅದನ್ನು ಸಂಪೂರ್ಣವಾಗಿ ತೆಗೆದುಹಾಕುದಂಥ ವ್ಯವಸ್ಥೆ ಇಲ್ಲಿ ನಡೆದಿದೆ. ಮೊದಲು ಜಿಲ್ಲಾಪರಿಷತ್‌ಗೆ ಇಡೀ ಜಿಲ್ಲೆಯ ಅಭಿವೃದ್ಧಿಯ ಬಗ್ಗೆ ನಿಯಂತ್ರಣವಿತ್ತು, ಆದರೆ ಸರ್ಕಾರ ಅದನ್ನು ಈಗ ತೆಗೆದು ಎಲ್ಲಾ ಅಧಿಕಾರವನ್ನು ತನ್ನ ಕೈಯಲ್ಲಿ ಇಟ್ಟುಕೊಂಡಿದೆ. ಕೆಲವು ಅಧಿಕಾರಗಳನ್ನು ಗ್ರಾಮಮಟ್ಟದಲ್ಲಿ ಕೊಟ್ಟಿದ್ದೇವೆಂದು ಅವುಗಳಿಗೆ ಸಲಹಾ ಸಮಿತಿಗಳನ್ನು ಮಾಡಿದ್ದಾರೆ. ಇವತ್ತು ಜಿಲ್ಲಾಪರಿಷತ್‌ಗಳು ಸಂಪೂರ್ಣವಾಗಿ ನಾಮಕಾವಸ್ಥೆಗಾಗಿ ಇದ್ದಾವೆಯೇ ವಿನಃ ನಿಜವಾದಂಥ ಅಭಿವೃದ್ಧಿ ಕೆಲಸಗಳನ್ನು ಮಾಡತಕ್ಕ ಅಧಿಕಾರ ಅವರ ಕೈಯಲ್ಲಿ ಪ್ರಯತ್ನವಾಗಿಲ್ಲ ಎನ್ನತಕ್ಕ ಮಾತನ್ನು ಹೇಳುತ್ತಿದ್ದೇನೆ. ಇನ್ನು ಹಣಕಾಸಿನ ಬಗ್ಗೆ ಹೇಳ ುವುದಾದರೆ, ಪ್ರತಿಯೊಂದು ತಾಲ್ಲೂಕು ಪಂಚಾಯಿತಿಗೆ ವಿದ್ಯುತ್,ಕುಡಿಯುವ ನೀರು ಶಾಲೆ ಮುಂತಾದ ಕೆಲಸಗಳಿಗಾಗಿ ಒಂದು ಲಕ್ಷರೂಪಾಯಿಗಳನ್ನು ಅನುದಾನವಾಗಿ ಕೊಡುತ್ತೇವೆಂದು ಹೇಳಿದ್ದೀರಿ. ಒಂದು ಕಡೆ 2500 ಅಥವಾ ಅದಕ್ಕಿಂತಾ ಕಡಿಮೆ ಜನಸಂಖ್ಯೆ ಇರುವ ಗ್ರಾಮಪಂಚಾಯಿತಿಗಳಿಗೆ ಒಂದು ಲಕ್ಷವನ್ನು ಕೊಡುತ್ತೇವೆಂದು ಹೇಳಿದ್ದೀರಿ, ಆದರೆ ಇನ್ನೊಂದು ಕಡೆ 7 ಸಾವಿರ ಜನಸಂಖ್ಯೆಗೆ ಮೇಲ್ಪಟ್ಟದ್ದು ಇದ್ದರೆ ಒಂದು ಲಕ್ಷವನ್ನು ಕೊಡುತ್ತೇವೆಂದು ಹೇಳಿದ್ದೀರಿ,

ಇದು ಯಾವ ನ್ಯಾಯ? ಜನಸಂಖ್ಯೆಯ ಆಧಾರದ ಮೇಲೆ ಇರಬೇಕು ಅಥವಾ ಪ್ರದೇಶದ ಆಧಾರದ ಮೇಲೆ ಇರಬೇಕು. ಸರ್ಕಾರದ ಸಹಾಯ ಜನರಿಗೆ ಮುಟ್ಟುವಾಗ ಏನಾದರೂ ಒಂದು ರೀತಿ ನೀತಿ, ಸಮಾನತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಬೇಕು. ಜನಸಂಖ್ಯೆ ಕಡಿಮೆ ಇದ್ದರೆ ಆ ರೀತಿ ಒಂದು ಲಕ್ಷ ಕೊಡುತ್ತಾರೆ, ಅದೇ ರೀತಿ ಜನಸಂಖ್ಯೆ ಹೆಚ್ಚು ಇದ್ದರೆ ಏಕೆ ಹೆಚ್ಚು ಹಣವನ್ನು ಕೊಡಬಾರದು? ಎರಡು ಸಾವಿರದ ಐನೂರು ಅಥವಾ ಅದಕ್ಕಿಂತಾ ಕಡಿಮೆ ಜನಸಂಖ್ಯೆ ಇದ್ದರೆ ಒಂದು ಲಕ್ಷವನ್ನು ಕೊಡುತ್ತೇವೆಂದು ಹೇಳಿದ ಮೇಲೆ ಅದೇ ಪ್ರಮಾಣದಲ್ಲಿ ಹೆಚ್ಚು ಜನಸಂಖ್ಯೆ ಇದ್ದ ಕಡೆಗೆ ಅದಕ್ಕೆ ಅನುಗುಣವಾಗಿ ಎರಡು ಲಕ್ಷ ಇಲ್ಲದೇ ಮೂರು ಲಕ್ಷ ಅನುಧಾನವನ್ನು ಕೊಡಬೇಕಾಗುತ್ತದೆ. ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ದೇಶದ ಒಟ್ಟಾರೆ ಜನ ಸಂಖ್ಯೆಯಲ್ಲಿ ಶೇಕಡ 75-80 ರಷ್ಟು ಇದೆ. ಆ ಒಂದು ಪ್ರಮಾಣದಲ್ಲಿ ನಾವು ಅವರಿಗೆ ಹಣವನ್ನು ಒದಗಿಸಿಲ್ಲ. ತಾವು ಏನು ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆಂದು ಹೇಳುತ್ತಿದ್ದೀರಿ, ಒಂದೊಂದು ಮಂಡಳಕ್ಕೆ ಅದರ ಅವಶ್ಯಕತೆಗಳಾದ ಕಾಮಾಗಾರಿಗಳನ್ನು ಮಾಡುವುದಕ್ಕೆ, ರಸ್ತೆ ಮಾಡುವುದಕ್ಕೆ, ಕುಡಿಯುವ ನೀರನ್ನು ಒದಗಿಸಿಕೊಳ್ಳುವುದಕ್ಕೆ, ಶಾಲೆಗಳು, ಅಂಗನವಾಡಿ ಕೇಂದ್ರಗಳಿಗೆ, ವಿದ್ಯುತ್‌ಗೆ ಕೊಡಬೇಕಾಗಿರುವ ಪ್ರಮಾಣದಲ್ಲಿ ಕೊಡಿ. ಒಂದು ಸಾರಿ ಇದು ಸೆಟ್‌ಆಫ್ ಆದರೆ ಅನಂತರ ಅದನ್ನು ಮುಂದುವರಿಸ ಬೇಕಾಗುತ್ತದೆ. ಅದಕ್ಕಾಗಿ ಇನ್ನೂ ಹೆಚ್ಚು ಅನುದಾನವನ್ನು ಜನಸಂಖ್ಯೆಯ ಆಧಾರದ ಮೇಲೆ ಬಿಡುಗಡೆ ಮಾಡಬೇಕೆಂಥು ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಈಗ ಆ ಒಂದು ಉರಿಗೆ ಕುಡಿಯುವ ನೀರಿನ ಅವಶ್ಯಕತೆ ಇರಬಹುದು, ಮತ್ತೊಂದು ಉರಿಗೆ ರಸ್ತೆಯ ಅವಶ್ಯಕತೆ ಇರಬಹುದು, ಮತ್ತೊಂದು ಊರಿಗೆ ಶಾಲೆಯ ಅವಶ್ಯಕತೆ ಇರಬಹುದು, ಆದ್ದರಿಂದ ಅವರ ಅವಶ್ಯಕತೆಗಳಿಗೆ ಅನುಗುಣವಾಗಿ ತಮ್ಮ ಯಾವುದೇ ಯೋಜನೆ ಇರಲಿ, ಜವಾಹರರೋಜಗಾರ್ ಯೋಜನೆಯೇ ಇರಲಿ, ಹಣವನ್ನು ಕೊಡಬೇಕಾಗುತ್ತದೆ. ಅವರೆ ಇವತ್ತು ಏನಾಗಿದೆ ಎಂದರೆ ಸುಮ್ಮನೆ ದಾಖಲೆಯನ್ನು ತೋರಿಸುತ್ತೀರಿ, ಆದರೆ ಅದು ಕಾರ್ಯರೂಪದಲ್ಲಿ ಆಗುತ್ತಿಲ್ಲ. ಅಲ್ಲಿ ಅಭಿವೃದ್ಧಿಯಾಗಬೇಕಾದರೆ, ಅಲ್ಲಿ ಕಟ್ಟಡ ಬೇಕಾಗಿರುತ್ತದೆ, ಸಿಮೆಂಟ್ ಬೇಕಾಗಿರುತ್ತದೆ. ಆದರೆ ತಾವು ಕಾಗದದಲ್ಲಿ ಮಾತ್ರ ಮಾನವ ದಿನಗಳನ್ನು ತೋರಿಸುತ್ತೀರಿ ಆದರೆ ಆಗತಕ್ಕ ಕೆಲಸ ಮಾತ್ರ ಕುರಿತವಾಗಿ ಆಗುತ್ತದೆ. ಸರಿಯಾಗಿ ಅಭಿವೃದ್ಧಿಯಾಗುವುದಿಲ್ಲ, ಇಟ್ಟುಕೊಂಡ ಉದ್ಧೇಶ ಸಫಲವಾಗುವುದಿಲ್ಲ. ಅದ್ದರಿಂದ ಇವರಿಗೆ ಸ್ಥಾನಿಕವಾಗಿ ಅವಶ್ಯಕತೆ ಇರುವ ಕೆಲಸವನ್ನು ಮಾಡುವುದಕ್ಕೆ ಹಣವನ್ನು ಬಿಡುಗಡೆ ಮಾಡಿ ಎಂದು ನೇರವಾಗಿ ಸರ್ಕಾರಕ್ಕೆ ಹೇಳುತ್ತಿದ್ದೇನೆ. ಒಂದು ತಾಲ್ಲೂಕಿನಲ್ಲಿ ಕನಿಷ್ಟಪಕ್ಷ 5 ಗ್ರಾಮಗಳಿಗೆ ಕನಿಷ್ಟಪಕ್ಷದ ಸೌಲಭ್ಯಗಳನ್ನು ಪೂರೈಸಲು ಹಣದ ವ್ಯವಸ್ಥೆಯನ್ನು ಮಾಡಬೇಕು. ಒಂದೊಂದು ವರ್ಷಕ್ಕೆ ಕನಿಷ್ಟ 5 ಗ್ರಾಮಗಳಲ್ಲಿ ರಸ್ತೆ, ಕುಡಿಯುವ ನೀರು, ಶಾಲೆಗಳು, ಅಂಗನವಾಡಿ ಕೇಂದ್ರಗಳು ವಿದ್ಯುತ್ ಮುಂತಾದುವುಗಳನ್ನು ಪೂರೈಸಲು ನಮಗೆ ಸ್ವಾತಂತ್ರ್ಯ ನಂಬರ್ 44 ವರ್ಷಗಳ ನಂತರವಾದ ಮೇಲಾದರೂ ಕೂಡ ಈ ಒಂದು ಕಾರ್ಯಕ್ರಮವನ್ನು ಹಾಕಿಕೊಂಡರೆ ನಿಜವಾದ ಪಂಚಾಯಿತಿ ರಾಜ್ಯ ಎನ್ನುವುದರಲ್ಲಿ ಅರ್ಥ ಬರುತ್ತದೆ. ಇಲ್ಲದಿದ್ದರೆ ಸ್ವಾತಂತ್ರ್ಯ ಒಂದು 44 ವರ್ಷಗಳಾದರೂ ಸಹ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿಲ್ಲ, ಶಾಲೆಗಳಿಲ್ಲ, ಶಿಕ್ಷಕರಿಲ್ಲ, ರಸ್ತೆಗಳಿಲ್ಲದಂತಾಗುತ್ತದೆ. ಈ ರೀತಿಯಾದರೆ

ಯಾವ ಅಧಿಕಾರ ವಿಕೇಂದ್ರೀಕರಣ ? ಯಾವ ಪ್ರಜಾಪ್ರಭುತ್ವ? ಆ ರೀತಿ ಹೇಳಿಕೊಳ್ಳಲು ನಾಚಿಕೆಯಾಗುತ್ತದೆ. ಕನಿಷ್ಟ ಸೌಲಭ್ಯಗಳನ್ನು ಪೂರೈಸುವ ಸಲುವಾಗಿ ಒಂದು ಗ್ರಾಮವನ್ನು ಆಯ್ಕೆಮಾಡಿಕೊಂಡು ಅದಕ್ಕೆ ಆದರ್ಶ ಗ್ರಾಮ ಎಂದು ಮಾಡಿ. ಅಲ್ಲಿ ಯಾವ ಯಾವ ಸೌಲಭ್ಯಗಳನ್ನು ಅವಶ್ಯಕವಾಗಿ ಒದಗಿಸಬೇಕು, ಯಾವರೀತಿ ಕರವನ್ನು ವಿಧಿ ಸಬೇಕು ಯಾವರೀತಿ ವಸೂಲು ಮಾಡಬೇಕೆಂಬುದನ್ನು ಗೊತ್ತುಮಾಡಿ. ಇವತ್ತು ಲಕ್ಷಾಂತರ ರೂಪಾಯಿಗಳವರೆಗೆ ಮನೆಗಂದಾಯ ಬಾಕಿ ಉಳಿದಿದೆ. ಯಾವ ಗ್ರಾಮದಲ್ಲಿ ನೂರಕ್ಕೆ 80 ಪರ್ಸೆಂಟ್ ಮನೆಗಂದಾಯವನ್ನು ವಸೂಲು ಮಾಡುತ್ತಾರೆ, ಅಂಥ ಗ್ರಾಮಗಳಿಗೆ ಇಂಥಿಂಥ ಅನುಕೂಲಗಳನ್ನು ಮಾಡಿಕೊಡುತ್ತೇವೆಂದು ಹೇಳಿ. ಅಥವಾ ಇಂತಿಷ್ಟು ಲಕ್ಷ ರೂ. ಗಳನ್ನು ಕುಡಿಯುವ ನೀರಿನ ವ್ಯವಸ್ಥೆಗಾಗಿ ಕೊಡುತ್ತೇವೆ ಎಂದು ಹೇಳಿ. ಆಗ ಅನೇಕ ಗ್ರಾಮಗಳಲ್ಲಿ ನಗರಗಳಲ್ಲಿ ಹೆಚ್ಚಿನ ರೀತಿಯಲ್ಲಿ ಮನೆಗಂದಾಯ ವಸೂಲಾಗುತ್ತದೆ ನಾನು ಈ ಮಾತನ್ನು ಹೇಳುವುದಕ್ಕೆ ಕಾರಣ ಎಂದರೆ, ನನ್ನತಾಲೂಕಿನಲ್ಲಿ ಸುಮಾರು 26 ಲಕ್ಷ ರೂ. ಮನೆಗಂದಾಯ ಬಾಕಿ ಇದೆ. ಇಷ್ಟು ಹಣ ವಸೂಲಾಗದಿದ್ದರೆ ನಾವು ಎಷ್ಟೊಂದು ಅಭಿವೃದ್ಧಿ ಕಾರ್ಯಗಳನ್ನು ಮಾಡಬಹುದಿತ್ತು. ಒಂದೊಂದು ತಾಲೂಕಿನಲ್ಲಿ 5-5 ಗ್ರಾಮಗಳನ್ನು ಮಾಡೆಲ್‌ವಿಲೇಜ್ ಎಂದು ಮಾಡಿ ಪರಿಹಾರ ಧನವನ್ನು ಕೊಡಬೇಕು. ಈ ವಿಚಾರವನ್ನು ನೀವು ನಿಮ್ಮ ರೂಲ್ಸ್‌ನಲ್ಲಿ ಸೇರಿಸಿದರೆ ಆಗ ಪ್ರಯೋಜನವಾಗಿತ್ತದೆಂದು ನಾನು ಹೇಳಬಯಸುತ್ತೇನೆ ಈಗ ನೀವು ತಂದಿರತಕ್ಕ ಅಧಿಕಾರ ವಿಕೇಂದ್ರೀಕರಣ ಮಸೂದೆ ಎಂದು ಏನು ಹೇಳುತ್ತಿದ್ದೀರಿ ಅದು ನಿಜವಾಗಿ ಸರಿಯಲ್ಲ, ತಮ್ಮ ಮನಸ್ಸಿಗೆ ವಿರೋಧವಾಗಿ, ಸಂವಿಧಾನ ತಿದ್ದುಪಡಿಗೆ ವಿರೋಧವಾಗಿ ಈ ಅಧಿಕಾರ ವಿಕೇಂದ್ರೀಕರಣ ಮಸೂದೆ ಏನಿದೆ, ಇದು ಕೇವಲ ಕಾಗದದ ಹುಲಿಯಾಗಿ, ಹಲ್ಲು ಕಿತ್ತ ಹಾವಾಗಿದೆಯೇ ಹೊರತು ಬೇರೆ ಏನೂ ಇಲ್ಲ. ನಿಮ್ಮ ಬಿಲ್‌ನಲ್ಲಿರತಕ್ಕ ರೀತಿಯಲ್ಲಿ ಕಾರ್ಯಾಚರಣೆ ಮಾಡತಕ್ಕ ಅಧಿಕಾರವನ್ನು ಸ್ಥಳೀಯ ಸಂಸ್ಥೆಗಳಿಗೆ ಕೊಟ್ಟಿಲ್ಲ. ಅಧಿಕಾರ ನಿಯಂತ್ರಣವನ್ನು ಕೊಡದೇ ಇರುವುದರಿಂದ ಮತ್ತು ಹಣಕಾಸಿನ ವ್ಯವಸ್ಥೆಯನ್ನು ಮಾಡದೇ ಇರುವುದರಿಂದ ಇದು ಸಂಪೂರ್ಣವಾಗಿ ವಿಫಲವಾಗಿದೆ. ಈ ಕಾರಣದಿಂದಾಗಿ ನಾನು ಈ ವಿಧೇಯಕವನ್ನು ವಿರೋಧಮಾಡಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಆರ್.ವಿ.ದೇಶಪಾಂಡೆ (ವಿರೋದ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ವರ್ತೂರು ಕ್ಷೇತ್ರಕ್ಕೆ ಸಂಬಂಧಪಟ್ಟ ಆಶ್ರಯ ಯೋಜ್ಞನೆಯಲ್ಲಿ ಹಂಚಲಾಗಿರುವ ನಿವೇಶನಗಳನ್ನು ರದ್ದುಮಾಡುವ ಬಗ್ಗೆ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಇದರ ಬಗ್ಗೆ ಮಾನ್ಯ ಕೃಷ್ಣಪ್ಪನವರು ಒಂದು ಸ್ಟೇಟ್‌ಮೆಂಟ್ ಮಾಡಬೇಕಾಗಿತ್ತು ಮತ್ತು ಮುಖ್ಯ ಮಂತ್ರಿಗಳಾದ ಮೊಯ್ಲಿಯವರೂ ಕೂಡ ಉತ್ತರವನ್ನು ಕೊಡಬೇಕಾಗಿತ್ತು. ಏಕೆಂದರೆ ನಿನ್ನೆ ಇದರ ಬಗ್ಗೆ ನನಗೆ ಒಂದು ಭರವಸೆಯನ್ನು ಕೊಟ್ಟಿದ್ದರು....

ಶ್ರೀ ಹಾರ್‍ನಳ್ಳಿರಾಮಸ್ವಾಮಿ : ಈಗ ಮಾನ್ಯ ಮುಖ್ಯ ಮಂತ್ರಿಗಳಿಲ್ಲ. ಆದ್ದರಿಂದ ನಾಳೆ ಬೆಳಿಗ್ಗೆ ಇದನ್ನು ತೆಗೆದುಕೊಳ್ಳಬಹುದು.

* ಪ್ರೊ. ಎಂ. ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ) : ಮಾನ್ಯ ಅಧ್ಯಕ್ಷರೆ, ನಮ್ಮ ಕೇಂದ್ರದ ಸಂಸತ್ತು ಸರ್ವಾನುಮತದಿಂದ ಸಂವಿಧಾನ ವಿರೋಧಿ ತಿದ್ದುಪಡಿಯನ್ನು ಪಾಸ್ ಮಾಡಿದ್ದು ಅದರ ಆಧಾರದಮೇಲೆ ನಮ್ಮ ಸರ್ಕಾರ ಒಂದು ಮಸೂದೆಯನ್ನು ನಮ್ಮ ಮಂದೆ ಮಂಡಿಸಿದೆ . ಇದನ್ನು ನಮ್ಮ ಹಲವಾರು ಮಾನ್ಯ ಸದಸ್ಯರು ವಿಕೇಂದ್ರೀಕರಣದ ಕಲ್ಪನೆಯ ಜೊತೆಗೆ 2-3 ದಿವಸದಿಂದ ಚರ್ಚೆಮಾಡುತ್ತಿದ್ದಾರೆ. ನಾವು ವಿಕೇಂದ್ರೀಕರಣ ಕಲ್ಪನೆಯಲ್ಲಿ ದಾರಿ ತಪ್ಪಿದ್ದೇವೆಂದು ನನ್ನ ಭಾವನೆ ತಮ್ಮ ಹೇಳಿಕೆಯ ಪ್ರಕಾರ 1983 ನೇ ಇಸವಿಯಲ್ಲಿ ಏನು ಕಾನೂನನ್ನು ಮಾಡಲಾಗಿತ್ತು ಅದನ್ನು ಮಾಡಿದವರೂ ಕೂಡ ವಿಕೇಂದ್ರೀಕರಣ ಕಲ್ಪನೆಯ ಜೊತೆ ನಾವು ಮಾಡಿದ್ದೇವೆಂದು ಹೇಳುತ್ತಿದ್ದರು. 1983 ನೇ ಇಸವಿಯ ಕಾನೂನನ್ನು ಈಗ ತಾವು 1993 ನೇ ಇಸವಿಯಲ್ಲಿ ಬದಲಾವಣೆ ಮಾಡುತ್ತಿದ್ದೀರಿ. ತಾವೂ ಕೂಡ ವಿಕೇಂದ್ರೀಕರಣ ಕಲ್ಪನೆಯ ಜೊತೆಯಲ್ಲಿ ಈ ಮಸೂದೆಯನ್ನು ಚರ್ಚೆಮಾಡುತ್ತಿದ್ದೀರಿ. ಇಲ್ಲೇ ನಾವು ಮೂಲಭೂತವಾಗಿ ತಪ್ಪು ಮಾಡಿರತಕ್ಕದ್ದು. ಈ ಮಸೂದೆಯನ್ನು ಓದಿದರೆ ಅಥವಾ 1983ರ ಮಸೂದೆಯನ್ನು ಓದಿದರೆ ಎರಡರಲ್ಲೂ ಗುಣಾತ್ಮಕವಾಗಿ ಏನು ವ್ಯತ್ಯಾಸವಿಲ್ಲ. Both these documents belong to the same category. ಇದನ್ನು ತಾವು ಆಡಳಿತ ಪುನರ್ ರಚನೆಯ ಕಾನೂನು ಎಂದು ಕರಿಯುವಾದರೆ ಇದನ್ನು ನಾನು ವಿರೋಧ ಮಾಡುವುದಿಲ್ಲ. It is an administrative arrangement only and it is not at all decentralisation power. 1983ರಲ್ಲಿ ಕೂಡ ಈ ಕಾನೂನು ಮೂಲಕ ರಾಜಕೀಯ ಮತ್ತು ಆರ್ಥಿಕ ಅಧಿಕಾರಗಳ ವಿಕೇಂದ್ರೀಕರಣ ಮಾಡಿರಲಿಲ್ಲ. ಇವತ್ತಿನ 1993ರ ಮಸೂದೆಯಲ್ಲಿ ಕೂಡ ಅರ್ಥಿಕ ಮತ್ತು ರಾಜಕೀಯ ಅಧಿಕಾರಗಳ ವಿಕೇಂದ್ರೀಕರಣ ಮಾಡಿಲ್ಲ. ಆ ಕಾರಣ ಇದನ್ನು ವಿಕೇಂದ್ರೀಕರಣಕ್ಕೆ ಸಂಬಂಧಪಟ್ಟ ಕಾನೂನು ಎಂದರೆ ನಾನು ಅದನ್ನು ಸಂಪೂರ್ಣವಾಗಿ ವಿರೋಧ ಮಾಡುತ್ತೇನೆ. ಗಾಂಧೀಜಿಯವರು ನಿಮ್ಮನ್ನು ನೋಡಿ ನಗುತ್ತಾ ಇರಬಹುದು ಆ ಕಾರಣಕ್ಕೆ ನಾನು ಹೇಳಿದ್ದು. ಅರ್ಟಿಕಲ್ 40 ಏನಿದೆ, ನಮ್ಮ ಸಂವಿಧಾನದಲ್ಲಿ ಅದಕ್ಕೆ ಸಂಪೂರ್ಣವಾಗಿ ವಿರುದ್ಧವಾದಂಥ ತಿದ್ದುಪಡಿ ಇದು. ಅರ್ಟಿಕಲ್ 40 ಕೂಡ ಗಾಂಧೀಜಿ ವಿಕೇಂದ್ರೀಕರಣದ ಬಗ್ಗೆ ಅಷ್ಟೊಂದು ಹೋರಾಟ ಮಾಡಿದರು. ನಾವು 1949ರ ನವೆಂಬರ್‌ನಲ್ಲಿ ಸಂವಿಧಾನವನ್ನು ಒಪ್ಪಿದ್ದು 1949 ನವೆಂಬರ್‌ನಿಂದ ಈ ತಿದ್ದುಪಡಿ ಯಾಗುವ ವರೆಗೂ ಗಾಂಧೀಜಿಗೆ ನಾವು ಕೊಟ್ಟದ್ದು ಲಿಪ್ ಸರ್ವೀಸ್ ಮಾತ್ರ. ಈಗ ನಾವು ಮಾಡುತ್ತಿರುವುದು ಡಿಸ್‌ಸರ್ವೀಸ್ 1983ರ ಮಸೂದೆಯಲ್ಲಿ we did a diservice to Gandhiji, ಈ 1993ರ ಮಸೂದೆಕೂಡ is doing a disservice to Gandhiji, after having paid lip service to Gandhiji for over 43 years. ಏತಕ್ಕೆಂದರೆ ಗಾಂಧೀಜಿಯವರು ಇದು ಪಂಚಸ್ತಂಬ ರಾಷ್ಟ್ರ ರಚನೆಯಾಗಬೇಕೆಂದು. ಮತನಾಡುತ್ತಿದ್ದರು ಗ್ರಾಮಸ್ವರಾಜ್ಯದ ಕಲ್ಪನೆಯಮೇಲೆ ಇರುವಂಥ ಗ್ರಾಮ ಮೊದಲನೆಯ ಘಟಕ, ನಂತರ ತಾಲ್ಲೂಕು ಘಟಕ, ಅನಂತರ ಜಿಲ್ಲಾಘಟಕ, ಅನಂತರ ರಾಜ್ಯ ಘಟಕ. ಆಮೇಲೆ 5ನೇ ಕಂಬ ರಾಷ್ಟ್ರ. ಹೀಗೆ ಪಂಚಸ್ತಂಬ ರಾಷ್ಟ್ರದ ಬಗ್ಗೆ ಗಾಂಧೀಜಿ ಮಾತನಾಡುತ್ತಿದ್ದರು. ಆರ್ಟಿಕಲ್ 40ರ ಬಗ್ಗೆ ಗಾಂಧಿಜೀಯವರು ಏನು ಹೇಳುತ್ತಿದ್ದರು ಅದನ್ನು ಅಳವಡಿಸಿಕೊಂಡಿದೆ. To enable them tofunction as

units of self- Government ಈ ಪಂಚಸ್ತಂಬ ರಾಷ್ಟ್ರದ ಒಕ್ಕೂಟದ ವ್ಯವಸ್ಥೆ ಏನಿದೆ, ಇದು ಗಾಂಧೀಜಿಯ ಕಲ್ಪನೆ. ತಾವು ಈ ಒಂದು ಕಸರತ್ತು ಮಾಡಿರುವುದು, within the concept of federalism ಎಂದು ನಾನು ತಿಳಿದುಕೊಂಡಿದ್ದೇನೆ.you are trying to create a four pillar federal state inside Karnataka ಚತುರ್ಸ್ಥಂಬರಾಜ್ಯ ರಚನೆ ಮಾಡುವುದಕ್ಕೆ ತಾವು ಈ ಕಾನೂನನ್ನು ಮಾಡಿಸಿದ್ದೀರೆಂದು ನಾನು ತಿಳಿದುಕೊಂಡಿದ್ದೇನೆ. If you are trying to establish a four pillar federalism inside Karnataka, we should first understand what federalism means. ಫೆದರೇಟಿಂಗ್ ಯಾನಿಟ್ಸ್ ಎಂದು ನಾವು ಏನು ಹೇಳುತ್ತೇವೆ .They should have their own legislative powers. They should have their own economic powers ಈ ಸಂವಿಧಾನ ತಿದ್ದುಪಡಿಯಲ್ಲಿ ಏನಾಗಿದೆ ಎಂದರೆ ಹೊಸ ಒಂದು ಅಧ್ಯಾಯವನ್ನು ಈ ಸಂವಿಧಾನಕ್ಕೆ ಸೇರಿಸುತ್ತಾರೆ. ಪ್ಯಾರಾ 9ನ್ನು ಹೊಸದಾಗಿ ಸಂವಿಧಾನಕ್ಕೆ ಸೇರಿಸುತ್ತಿದ್ದಾರೆ. ಪ್ಯಾರಾ 9 ರೊಳಗೆ ಎಲ್ಲಾ ಪಂಚಾಯಿತಿಗಳು ಬರುತ್ತವೆ. 3 ಕಂಬಗಳು ಸೇರುತ್ತವೆ. ಆ 3 ಕಂಬಗಳಿಗೂ ನಾವು 11ನೇ ಷೆಡ್ಯೂಲ್‌ನಲ್ಲಿ 29 ವಿಷಯಗಳ ಬಗ್ಗೆ ಪಟ್ಟಿ ಮಾಡಿ ಕೊಟ್ಟಿದ್ದೇನೆ. You can call this 11th Schedule as the District list. ಇದನ್ನು ಒಪ್ಪುತ್ತೀರಿ ತಾನೆ ? We have union list, we have state list, we have concurrent list and 11th schedule can be called as the District List. ಹೌದೋ ಅಲ್ಲವೋ? ಡಿಸ್ಟ್ರಿಕ್ಟ್ ಲಿಸ್ಟ್ ಆಯಿತು. ಆ ಮೇಲೆ ಏನು ಮಾಡಿದ್ದಾರೆ ನಮ್ಮ ಸಂಸತ್‌ನವರು ಅಂದರೆ, ಇಲ್ಲಿ ಏನು 29 ವಿಷಯಗಳನ್ನು ಪಟ್ಟಿ ಮಾಡಿ ಸೇರಿಸಿದ್ದಾರೆ, ಅದನ್ನು 7ನೇ ಷ್ಯಂಡ್ಯೂಲ್‌ನಿಂದ ತೆಗೆದಿಲ್ಲ. 7 ನೇ ಷೆಡ್ಯೂಲ್‌ನಲ್ಲಿ ಹಾಗೇ ಉಳಿದಿವೆ ಆ ವಿಷಯಗಳು. ಕೆಲವು ರಾಜ್ಯದ ಪಟ್ಟಿ ಇದೆ ಕೆಲವು ಕನ್‌ಕರಂಟ್ ಲಿಸ್ಟ್‌ನಲ್ಲಿದೆ. ಆದರಿಂದ ಏನಾಗುತ್ತದೆಂಬುವುದನ್ನು ತಾವು ಆರ್ಟಿಕಲ್ 251-254 ತೆಗೆದು ನೋಡಿದರೆ ಗೊತ್ತಾಗುತ್ತದೆ. Doctrine of Repugnancy starts operating. When there is concurrent power, over a subject, at the district level, also at the state level and also at the Union level, if on that subject, the Union Parliament makes a law, it prevails over all other laws and in the state if the State Legislature makes a law on theat subject, it prevails over whatever law that is made at the District level. ಆ ಪ್ರಶ್ನೆ ಉದ್ಭವಿಸುವುದಿಲ್ಲ. ಏಕೆಂದರೆ you have not given legislative powers to the District or the Taluks or the Village panchayats. So, there is absolutely no devolution of legislative powers. ಆಮೇಲೆ ಆರ್ಥಿಕ ಅಧಿಕಾರಗಳನ್ನು ವಿಕೇಂದ್ರೀಕರಣ ಮಾಡಿದ್ದೀರಾ ನೀವು ? ಏನೇನು ಮಾಡಿಲ್ಲ. ಆರ್ಥಿಕ ಅಧಿಕಾರಗಳನ್ನು ಕೇಂದ್ರೀಕೃತ ಮಾಡಿ. Economic powers, have they been decentralised ? They

are not decentralised at all. What is economic power then ? Economic power is nothing other than power to tax. power to tax is economic power and power of taxation is co-equal with power of legislation. Power to legislate is co-equal with power to tax.

SRI.M.Y.GHORPADE : Fundamentally, I am not able to follow your basic argument because Federalism in this country in between Centre and the State. The concept of Federalism as far as we understand is confined to Centre and State. Now it is the State Power that we are decentralising. So, the comparison is not appropriate. It is our power we are decentralising in the manner we think fit and we will go on increasing that depending on developement. But the concept of Federalism, that is a distinction. separate legislative powers, State List, Central List as you pointed out and the concurrent list. This comcept is confined to Centre and the State and it is the State power that we are decentralising but the concept of Federalism , let us not mix it up. This is confined to the Central List, state List and the concurrent list, which is something between Centre and the States.

ಪ್ರೊ : ಎಂ.ಡಿ ನಂಜುಂಡ ಸ್ವಾಮಿ : ಅಧ್ಯಕ್ಷರೇ, the Concept of Federalism, according to our Hon.Minister is restricted to Centre and the State. ನಾನು ಅಲ್ಲಿಗೆ ಬರುತ್ತಿದ್ದೇನೆ. ಅಲ್ಲಿಯೂ ಫೆಡರಲಿಸಂ ಇಲ್ಲ. ಸುಮ್ಮನೆ ನಾವು ಬಾಯಿ ಚಪಲಕ್ಕೆ we are a federal state ಎಂದು ಹೇಳಿಕೊಳ್ಳುತ್ತೇವೆ. India is not a Federation. What I was trying to say was, you have not decentralised any economic power from the state level to the District level,or the Taluk level or the Panchayat level. ಇಲ್ಲಿ ನಿಮ್ಮ ಷೆಡ್ಯೂಲ್ ನೋಡಿದರೆ These shedules are not legislative list. They are only the list of functions. Schedule IV, the power you have conferred on the Panchayat the power is to collect tax. It is not a power of taxation. You have absolutely not decentralised any economic power. ಇಲ್ಲಿ ಏನು ತಾವು ಫೆಡರಲ್ ರಿಲೇಷನ್‌ಶಿಪ್ ಇದೆ ಯೂನಿಯನ್‌ಗೆ

ಮತ್ತು ಸ್ಟೇಟ್‌ಗೆ ಎಂದು ಹೇಳುತ್ತಿದ್ದೀರೋ ಅದೂ ಕೂಡಾ ಇಲ್ಲ. That is what I was driving at, because we, as state,under this Constitutution are also beggers of grants from the centre. We are not on an equal footing.A Federation is a compact of states enjoying equal status. The concept of Federalism is that we contribute to the expenses of the Federation. The Federating Units should contribute to the expenses of the Federation. That is Federation.

4.20 ಪಿ ಎಂ

SRI.M.V.GHORPADE : As the Professor knows, the history of different nations is different. There are some nations where the units were already existing and they come together and they create a Federation. Here, India was already existing as an entity and then States were created. Therefore, the process is slightly different. That type of Federalism where there were already sovereign states and they come together to create a federal nation should not be compared with the different historical situation where the nation already existed and we created a federal structure. Therefore, in a sense, there is always this devolution of power from the Centre to the State and then from the State to the lower units. The historical process of federating should not be confused and there is no sacrosanct way of coming together. There are nations where States existed and they have come together. Here the nation's entity existed and we are trying to give more and more powers. We created the federal States in the Constitution. Is that not so?

ಪ್ರೊ ಎಂ.ಡಿ. ನಂಜುಡಸ್ವಾಮಿ : ನನಗೆ ಕನ್‌ಫ್ಯೂಷನ್ ಇಲ್ಲ ಅಧ್ಯಕ್ಷರೇ, ಬ್ರಿಟಿಷ್ ಇಂಡಿಯಾ ಎಷ್ಟು unitary ಆಗಿತ್ತು, ಬ್ರಿಟೀಷ್ ಇಂಡಿಯಾ ಎಂದು ಎಷ್ಟು ಫೆನಿಕೃತ ಆಗಿತ್ತು, ಅದನ್ನು ನಾಶ ಮಾಡಬೇಕೆಂದೇ ಗಾಂಧೀಜಿ ಗ್ರಾಮ ಸ್ವರಾಜ್ಯ ಕಲ್ಪನೆ ಆಗಿದ್ದು. We have to make a deliberate attempt to destroy the Unitariness which is still there in this constitution and make India a real Federation of villages. That is the concept of decentralisation. ಅದನ್ನು ಮಾಡಿಲ್ಲ. Having been beggars of grants from the Centre, we have

created three more beggars of grants from the States. Preperty and income of panchayats. ಪ್ರಾಪರ್ಟಿ ಏನು ಕೊಟ್ಟಿದ್ದೀರಿ? Grants from this Government. The Zilla Panchayat is a beggar of grants from the State Governments. Taluk Panchayat is a beggar of grants from this Government. Village Panchayat is a beggar of grants of this Government. We have a State Government. We are beggars of grants from the centre and in the 1983 Act and this Bill, there is no difference between the two. They have created three more beggars of grants. And that is the reason why I said, we are not creating units of self - Government.That is why your 1983 Act was also opposed to the Constitutional provisions and Art. 40 and this Bill also is opposed to Art 40 and so much this amendment is anti-constitution, Unconstitutional amendment, passed unanimously by the Hon. Two Houses of parliament. ಸಂವಿಧಾನಕ್ಕೆ ವಿರುದ್ಧವಾಗಿ ಒಂದು ತಿದ್ದುಪಡಿಯನ್ನು ಎರಡೂ ಮನೆಯವರು ಸರ್ವಾನುಮತದಿಂದ ಅಂಗೀಕರಿಸಿದ್ದಾರೆಂದರೆ ಇದಕ್ಕಿಂತಲೂ ನಗೆಪಾಟಲ ವಿಷಯ ಬೇರೆ ಏನೂ ಇಲ್ಲ. ಗಾಂಧೀಜಿ ನಮ್ಮನ್ನೆಲ್ಲಾ ನೋಡಿ ನಗುತ್ತಾ ಇರಬಹುದು. ಆ ಕಾರಣ ಈ ಮಸೂದೆಯನ್ನು ಸಂಪೂರ್ಣ ವಿರೊಧ ಮಾಡುತ್ತೇನೆ ಇದನ್ನು ವಿಕೇಂದ್ರೀಕರಣ ಕಾನೂನೆಂದು ಕರೆದಿದೆ. You can at best call this as a re- arrangement of administration. It is an administrative arrangement or an administrative re-arrangement and nothing else. It does not devolve any power to the lowest level units and that is why I call this as a Bill which is opposed to the Directive Principles of the State Policy.

ವಿಷಯ : (5) SSLC ಪರೀಕ್ಷೆಯ ಪತ್ರಿಕೆಗಳನ್ನು ಬದಲಾಯಿಸಿದ ಬಗ್ಗೆ

ಡಾ :. ಹೆಚ್. ಡಿ. ಲಮಾಣಿ(ಪ್ರಾಥಮಿಕ,ಮತ್ತು ಮಾಧ್ಯಮಿಕ ಶಿಕ್ಷಣ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಬೆಳಿಗ್ಗೆ ಈ ಕೊಶ್ಚನ್ ಪೇಪರ್ ಔಟ್ ಆಗಿದ್ದರ ಬಗ್ಗೆ ಮಾನ್ಯ ಸದಸ್ಯರು ಬಹಳಷ್ಟು ತೀವ್ರವಾದಂತಹ ಆಕ್ಷೇಪಣೆಯನ್ನು ಎತ್ತಿದ್ದರು. ಆ ಬಗ್ಗೆ ಮಾನ್ಯಸದಸ್ಯರಿಗೆ ಇವತ್ತಿನ ಕೊಶ್ಚನ್ ಪೇಪರ್ ಕಳುಹಿಸಿಕೊಡುತ್ತೇನೆ, ಬೆಳಗ್ಗೆ ನಮಗೊಂದು ಕೊಶ್ಚನ್ ಪೇಪರ್ ಅನ್ನು ತೋರಿಸಿ ಇವತ್ತು ಮಧ್ಯಾಹ್ನ 3.30 ಗಂಟೆಗೆ ಏನು ಪರೀಕ್ಷೆ ಚಾಲುವಾಗುತ್ತಿದೆ ಸೈನ್ಸ್ (2) ಬಯಾಲಜಿ ಅವು ಎಲ್ಲಾ ಔಟ್ ಆಗಿವೆಯೆಂದು ತಿಳಿದುಕೊಂಡು ಬಹಳ ತೀವ್ರತೆಯಿಂದ ಮಾನ್ಯಸದಸ್ಯರು ಪ್ರತಿಭಟಿಸಿದರು. ಇವತ್ತಿನ ಕೊಶ್ಚನ್ ಪೇಪರ್ ತಮ್ಮ ಎದುರಿಗೆ ತಂದಿದ್ದೇನೆ. ಈ ಕೊಶ್ಚನ್‌ಪೇಪರ್

ಅನ್ನು ತಾವು ನೋಡಬಹುದು. ಬೆಳಿಗ್ಗೆ ತಾವು ಕೊಟ್ಟ ಕೊಶ್ಚನ್‌ಪೇಪರ್ ಇದಲ್ಲ. ಕೊಶ್ಚನ್‌ಪೇಪರ್‌ಳು ಏನು ಔಟ್ ಆಗಿವೆಯೆಂದು ಹೇಳಿದ್ದಾರಲ್ಲ ಆ ತರಹ ಯಾವ ಕೊಶ್ಚನ್‌ಪೇಪರ್‌ಗಳು ಔಟ್ ಆಗಿಲ್ಲ. ಸುಮ್ಮನೆ ಯಾವುದೋ ಒಂದು ಕೊಶ್ಚನ್‌ಪೇಪರ್ ಅನ್ನು ಹಿಡಿದುಕೊಂಡು ಬಹಳ ತೀವ್ರವಾಗಿ ಇಲ್ಲಿ ದೊಡ್ಡದಾಗಿ ಕೊಶ್ಚನ್‌ಪೇಪರ್ ಔಟ್ ಆಗಿವೆಯೆಂದು ಹೇಳಿದರು. ಆದರೆ ಅಂತಹದ್ದು ಏನೂ ಆಗಿಲ್ಲ. ಇಡೀ ಕರ್ನಾಟಕ ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬಹಳ ಒಳ್ಳೆಯ ರೀತಿಯಿಂದ ನಡೆಯುತ್ತಿದೆ. ಅದನ್ನು ಮಾನ್ಯಸದಸ್ಯರಿಗೆ ನಾನು ಹೇಳಬಯಸುತ್ತಿದ್ದೇನೆ. ಕೊಶ್ಚನ್‌ಪೇಪರ್‌ಗಳು ನಮ್ಮ ಕಡೆಗೆ ಇವೆ. ತಾವು ಬೇಕಾದರೆ ನೋಡಬಹುದು.

ಪ್ರೊ ಎಂ. ಡಿ. ನಂಜುಂಡಸ್ವಾಮಿ : ನಮ್ಮ ಕರ್ತವ್ಯವನ್ನು ನಾವು ಮಾಡಿದ್ದೇವೆ ಅಷ್ಟೆ. ಏಕೆಂದರೆ ಅಕಸ್ಮಾತ್ ಆಗಿದ್ದರೆ ಸರಿಯಾಗಿ ಓದಿಕೊಂಡು ಬಂದಂತಹ ವಿದ್ಯಾರ್ಥಿಗಳಿಗೆ ತೊಂದರೆ ಯಾಗುತ್ತದೆಂದು ನಿಮ್ಮ ಗಮನವನ್ನು ಸೆಳೆದಿದ್ದೇವೆ. ಮೂರು ಗಂಟೆಗೆ ಇದರ ಸತ್ಯಾಂಶ ಗೊತ್ತಾಗುವುದು ಅನಂತರ ಕ್ರಮ ತೆಗೆದುಕೊಳ್ಳಲಿ ಎಂದು ಅಷ್ಟೇನೆ. ಮತ್ತೇನೂ ಅಲ್ಲ ಸುದ್ದಿ ಮಾಡುವುದಕ್ಕಲ್ಲ.

ಡಾ : ಹೆಚ್. ಡಿ. ಲಮಾಣಿ : ಅದರ ಬಗ್ಗೆ ಅಲ್ಲಿ ಇಲ್ಲಿ ಓಡಾಡಿ ಎಲ್ಲಾ ಡಿಡಿಪಿಐಗಳಿಗೆ ಫೋನ್ ಮಾಡಬೇಕಾಯಿತು. ಅಂತೂ ತಮ್ಮ ಎದುರಿಗೆ ಇದ್ದ ಪರಿಸ್ಥಿತಿಯನ್ನು ಇಟ್ಟಿದ್ದೇವೆ. ಅಂತಹದ್ದು ಏನೂ ಆಗಿಲ್ಲ.

ಕರ್ನಾಟಕ ಪಂಚಾಯತ್ ರಾಜ್ ವಿಧೇಯಕ 1993 (ಮುಂದುವರಿದ ಚರ್ಚೆ)

ಪ್ರೊ : ಎಂ. ಡಿ.ನಂಜುಂಡಸ್ವಾಮಿ : ಈ ಮಸೂದೆಗೆ ಸಂಬಂಧಪಟ್ಟಹಾಗೆ ಒಂದೇ ಒಂದು ವಿಷಯ ಹೇಳ ುವುದು ಇತ್ತು. ಯಾವರೀತಿಯಲ್ಲಿ ಅಧಿಕಾರೀಕರಣ ಹಾಗೆಯೇ ಉಳಿದಿದೆ ಈ ಮಸೂದೆಯಲ್ಲಿ ಅಂತ ಹೇಳ ುತ್ತಿದ್ದೇನೆ. ನಿಮ್ಮ ಸೆಕ್ಷನ್ 196ರ ಬಗ್ಗೆ ನನ್ನದೊಂದು ವಿಶೇಷ ಪ್ರಾರ್ಥನೆ. ಚೀಫ್ ಎಕ್ಸಿಕ್ಯುಟಿವ್ ಆಫೀಸರ್ ಎಂದು ಯಾವುದು ಇದೆ ಜಿಲ್ಲಾಪಂಚಾಯತ್‌ನಲ್ಲಿ, ನನ್ನ ಅಭಿಪ್ರಾಯದಲ್ಲಿ, he should also be from the state civil service onlyಅದಕ್ಕೆ ಕಾರಣಬೇರೆ ಯಾವುದೇ ಅಧಿಕಾರಿಯನ್ನು ನೇಮಕ ಮಾಡಿದರೂ ಅವರ ಮೇಲೆ ನಮಗೆ ಸಂಪೂರ್ಣ ನಿಯಂತ್ರಣ ಇರುವುದಿಲ್ಲ. ಆ ಕಾರಣ ಅವರು ನಮಗೆ ವಿಧೇಯ ರಾಗಿಯೂ ಕೆಲಸ ಮಾಡುವುದಿಲ್ಲ. ವಿಧೇಯಕರಾಗಿ ಕೆಲಸ ಮಾಡುವ ಸಾಧ್ಯತೆಗಳು ಕಡಿಮೆ. ಆ ಕಾರಣ ಸೇಕ್ಷನ್ 155 ರಲ್ಲಿ ಏನು ಮಾಡಿದ್ದೀರಿ Group A Officer of the State Service equal to the rank of Assistant Commissioner. Similarly, Officer of theState Civil Service equal or not below the rank of Deputy Commissioner. ಅಂತ ಆದರೆ ಒಳ್ಳೆಯದು. ಮಿಕ್ಕ ಬೇರೆಯವರನ್ನು ಅಲ್ಲಿ ಹಾಕಿದ್ದರೆ ಅಷ್ಟಾಗಿ ಅವರು ವಿಧೇಯತೆಯಿಂದ ಕೆಲಸ ಮಾಡುವುದಿಲ್ಲ ಎಂದು ನಮಗೆ ಬಂದಿರುವ ಮಾಹಿತಿ ಪ್ರಕಾರ ನಾನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.